

ಅಖಿಲ
ಭಾರತ
ಪತ್ರಿಕೆ
ಡಿಸೆಂಬರ್ 2016

# ಕಾಲಗತಿಯ ಚಕ್ರ

ಬೆಲೆ : 15/-



*Break, break down the last resistances,*
*consume the last impurities, blast the being*
*if need be, but let it be transfigured.*

\- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ - 580 007.
ಫೋನ್ : 0836 - 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು - 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು - 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು - 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು-560078.
ಫೋನ್ : 080 - 2244 9882
http://abp.sirinudi.org

## ಪರಿವಿಡಿ

### "ಕಾಲಗತಿಯ ಚಕ್ರ"

**ಅನು : ಡಾ. ಕೆ.ಎಸ್. ಆಮೂರ**
ವಿಧ್ವಂಸಕ ಕಾಲಗತಿ 6

**ಅನು : ಶ್ರೀ ವೀರೇಂದ್ರ ಸಿಂಪಿ**
ಕಾಲಗತಿಯ ತರಂಗಗಳು 14

**ಅನು : ಡಾ. ಕೆ.ಎಸ್. ಆಮೂರ**
ಜೀವನದ ಯುದ್ಧ ಭೂಮಿ 22

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಕಾಲಗತಿಯಲ್ಲಿ ದೇವನ ಚಲನೆ 31

**ಅನು : ಡಾ. ಕೆ.ಎಸ್. ಆಮೂರ**
ಭವಿಷ್ಯತ್ತನ್ನು ಕುರಿತು ಇಣುಕು ನೋಟಗಳು 37

**ವಾರ್ತಾಪತ್ರ** 63

## (All India Magazine) ಸಂಪಾದಕೀಯ:

ಕಾಲಗತಿ ಒಂದು ಒಗಟಾಗಿದೆ, ಅದು ಇಲ್ಲಿ (ಪೃಥ್ವಿಯ ಮೇಲೆ) ಎಲ್ಲ ವಸ್ತು–ವಿಷಯಗಳ ಮೇಲೆ ಆಳಿಕೆ ನಡೆಸುತ್ತದೆಯೇನೋ ಎನ್ನುವಂತೆ ತೋರಿಬರುತ್ತದೆ, ಆದರೆ ಆಳವಾದ ದೃಷ್ಟಿಗೆ ಅದು ಸರಳವಾಗಿ ಸನಾತನನ ಉಪಕರಣವಾಗಿದೆ. ಏಕೈಕ ಅನಂತ ಭಗವಂತ ತನ್ನನ್ನು ಸಂಕೀರ್ಣ ಶಕ್ತಿಗಳ ಲೀಲೆಯೊಂದಿಗೆ ಹಲವಾರು ಹಂತಗಳಲ್ಲಿ ಪ್ರಕಟಿಸುತ್ತಾನೆ, ಅದರ ಮೂಲಕ ಹಲವಾರು ವಿಶ್ವಗಳನ್ನು ಸೃಷ್ಟಿಸುತ್ತಾನೆ, ಅವುಗಳಲ್ಲಿ ಪ್ರತಿಯೊಂದೂ ದೇಶ, ಕಾಲಗಳನ್ನು ಹಾಗೂ ರಚನಾ ರೀತಿಗಳನ್ನು ಹೊಂದಿರುತ್ತದೆ ಈ ವಿಶ್ವವ್ಯಾಪಿ ಲೀಲೆಯಲ್ಲಿ ಲಯಬದ್ಧತೆ, ಪುನರಾವರ್ತಕ ಸೃಷ್ಟಿಯ ಚಕ್ರ, ಸಂರಕ್ಷಣೆ ಹಾಗೂ ವಿನಾಶ ಇವೆಲ್ಲ ಇವೆ, ಅವು ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ಸಂಭವಿಸುತ್ತವೆ. ಆದಾಗ್ಯೂ ನಮಗೆ ಮೇಲ್ಮೈಯಲ್ಲಿ ಕಂಡುಬರುವ ಈ 'ಅರ್ಥರಹಿತ' ಲೀಲೆಯ ಹಿಂದೆ ಸನಾತನನ ಲಯಬದ್ಧತೆಗಳ ಆಧಾರದ ರಹಸ್ಯವಿದೆ, ಅದು ಸನಾತನನು ವಿಶ್ವವನ್ನು ಅದರ ಮುನ್ನಡೆಯಲ್ಲಿ ಪೂರ್ಣತೆ ಹಾಗೂ ಪರಿಪೂರ್ಣತೆಗಳತ್ತ ಮುಂದೆ ಕರೆದೊಯ್ಯು–ವುದಾಗಿದೆ. ಈಗ ಭಯಾನಕವಾಗಿ ಹಾಗೂ ಉಗ್ರವಾಗಿ ಕಂಡುಬರುವ ಭಗವಂತನ ನೃತ್ಯ, ಮಹದಾನಂದವನ್ನು ಹಾಗೂ ಭಾವಾವೇಶವನ್ನು, ವ್ಯಕ್ತಿಗಳು, ರಾಷ್ಟ್ರಗಳು ಹಾಗೂ ನಾಗರಿಕತೆಗಳು ಇವುಗಳ ವಿಧಿಯ ಹಾಗೂ ಅದೃಷ್ಟದ ಹೊರಳುವಿಕೆ ಹಾಗೂ ಬುಡಮೇಲಾಗುವಿಕೆ ಇವುಗಳನ್ನು ನಿರ್ಧರಿಸುತ್ತದೆ. ವಿಶ್ವವ್ಯಾಪಿ ನರ್ತಕ ತನ್ನ ಲಯಬದ್ಧತೆಗಳನ್ನು ಬದಲಿಸಿದ ಹಾಗೆ ಸಾಮಾನ್ಯ ಜನರು, ಅಧಿಕ ಬಲದ ಸಾಮ್ರಾಟರು, ಹೂಗಳ ಚೆಲುವಾದ ಅರಳಿಕೊಳ್ಳುವಿಕೆ, ತೇಲುತ್ತಿರುವ ಸೂರ್ಯರು ಹಾಗೂ ಆಕಾಶಗಂಗೆಗಳು ಮೇಲೇಳುತ್ತವೆ, ಪತನಗೊಳ್ಳುತ್ತವೆ, ಜನ್ಮತಾಳುತ್ತವೆ ಮೃತವಾಗುತ್ತವೆ, ಈ ಸಂಚಿಕೆಯಲ್ಲಿ ಕಾಲಗತಿಯ ಚಕ್ರಗಳ ಹಿಂದಿರುವ ರಹಸ್ಯ ಕುರಿತು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಚೆಲ್ಲಿದ ಪ್ರಕಾಶವನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತೇವೆ.

*

## ವಿಶ್ವವ್ಯಾಪಿ ನರ್ತನ
## (ಶ್ರೀಕೃಷ್ಣನ ನರ್ತನ, ಕಾಳೀ ನರ್ತನ)

ವಿಶ್ವವ್ಯಾಪಿ ನರ್ತನದ ಎರಡು ಪರಿಮಾಣಗಳಿಹವು.
ಜೀವನದ ಅಪಾಯಕರ ಭಯಾನಕ ಹಾಗೂ ಮತ್ತು ಮಧುರ ಆಟದಲಿ
ನೋವು ದುಃಖ ಹಾಗೂ ಅವಕಾಶಗಳ ಲಯಬದ್ಧತೆಗಳಲ್ಲಿ
ನಾವು ಯಾವಾಗಲೂ ಕಾಳೀಮಾತೆಯ ಹೆಜ್ಜೆ ಸಪ್ಪಳ ಕೇಳುತಿಹೆವು.
ಪರದೆಯ ಹಿಂದಿರುವ ದೀಕ್ಷೆ ಪಡೆದವನ ಸತ್ವಪರೀಕ್ಷೆ,
ಮೃತ್ಯುವಿನ ಅಪ್ಪುಗೆಯೊಂದಿಗೆ ಲೀಲೆಯಲಿರುವ ಧೀರೋದಾತ್ತ ಆತ್ಮ
ವಿಧಿಯ ಕಡುಭಯದ ವ್ಯಾಯಾಮಶಾಲೆಯಲಿರುವ ಕುಸ್ತಿಪಟು
ಮತ್ತು ದೈವೀಕೃಪೆಗಿರುವ ಏಕೈಕ ಮಾರ್ಗದ ಯಜ್ಞಾಹುತಿ,
ದೈವೀ ರಹಸ್ಯಗಳಿಗೆ ಬೀಗದ ಕೈ ಎಂದು ಮಾಡಲಾದ ಮಾನವ
ದುಃಖಗಳು,
ಕಾಲಗತಿಯ ಕನಸಿನ ಅಪವ್ಯಯಗಳಿಂದ ಹೊರಗಿರುವ ಸತ್ಯದ ಇಕ್ಕಟ್ಟಾದ
ದಾರಿ,
ಭೌತದ್ರವ್ಯದ ಸಮಾಧಿಯಿಂದ ಮೇಲಕ್ಕೇಳಲು ಆತ್ಮದ ಏಳು ಮಾರ್ಗಗಳು,
ಇವೆಲ್ಲ ಅವಳ ದುರಂತ ವಿಷಯದ ಸಾಮಾನ್ಯ ಪ್ರಚೋದನೆಗಳಾಗಿಹವು
ಆದರೆ ಪ್ರಕೃತಿಯ ಮೂಲಕ ಯಾವಾಗ ಶ್ರೀಕೃಷ್ಣ ತನ್ನ ನರ್ತನದ
ಮಾಧುರ್ಯದ, ನಗುವಿನ, ದಿವ್ಯಾನಂದದ, ಪ್ರೇಮದ ಮೇಲಿರುವ
ಮುಖವಾಡವನು ತೆಗೆದು ಹಾಕುವನು?

**CWSA, 2/608, 590** **– ಶ್ರೀ ಅರವಿಂದರು**

*

## ಶಿವ

ಶಾಶ್ವತತೆಯ ಶುಭ್ರ ಶಿಖರದ ಮೇಲೆ
ಬರಿದಾದ ಅನಂತಗಳ ಏಕೈಕನ ಆತ್ಮ,
ಕಾವಲಿಗೊಳಗಾಗಿ ಅವನು ಶಾಂತಿಯ ಕಾವು ತೆರೆಯ ಮೂಲಕ

ತನ್ನ ರಹಸ್ಯ ನಗ್ನ ಭಾವೋತ್ಕರ್ಷತೆಯ ಏಕಾಕಿತನವನು ಕಾಪಾಡಿಕೊಂಡು
ಬರುತಿಹನು.
ಆದರೆ ಇರುವುದಕ್ಕಾಗಿ ಮಹದಾನಂದದ ಸ್ಪರ್ಶಕೊಳಗಾಗಿ
ಅವನು ಕೊನೆಯಿರದ ಆಳಗಳಿಗೆ ಅಡ್ಡಲಾಗಿ ನೋಡುವನು ಹಾಗೂ
ಅಚೇತನದ ನಿಶ್ಚಲನೀರವತೆಗಳ ಮಧ್ಯೆ ಚಿಂತಿಸುತ್ತ
ಅಧಿಕ ಬಲದ ದೈವೀಮಾತೆಯ ಮೂಕ ಆನಂದ ಸ್ಥಿತಿಯನು
ಅವಲೋಕಿಸುವನು.
ಈಗ ಅರ್ಧ ಎಚ್ಚತ್ತುಕೊಂಡ ಅವಳು ಅವನ ದೃಷ್ಟಿಗೆ ಗೋಚರಿಸುತಿಹಳು
ನಂತರ ಅವಳ ಹೃದಯದ ಬಡಿತಗಳ ಸಂಕಲ್ಪದ ಸುತ್ತುವರಿಕೆಯಿಂದ
ಪ್ರೇರಣೆಗೊಳಗಾಗಿ,
ಲಯಬದ್ಧತೆಯಿರುವ ಜಗತ್ತುಗಳು ಆ ಭಾವೋದ್ರೇಕದ ನರ್ತನವನು
ವರ್ಣಿಸುವವು.
ಅವಳಲಿ ಪ್ರಾಣ ಜಿಗಿದೆದ್ದು ಬರುತಿಹುದು, ಮನಸ್ಸು ಜನ್ಮತಾಳಿಹುದು
ದಿವ್ಯಾತ್ಮ ದಿವ್ಯಾತ್ಮದ ಅಪ್ಪುಗೆಯೊಳಗೆ ನೆಗೆತ ಮಾಡುವವರೆಗೆ ಅವನೇ ಆದ
ಅವಳು ತನ್ನ ಮುಖವನು ಅವನತ್ತ ಮೇಲಕ್ಕೆತ್ತುವಳು.

**CWSA, 2/590, 609** **– ಶ್ರೀ ಅರವಿಂದರು**

*

**ವಾಸುದೇವಃ ಸರ್ವಮಿತಿ**

ಈ ಪದಗುಚ್ಛದ ಅರ್ಥ ಇದನ್ನೇ ಗುರಿಯಾಗಿರಿಸಿಕೊಂಡಿದೆ, ವಾಸುದೇವಃ ಸರ್ವಮಿತಿ ಎಂದರೆ ವಿಶ್ವವಾದುದೆಲ್ಲ, ವಿಶ್ವದಲ್ಲಿರುವುದೆಲ್ಲ, ವಿಶ್ವಕ್ಕಿಂತಲೂ ಹೆಚ್ಚಾದುದೆಲ್ಲ ವಾಸುದೇವನಾಗಿದ್ದಾನೆ. ಗೀತೆ ಅವನ ವಿಶ್ವಾತೀತವಾದುದರ ಮೇಲೆ ಒತ್ತನ್ನಿರಿಸಿದೆ, ಏಕೆಂದರೆ ಮನಸ್ಸು ತನ್ನ ಅತ್ಯುಚ್ಚ ಗುರಿಯಿಂದ ತಪ್ಪಿಸಿಕೊಂಡು ಕೇವಲ ವಿಶ್ವದತ್ತ ಹೊರಳಿಕೊಂಡು ಉಳಿದುಕೊಳ್ಳುವಂತಾಗುತ್ತಿತ್ತು, ಇಲ್ಲವೆ ವಿಶ್ವದಲ್ಲಿರುವ ಭಗವಂತನನ್ನು ಕುರಿತು ಭಾಗಶಃ ಅನುಭವಕ್ಕೆ ಅಂಟಿಕೊಂಡು ಇರುವಂತಾಗುತ್ತಿತ್ತು. ಗೀತೆ ನಂತರ ಅವನ ವಿಶ್ವಂಭರ ಅಸ್ತಿತ್ವದ ಮೇಲೆ ಒತ್ತುಕೊಡುತ್ತದೆ, ಆ ಅಸ್ತಿತ್ವದಲ್ಲಿ ಎಲ್ಲವೂ ಚಲಿಸುತ್ತದೆ ಹಾಗೂ ಕಾರ್ಯಕೈಕೊಳ್ಳು–

ತ್ತದೆ. ಏಕೆಂದರೆ ಅದು ವಿಶ್ವವ್ಯಾಪಿ ಪ್ರಯತ್ನಕ್ಕೆ ಸಮರ್ಥನೆಯಾಗಿರುತ್ತದೆ ಹಾಗೂ ವಿಶಾಲ ಆಧ್ಯಾತ್ಮಿಕ ಸ್ವ–ಅರಿವುಳ್ಳದ್ದಾಗಿರುತ್ತದೆ, ಅದರಲ್ಲಿ ಕಾಲಗತಿಯ ದಿವ್ಯಾತ್ಮನೆಂದು ತನ್ನನ್ನು ಕಂಡುಕೊಂಡ ದೇವಪ್ರಮುಖ ತನ್ನ ವಿಶ್ವಂಭರ ಕಾರ್ಯಗಳನ್ನು ಕೈಕೊಳ್ಳುತ್ತಾನೆ. ಏಕೆಂದರೆ ಅದು ವಿಶ್ವವ್ಯಾಪಿ ಪ್ರಯತ್ನದ ಸಮರ್ಥನೆಯಾಗಿದೆ ಮತ್ತು ಅದು ವಿಶಾಲ ಆಧ್ಯಾತ್ಮಿಕ ಸ್ವ–ಅರಿವುಳ್ಳದ್ದಾಗಿದೆ, ಈ ನಂತರ ದೇವ ಪ್ರಮುಖ ಮಾನವ ದೇಹದಲ್ಲಿ ದೈವೀ ನಿವಾಸಿ ಎಂಬುದರ ಮೇಲೆ ಕಟ್ಟುನಿಟ್ಟಿನ ಪ್ರಾಧಾನ್ಯತೆ ನೀಡುತ್ತಾನೆ. ಏಕೆಂದರೆ ಅದು ವಿಶ್ವವ್ಯಾಪಿ ಪ್ರಯತ್ನದ ಸಮರ್ಥನೆಯಾಗಿರುತ್ತದೆ ಮತ್ತು ಅದು ವಿಶಾಲ ಆಧ್ಯಾತ್ಮಿಕ ಸ್ವ–ಅರಿವು, ಅದರಲ್ಲಿ ದೇವ ಪ್ರಮುಖ ಕಾಲಗತಿಯ ದಿವ್ಯಾತ್ಮನೆಂದು ತನ್ನನ್ನು ಕಂಡುಕೊಂಡು ತನ್ನ ವಿಶ್ವಂಭರ ಕಾರ್ಯವನ್ನು ಕೈಕೊಳ್ಳುತ್ತಾನೆ. ನಂತರ ಅದು ಒಂದು ಬಗೆಯ ನೇಮನಿಷ್ಠೆಯಿರುವುದಕ್ಕೆ ಒತ್ತುಕೊಟ್ಟು ಮಾನವ ದೇಹದಲ್ಲಿ ವಾಸಿಸುವ ದೈವೀ ನಿವಾಸಿ ದೇವ ಪ್ರಮುಖನನ್ನು ಒಪ್ಪಿಕೊಳ್ಳಲು ಒತ್ತಾಯ ತರುತ್ತದೆ. ಏಕೆಂದರೆ ಅವನು ಎಲ್ಲ ಅಸ್ತಿತ್ವಗಳಲ್ಲಿ ಅಂತರ್ಯಾಮಿಯಾಗಿದ್ದಾನೆ ಮತ್ತು ಅಂತರಂಗ–ದಲ್ಲಿರುವ ದೈವತ್ವವನ್ನು ಗುರುತಿಸದೆ ಹೋದರೆ ವೈಯಕ್ತಿಕ ಅಸ್ತಿತ್ವದ ದೈವೀ ಅರ್ಥವನ್ನು ತಪ್ಪಿಸಿಕೊಳ್ಳಲಾಗುತ್ತದೆ, ನಮ್ಮ ಪರಮೋಚ್ಚ ಆಧ್ಯಾತ್ಮಿಕ ಸಾಧ್ಯತೆಗಳು ಅದರ ಅತ್ಯಂತ ಶ್ರೇಷ್ಠ ಶಕ್ತಿ ದೊರಕಿಸುವ ಪ್ರೇರಣೆಯನ್ನು ಕಳೆದುಕೊಳ್ಳುತ್ತವೆ ಅಷ್ಟೇ ಅಲ್ಲ, ಆದರೆ ಮನುಕುಲದಲ್ಲಿ ಬೇರೊಂದು ಆತ್ಮದೊಂದಿಗೆ ಆತ್ಮದ ಸಂಬಂಧಗಳು ಕ್ಷುದ್ರ, ಸೀಮಿತ, ಅಹಂಕಾರದವು ಆಗಿ ಉಳಿದುಕೊಳ್ಳುತ್ತವೆ. ಕೊನೆಯದಾಗಿ ಅದು ವಿಶ್ವದಲ್ಲಿಯ ಎಲ್ಲ ವಸ್ತು–ವಿಷಯಗಳಲ್ಲಿ ದೈವೀ ಪ್ರಕಟಣೆ ಇರುವುದರ ಮೇಲೆ ತುಂಬಾ ವಿಸ್ತಾರವಾಗಿ ಒತ್ತು ನೀಡುತ್ತದೆ ಮತ್ತು ಇರುವುದೆಲ್ಲವನ್ನು ದೈವೀ ಪ್ರಮುಖನೊಬ್ಬನ ಪ್ರಕೃತಿ, ಸಾಮರ್ಥ್ಯ ಹಾಗೂ ಪ್ರಕಾಶ ಇವುಗಳಿಂದ ಪಡೆಯುವುದನ್ನು ದೃಢೀಕರಿಸುತ್ತದೆ. ಏಕೆಂದರೆ ಆ ನೋಡುವಿಕೆ ಕೂಡ ದೇವನನ್ನು ಕುರಿತಾಗಿರುವ ಜ್ಞಾನಕ್ಕಾಗಿ ಅವಶ್ಯವಾಗಿರುತ್ತದೆ, ಅದರ ಮೇಲೆ ದೇವನತ್ತ ಇಡೀ ಸತ್ತೆಯ ಹಾಗೂ ಇಡೀ ಸ್ವಭಾವದ ಸಮಗ್ರ ಹೊರಳುವಿಕೆ, ಜಗತ್ತಿನಲ್ಲಿ ದೈವೀ ಸಾಮರ್ಥ್ಯದ ಕಾರ್ಯಗಳನ್ನು ಮನುಷ್ಯ ಸ್ವೀಕಾರ ಮಾಡುವಿಕೆ, ಅವನ ಮನೋಭಾವ ಹಾಗೂ ಸಂಕಲ್ಪ ಇವುಗಳನ್ನು ದೇವ–ಕ್ರಿಯೆಯ ಮಾದರಿಯಲ್ಲಿ ಹೊಸದಾಗಿ ರೂಪಿಸುವ ಸಾಧ್ಯತೆ, ಆರಂಭದಲ್ಲಿ ವಿಶ್ವಾತೀತವಾದದ್ದು, ಉದ್ದೇಶದಲ್ಲಿ

ವಿಶ್ವವ್ಯಾಪಿಯಾಗಿರುವುದು ವ್ಯಕ್ತಿಗತ ಜೀವದಿಂದ ಕಳಿಸಿಕೊಟ್ಟಿರುವಿಕೆ ಇದೆಲ್ಲ ಸ್ಥಾಪಿತಗೊಂಡಿರುತ್ತದೆ.

**CWSA, 19/316** **– ಶ್ರೀ ಅರವಿಂದರು**

*

## ವಿಧ್ವಂಸಕ ಕಾಲಗತಿ

### ಕುರುಕ್ಷೇತ್ರವನ್ನು ಕುರಿತು ಸ್ಮರಣಾರ್ಹ ಹಾಗೂ ಭವ್ಯವಾದ ದರ್ಶನ

ಶ್ರೀಕೃಷ್ಣ ತನ್ನನ್ನು ಪ್ರಕಟಿಸುವುದು ಕಾಲಗತಿಯ ನಿಧಾನ ವಿಧಾನದ ಹಾಗಲ್ಲ. ಅದು ಕಾಲಧರ್ಮ ಒಂದು ಕ್ಷಣಕಾಲದಲ್ಲಿ ಪರಾಕಾಷ್ಠೆ ಕಂಡುಕೊಂಡ ರೀತಿಯದು, ಹಲವಾರು ದಶಕಗಳ ಕಾಲ ಕಾಳಜಿಪೂರ್ವಕ ತಯಾರಿ ಮಾಡಿಕೊಂಡು ಇರಬೇಕಾದಂತಹದು, ಹಾಗಾದಾಗ ಶ್ರೀಕೃಷ್ಣ ತನ್ನನ್ನು ಅರ್ಜುನನಿಗೆ ತೋರಿಸಿ–ಕೊಡುತ್ತಾನೆ. ಎಲ್ಲರೂ ಕುರುಕ್ಷೇತ್ರದ ಅನಾಹುತದತ್ತ ಅನಿವಾರ್ಯವಾಗಿ ತಲುಪುತ್ತಿದ್ದರು, ಜನರಿಗೆ ಅದು ತಿಳಿದಿರಲಿಲ್ಲ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿದ್ದ ಪ್ರತಿಯೊಂದನ್ನು ಮಾಡಬಲ್ಲವರು ತಮ್ಮ ಕಾರ್ಯದ ಮೂಲಕ ಇಲ್ಲವೆ ಕಾರ್ಯಕೈಕೊಳ್ಳದೇ ಇರುವುದರ ಮೂಲಕ ಅದರ ಬರುವಿಕೆಗೆ ಸಹಾಯ ಮಾಡಿದರು. ಅದರ ಇಣುಕು ನೋಟ ಪಡೆದವರು ವಿಧಿಯ ಗಾಲಿಗಳನ್ನು ತಡೆಯಲು ವ್ಯರ್ಥ ಪ್ರಯತ್ನ ಮಾಡಿದರು. ಶ್ರೀಕೃಷ್ಣನೇ ಸ್ವತಃ ನಿಷ್ಕಾಮ ಕರ್ಮಯೋಗಿಯಾಗಿ ಪರಿಣಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೆ ತನ್ನ ಕರ್ತವ್ಯವನ್ನು ಪಾಲಿಸಿದನು. ಹಸ್ತಿನಾಪುರಕ್ಕೆ ಅವನು ಆಶಾರಹಿತ ರಾಯಭಾರಕ್ಕೆ ಹೋಗಿದ್ದ, ಆದರೆ ಕಾಲಧರ್ಮ ಅದೆಲ್ಲವನ್ನು ಸೋಲಿಸಿಬಿಟ್ಟಿತು. ಕೇವಲ ಅನಂತರ ಜನರು ನೋಡಿದ್ದೇನೆಂದರೆ ನದಿಗಳು ಸಮುದ್ರದತ್ತ ಧಾವಿಸುವಂತೆ, ಪತಂಗಗಳು ಉರಿಯುತ್ತಿರುವ ಜ್ವಾಲೆಯತ್ತ ರಭಸದಿಂದ ಹೋಗುತ್ತಿರುವಂತೆ ಎಲ್ಲ ಭವ್ಯ ಸಾಮರ್ಥ್ಯಗಳಿದ್ದ ಹಾಗೂ ದುರಾಗ್ರಹವಿದ್ದ ಭಾರತೀಯ ಜಗತ್ತು, ಅದರ ರಾಜರುಗಳ ವಂಶಗಳು ಹಾಗೂ ಅವರ ಆಯುಧಗಳು, ರಥಗಳು ಹಾಗೂ ದೈತ್ಯಾಕಾರದ ಸೈನ್ಯಗಳು ವಿಧ್ವಂಸಕನ ತೆರೆದ ಬಾಯಲ್ಲಿ ರಭಸದಿಂದ ಸಾಗುತ್ತಿದವು, ಅಲ್ಲಿ ಅವನ ಅಧಿಕ ಬಲದ ದವಡೆಯಲ್ಲಿ ಸಿಕ್ಕಿಹಾಕಿಕೊಂಡು ಅವನ ಕಟಕಟಿಸುವ ಹಲ್ಲುಗಳಿಂದ ಛಿದ್ರಛಿದ್ರವಾಗುವುದಿತ್ತು. ಸನಾತನನ ಲೀಲೆಯಲ್ಲಿ ಭಯಾನಕವಾದ

ಚಲನೆಗಳಿರುತ್ತವೆ, ಹಾಗೆಯೇ ಮಧುರವಾದ, ಸುಂದರವಾದ ಚಲನೆಗಳಿರುತ್ತವೆ: ಬೃಂದಾವನದಲ್ಲಿಯ ನರ್ತನ ಕುರುಕ್ಷೇತ್ರದಲ್ಲಿಯ ಮೃತ್ಯುವಿನ ನರ್ತನವಿಲ್ಲದೆ ಪೂರ್ಣವಾಗದು, ಏಕೆಂದರೆ ಪ್ರತಿಯೊಂದು ಜಗತ್ತಿನ ಶ್ರೇಷ್ಠ ಸಾಮರಸ್ಯದ ಭಾಗವಾಗಿರುತ್ತದೆ, ಅದು ತಿಕ್ಕಾಟದಿಂದ ಒಮ್ಮನಸ್ಸಿನತ್ತ, ದ್ವೇಷ ಹಾಗೂ ಹೋರಾಟಗಳಿಂದ ಪ್ರೇಮದತ್ತ ಹಾಗು ಸಹೋದರತ್ವದತ್ತ, ಅನಿಷ್ಟದಿಂದ ಉತ್ಕ್ರಾಂತಿಯ ನೆರವೇರಿಕೆಯತ್ತ ಪ್ರಗತಿ ಸಾಧಿಸುತ್ತದೆ, ಈ ಉತ್ಕ್ರಾಂತಿ, ವೇದನೆ ಹಾಗೂ ಪಾಪ ಇವು ಸೌಂದರ್ಯ, ದಿವ್ಯಾನಂದ ಹಾಗೂ ಒಳ್ಳೆಯದು ಇವುಗಳಾಗುವಂತೆ ಪರಿವರ್ತನೆ ಹೊಂದುವುದರ ಮೂಲಕ ಆಗುತ್ತದೆ: ಶಿವಮ್, ಶಾಂತಮ್, ಶುದ್ಧಮ್, ಆನಂದಮ್.

**CWSA, 13/30–31** **– ಶ್ರೀ ಅರವಿಂದರು**

*

**ಪ್ರಗತಿಗೆ ವಿನಾಶ ಮೊದಲ ಷರತ್ತು**

ದೇವಪ್ರಮುಖ ಉತ್ತರ ನೀಡುತ್ತಾನೆ; ವಿನಾಶ ನನ್ನ ಕಾರ್ಯಗತಿಗಳ ಸಂಕಲ್ಪ, ಅವುಗಳೊಂದಿಗೆ ನಾನಿಲ್ಲಿ ಕುರುಕ್ಷೇತ್ರದಲ್ಲಿ ನಿಂತಿದ್ದೇನೆ, ಅದು ಧರ್ಮವನ್ನು ಕಾರ್ಯಗತಗೊಳಿಸುವ ಕ್ಷೇತ್ರ, ಮಾನವ ಕ್ರಿಯೆಯ ಕ್ಷೇತ್ರ– ಧರ್ಮಕ್ಷೇತ್ರೇ ಕುರುಕ್ಷೇತ್ರೇ ಎಂಬ ವರ್ಣನಾತ್ಮಕ ಪದಗುಚ್ಛವನ್ನು ಹಾಗೆ ತರ್ಜುಮೆ ಮಾಡಬಹುದು– ವಿಶ್ವ–ವಿಸ್ತಾರದ ವಿನಾಶ, ಕಾಲಗತಿಯ–ದಿವ್ಯಾತ್ಮನ ವಿಧಾನದಲ್ಲಿ ಅದು ಬಂದಿದೆ. ನನ್ನಲ್ಲಿ ಪೂರ್ವಭಾವಿಯಾಗಿ ನೋಡುವ ಉದ್ದೇಶವಿದೆ, ಅದು ವಿಫಲಗೊಳ್ಳದೆ ತನ್ನ ನೆರವೇರಿಕೆ ಕಂಡುಕೊಳ್ಳುತ್ತದೆ ಮತ್ತು ಯಾವುದೇ ಮಾನವ ಸತ್ತೆಯ ಭಾಗವಹಿಸುವಿಕೆ ಇಲ್ಲವೆ ಅನುಪಸ್ಥಿತಿ ಅದನ್ನು ತಡೆಯಲಾಗದು, ಬದಲು ಮಾಡಲಾರದು, ಮಾರ್ಪಡಿಸಲಾರದು; ಪೃಥ್ವಿಯ ಮೇಲಿನ ಯಾವುದೇ ಮಾನವ ಸತ್ತೆ ಕೈಕೊಳ್ಳುವುದಕ್ಕಿಂತ ಮೊದಲೇ ಎಲ್ಲವನ್ನೂ ಈಗಾಗಲೇ ನನ್ನ ಸಂಕಲ್ಪದ ಸನಾತನ ಕಣ್ಣುಗಳಿಂದ ಕೈಕೊಳ್ಳಲಾಗಿರುತ್ತದೆ. ದೈವೀ ಕಾಲಗತಿಯಾಗಿ ನಾನು ಎಲ್ಲ ಹಳೆಯ ರಚನೆಗಳನ್ನು ನಾಶಮಾಡಬೇಕಾಗಿರುತ್ತದೆ ಮತ್ತು ಒಂದು ಹೊಸ, ಅಧಿಕ ಬಲವಿರುವ ಹಾಗೂ ಭವ್ಯವಾದ ರಾಜ್ಯವನ್ನು ನಿರ್ಮಾಣ ಮಾಡುವುದಿರುತ್ತದೆ.

ದೈವೀ ಕಾಲರಹಿತನಾದವನು ದೈವೀ ಕಾಲಗತಿಯಾಗಿ ಮತ್ತು ವಿಶ್ವದ ದಿವ್ಯಾತ್ಮನಾಗಿ ಪ್ರಕಟವಾಗಿರುತ್ತಾನೆ ಅವನಿಂದ ಕ್ರಿಯೆಗಾಗಿ ಆಜ್ಞೆ ಮುಂದುವರಿ–

ಯುತ್ತದೆ. ಏಕೆಂದರೆ ನಿಶ್ಚಿತವಾಗಿ ದೇವಪ್ರಮುಖ "ಸತ್ತೆಗಳನ್ನು ನಾಶಮಾಡುವ ದೈವೀ ಕಾಲಗತಿ ನಾನು" ಎಂದು ಹೇಳಿದಾಗ ಅದರರ್ಥ ಅವನು ಕೇವಲ ಕಾಲಗತಿಯ ದಿವ್ಯಾತ್ಮ ಮತ್ತು ಕಾಲಗತಿಯ ದಿವ್ಯಾತ್ಮನ ಇಡೀ ಸಾರ ವಿನಾಶವೆಂದು ಆಗುವುದಿಲ್ಲ. ಆದರೆ ಇದೇ ಸದ್ಯದ ಅವನ ಕಾರ್ಯಗತಿಗಳ ಸಂಕಲ್ಪ, ಪ್ರವೃತ್ತಿ. ವಿನಾಶ ಯಾವಾಗಲೂ ಒಂದೇ ಕಾಲಕ್ಕೆ ಆಗುವ ಇಲ್ಲವೆ ಪರ್ಯಾಯವಾಗಿ ಬರುವ ಅಂಶ, ಅದು ಸೃಷ್ಟಿಯೊಡನೆ ಹೆಜ್ಜೆ ಇರಿಸುತ್ತದೆ ಮತ್ತು ವಿನಾಶದಿಂದ ಹಾಗೂ ನವೀಕರಿಸುವುದರಿಂದ ಜೀವನದ ದೈವೀ ಪ್ರಭು ರಕ್ಷಣೆ ಮಾಡುವ ತನ್ನ ದೀರ್ಘ ಕಾರ್ಯವನ್ನು ಕೈಕೊಳ್ಳುತ್ತಾನೆ. ಹೆಚ್ಚಿನದನ್ನು ಹೇಳುವುದಾದರೆ ಪ್ರಗತಿಗಾಗಿ ವಿನಾಶ ಮೊದಲ ಷರತ್ತಾಗಿರುತ್ತದೆ. ಆಂತರಿಕವಾಗಿ ತನ್ನ ನಿಮ್ನ ಸ್ವ-ನಿರ್ಮಾಣಗಳನ್ನು ನಾಶ ಮಾಡದ ಮನುಷ್ಯ ಶ್ರೇಷ್ಠತರ ಅಸ್ತಿತ್ವದತ್ತ ಏರಿ ಹೋಗಲಾರ. ಬಾಹ್ಯದಲ್ಲಿಯೂ ಕೂಡ ದೇಶ ಇಲ್ಲವೆ ಸಮಾಜ ಇಲ್ಲವೆ ಕುಲ ದೀರ್ಘಕಾಲದವರೆಗೆ ತನ್ನ ಗತಕಾಲದ ರೂಪಗಳನ್ನು ನಾಶಮಾಡುವ ಇಲ್ಲವೆ ಬದಲು ಮಾಡುವ ಕ್ರಿಯೆಯಿಂದ ಕುಗ್ಗಿಕೊಂಡರೆ ಅದೇ ನಾಶವಾಗುತ್ತದೆ, ಕೊಳೆಯುತ್ತದೆ ಮತ್ತು ಹಾಳಾಗುತ್ತದೆ ಮತ್ತು ಅದರ ಭಗ್ನಾವಶೇಷದಿಂದ ಇತರ ದೇಶಗಳು, ಸಮಾಜಗಳು, ಕುಲಗಳು ರೂಪ ತಾಳುತ್ತವೆ. ಹಳೆಯ ದೈತ್ಯ ನೆಲೆಸಿಗರನ್ನು ನಾಶ ಮಾಡುವುದರ ಮೂಲಕ ಮನುಷ್ಯ ಪೃಥ್ವಿಯ ಮೇಲೆ ತನಗಾಗಿ ಸ್ಥಾನ ದೊರಕಿಸಿದ. ದೈತ್ಯರನ್ನು ನಾಶಮಾಡಿ ದೇವರುಗಳು ವಿಶ್ವದಲ್ಲಿ ದೈವೀ ನಿಯಮದ ಮುಂದುವರಿಕೆಯನ್ನು ಪಾಲಿಸಿಕೊಂಡು ಬರುತ್ತಾರೆ.

*

**ಉತ್ಕ್ರಾಂತಿಕಾರಕ ಮುನ್ನಡೆ**

ಕಾಲ ಪರಿಪಕ್ವವಾಗುವುದಕ್ಕಿಂತ ಮೊದಲು ಯಾರಾದರೂ ಈ ಸಮರ ಹಾಗೂ ವಿನಾಶ ಇವುಗಳ ನಿಯಮವನ್ನು ತೊಡೆದು ಹಾಕಲು ಪ್ರಯತ್ನಿಸಿದರೆ ಅವನು ವಿಶ್ವ-ದಿವ್ಯಾತ್ಮನ ಶ್ರೇಷ್ಠತರ ಸಂಕಲ್ಪದ ವಿರುದ್ಧ ವ್ಯರ್ಥವಾಗಿ ಹೆಣಗುತ್ತಾನೆ. ಯಾರಾದರೂ ತನ್ನ ನಿಮ್ನ ಅಂಗಗಳ ದೌರ್ಬಲ್ಯದಲ್ಲಿ ಅದರಿಂದ ಹೊರಳಿ-ಕೊಂಡರೆ- ಅರ್ಜುನ ಮೊದಲು ಹಾಗೆ ಮಾಡಿದ್ದ ಹಾಗಾಗಿ ಅವನ ಕುಗ್ಗುವಿಕೆಯನ್ನು ಕ್ಷುದ್ರ ಹಾಗೂ ಮಿಥ್ಯೆಯ ಮರುಕ, ಅಕೀರ್ತಿಕರ, ಅನಾರ್ಯ, ಸ್ವರ್ಗೀಯವಲ್ಲದ ಹೃದಯದ ದೌರ್ಬಲ್ಯ, ಆತ್ಮದ ನಿರ್ವೀಯತೆ ಕ್ಲೈಬ್ಯಮ್,

ಕ್ಷುದ್ರಮ್, ಹೃದಯ ದೌರ್ಬಲ್ಯಮ್ ಎಂದು ಹೀಯಾಳಿಸಲಾಗಿತ್ತು– ಅದು ನಿಜವಾದ ಸದ್ಗುಣವನ್ನು ತೋರಿಸುವುದಲ್ಲ, ಆದರೆ ಅದು ಪ್ರಕೃತಿಯ, ಕ್ರಿಯೆಯ ಹಾಗೂ ಅಸ್ತಿತ್ವದ ಉಗ್ರ ಸತ್ಯಗಳನ್ನು ಎದುರಿಸುವುದಕ್ಕೆ ಆಧ್ಯಾತ್ಮಿಕ ಧೈರ್ಯದಲ್ಲಿರುವ ಕೊರತೆ. ಮನುಷ್ಯ ಕೇವಲ ಯುದ್ಧದ ನಿಯಮವನ್ನು ತನ್ನ ಅಮರತ್ವದ ಶ್ರೇಷ್ಠ ನಿಯಮವನ್ನು ಶೋಧಿಸುವುದರ ಮೂಲಕ ಮೀರಿ ಹೋಗಬಲ್ಲನು. ಅದು ಯಾವಾಗಲೂ ಅಸ್ತಿತ್ವದಲ್ಲಿರುವಲ್ಲಿ ಅದನ್ನು ಶೋಧಿಸುವ ಜನರಿರುತ್ತಾರೆ ಮತ್ತು ಅದನ್ನು ಪ್ರಾಥಮಿಕವಾಗಿ ಕಂಡುಕೊಳ್ಳಬೇಕಾಗಿರುತ್ತದೆ. ಅದಿರುವುದು ಪರಿಶುದ್ಧ ಆತ್ಮದ ಉಚ್ಚತರ ಹರವುಗಳಲ್ಲಿ, ಮತ್ತು ಅದನ್ನು ಕಂಡುಕೊಳ್ಳಲು ಮೃತ್ಯುವಿನ ನಿಯಮದ ಆಳಿಕೆಗೊಳಗಾದ ಜಗತ್ತಿನಿಂದ ಅವರು ದೂರ ಹೊರಳಿಕೊಂಡಿರುತ್ತಾರೆ. ಅದು ವೈಯಕ್ತಿಕ ಪರಿಹಾರ, ಮನುಕುಲಕ್ಕೆ ಹಾಗೂ ಜಗತ್ತಿಗೆ ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲ, ಇಲ್ಲವೆ ಅದಕ್ಕೂ ಹೆಚ್ಚಾಗಿ ಅದು ಉಂಟು ಮಾಡುವ ವ್ಯತ್ಯಾಸವೆಂದರೆ ಅವರು ಉತ್ಕ್ರಾಂತಿಯ ಯಾತನೆಯಲ್ಲಿ ಮುಂದುವರಿದು ಹೋಗಲು ಸಹಾಯ ಮಾಡಬಹುದಾದ ಆಧ್ಯಾತ್ಮಿಕ ಸಾಮರ್ಥ್ಯ ದೊರಕಿಸುವುದರಿಂದ ವಂಚಿತರಾಗುತ್ತಾರೆ.

**CWSA, 19/383–85** **– ಶ್ರೀ ಅರವಿಂದರು**

*

**ಅವಿತುಕೊಂಡ ದೈವೀ ಸತ್ಯ**

ಭಗವಂತನ ಹೆಸರಿನಿಂದ, ಅವನಿಗೆ ಸಮೀಪಿಸುವುದರಿಂದ ಜಗತ್ತಿನ ಹೃದಯ ಸಂತೋಷಪಡುವಂತೆ ಹಾಗೂ ಹರ್ಷಕಂಡುಕೊಳ್ಳುವಂತೆ ಮಾಡುವ ಏನೋ ಒಂದಿದೆ. ಅದು ಅದರ ಗಾಢವಾದ ಅರ್ಥವಾಗಿದ್ದು ನಾವು ದೈವೀಮಾತೆಯಾದ ಕಪ್ಪು ಮುಖದ ಕಾಳೀದೇವಿಯಲ್ಲಿ ಅದನ್ನು ಕಂಡುಕೊಳ್ಳುವಂತೆ ಮಾಡುತ್ತದೆ ಮತ್ತು ಜೀವಿಗಳ ದೈವೀಮೈತ್ರಿಣಿಯ ರಕ್ಷಿಸುವ ತೋಳುಗಳಿರುವುದನ್ನು, ಅನಿಷ್ಟದ ಮಧ್ಯೆ ಪರಿಶುದ್ಧ, ಬದಲಿಸಲಾಗದ ದೈವೀಅನುಕಂಪವಿರುವುದನ್ನು ಹಾಗೂ ಮೃತ್ಯುವಿನ ಮಧ್ಯೆ ಅಮರತ್ವದ ಪ್ರಭು ಇರುವುದನ್ನು ಗ್ರಹಿಕೆಗೆ ತಂದುಕೊಳ್ಳುತ್ತೇವೆ. ದೈವೀಕ್ರಿಯೆಯ ರಾಜನ ಭಯಾನಕತೆಯಿಂದ ರಾಕ್ಷಸರು, ಅಂಧಕಾರದ ಭೀಕರ ದೈತ್ಯ ಸಾಮರ್ಥ್ಯಗಳು ವಿನಾಶಕ್ಕೊಳಗಾಗಿ, ಸೋಲಿಗೊಳಗಾಗಿ ಪಲಾಯನ ಮಾಡುತ್ತವೆ. ಆದರೆ ಸಿದ್ಧರು, ಸಂಪೂರ್ಣ ಹಾಗೂ ಪರಿಪೂರ್ಣರಾದವರು,

ಅರಿತುಕೊಂಡವರು, ಅಮರನ ಹೆಸರುಗಳಲ್ಲಿ ಹಾಡುತ್ತಾರೆ ಹಾಗೂ ಅವನ ಸತ್ತೆಯ ಸತ್ಯದಲ್ಲಿ ಜೀವಿಸುತ್ತಾರೆ, ದೇವನ ಪ್ರತಿಯೊಂದು ರೂಪದ ಮುಂದೆ ಬಾಗಿ ನಮಸ್ಕರಿಸುತ್ತಾರೆ ಮತ್ತು ಪ್ರತಿಯೊಂದು ರೂಪ ಏನನ್ನು ಪ್ರತಿಷ್ಠಾಪಿಸುತ್ತದೆ, ಯಾವ ಪ್ರಾಮುಖ್ಯತೆ ನೀಡುತ್ತದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ. ನಾಶಗೊಳಿಸ–ಬೇಕಾದುದನ್ನು, ಅನಿಷ್ಟವಾದದ್ದನ್ನು ಅಜ್ಞಾನವನ್ನು, ನಿಶೆಯ ಪರದೆ ಹಾಕುವವರನ್ನು, ರಾಕ್ಷಸೀಯ ಸಾಮರ್ಥ್ಯಗಳನ್ನು ಹೊರತುಪಡಿಸಿ ಬೇರೆ ಯಾವುದನ್ನೂ ಕುರಿತು ಭಯಪಡಬೇಕಾದ ಆವಶ್ಯಕತೆ ಇರುವುದಿಲ್ಲ. ಭಯಾನಕವಾದ ರುದ್ರನ ಚಲನೆ ಹಾಗೂ ಕ್ರಿಯೆ ಇವು ಪರಿಪೂರ್ಣತೆ, ದೈವೀಪ್ರಕಾಶ ಹಾಗೂ ಸಂಪೂರ್ಣತೆಗಳತ್ತ ಇರುತ್ತವೆ.

ಏಕೆಂದರೆ ದಿವ್ಯಾತ್ಮನಾದ ಭಗವಂತ ಬಾಹ್ಯರೂಪದಲ್ಲಿ ಕಾಲಗತಿಯ ವಿಧ್ವಂಸಕನಾಗಿರುತ್ತಾನೆ, ಆದರೆ ತನ್ನಲ್ಲಿ ಅನಂತನಾದವನು, ವಿಶ್ವವ್ಯಾಪಿ ದೇವರುಗಳ ದೈವೀಪ್ರಭು, ಅವನಲ್ಲಿ ಜಗತ್ತು ಹಾಗೂ ಅದರ ಎಲ್ಲ ಕ್ರಿಯೆ ಭದ್ರವಾಗಿ ಆಸೀನವಾಗಿರುತ್ತವೆ. ಅವನು ಮೂಲನಾದವನು ಮತ್ತು ಎಂದೆಂದಿಗೂ ಜನ್ಮನೀಡುವ ಸೃಷ್ಟಿಕರ್ತ, ಸೃಷ್ಟ್ಯಾತ್ಮಕ ದೈವೀಸಾಮರ್ಥ್ಯದ ಆಕಾರ ತಳೆದು ಬ್ರಹ್ಮನಿಗಿಂತ ಶ್ರೇಷ್ಠನಾದವನು, ಅದನ್ನು ಅವನು ವಿಷಯಗಳ ರೂಪದಲ್ಲಿ, ತ್ರಿಮೂರ್ತಿತ್ವದಲ್ಲಿ ತೋರಿಸಿಕೊಡುತ್ತಾನೆ; ಸೃಷ್ಟಿ, ಪೋಷಿಸುವಿಕೆ (ಸ್ಥಿತಿ) ಹಾಗೂ ವಿನಾಶ (ಲಯ) ಇವುಗಳೊಡನೆ ವೈವಿಧ್ಯಮಯವಾಗಿ ಸರಿದೂಗಿಸಿಕೊಂಡು ಹೋಗುತ್ತದೆ. ನಿಜವಾದ ದೈವೀ ಸೃಷ್ಟಿ ಶಾಶ್ವತವಾಗಿರುತ್ತದೆ, ಅದು ಅನಂತದಲ್ಲಿ ಶಾಶ್ವತವಾಗಿ ಸಾಂತ ವಸ್ತು–ವಿಷಯಗಳಾಗಿ ಪ್ರಕಟವಾಗಿರುತ್ತದೆ, ಆ ದಿವ್ಯಾತ್ಮ ಅಸಂಖ್ಯಾತ ಆತ್ಮಗಳ ಅನಂತತೆಯಲ್ಲಿ ಹಾಗೂ ಅವುಗಳ ಕ್ರಿಯೆಗಳ ಅದ್ಭುತದಲ್ಲಿ ಅವುಗಳ ರೂಪಗಳ ಸೌಂದರ್ಯದಲ್ಲಿ ತನ್ನನ್ನು ಎಂದೆಂದಿಗೂ ಮರೆಯಲ್ಲಿರಿಸಿ–ಕೊಂಡಿರುತ್ತಾನೆ ಹಾಗೂ ಪ್ರಕಟಗೊಳಿಸುತ್ತ ಇರುತ್ತಾನೆ. ಅವನು ಬದಲಾಗದೇ ಇರುವ ಸನಾತನ, ಅವನು ಪ್ರಕಟವಾದುದರ ಇದೆ, ಎಂದೆಂದಿಗೂ ಪ್ರಕಟವಾಗದೆ ಇರುವುದರ ಇಲ್ಲ, ಹಿಂದೆ ಇದ್ದ ವಸ್ತುಗಳ ಇದೆ, ಮತ್ತು ಈಗ ತೋರಿಬರದೆ ಇದ್ದವುಗಳ ಇಲ್ಲ, ಸದ್ಯ ಇವೆ ಎಂಬುದರ ಇದೆ, ಹಾಳಾಗುವ ಅದೃಷ್ಟ ಹೊಂದಿದೆ ಎಂಬುದರ ಇಲ್ಲ, ಮುಂದೆ ಇರುವುದು ಎಂಬುದರ ಇದೆ ಮತ್ತು ಸಾಗಿ ಹೋಗುವುದು ಎಂಬುದರ ಇಲ್ಲ. ಈ ರೀತಿಯ ದ್ವಿವಿಧ ತೋರಿಕೆ ಹೊಂದಿದ್ದಾನೆ. ಆದರೆ ಇವುಗಳಾಚೆಗೆ ಇರುವುದೆಲ್ಲ ಆ ಪರಮೋಚ್ಚನೇ ಆಗಿದ್ದಾನೆ, ಎಲ್ಲವೂ,

ಯಾವಾಗಲೂ ಉಪಸ್ಥಿತಿಯಲ್ಲಿರುವ ಏಕೈಕ ಕಾಲಗತಿಯ ಅನಂತತೆಯಲ್ಲಿ ಬದಲಾಗುವ ಎಲ್ಲ ವಸ್ತು–ವಿಷಯಗಳನ್ನು ಅವನು ಹಿಡಿದಿಟ್ಟುಕೊಂಡಿರುತ್ತಾನೆ, ಅವನು ಬದಲಾಗದ ತನ್ನ ಆತ್ಮವನ್ನು ಕಾಲರಹಿತ ಶಾಶ್ವತತೆಯಲ್ಲಿ ವಶಮಾಡಿ–ಕೊಂಡಿರುತ್ತಾನೆ, ಕಾಲಗತಿ ಹಾಗೂ ಸೃಷ್ಟಿ ಇವು ಎಂದೆಂದಿಗೂ ಮುಂದೆ ಚಾಚಿಕೊಂಡಿರುವ ಆಕಾರ ಹೊಂದಿರುತ್ತವೆ.

**CWSA, 19/389–90** **– ಶ್ರೀ ಅರವಿಂದರು**

*

ಪ್ರತಿಯೊಂದು ಹೊಸ ಅರುಣೋದಯ ಹೊಸ ಪ್ರಗತಿಯ ಸಾಧ್ಯತೆಯನ್ನು ತರುತ್ತದೆ.

ಅವಸರ ಮಾಡದೆ ನಾವು ಮುಂದೆ ಚಲಿಸುತ್ತೇವೆ, ಏಕೆಂದರೆ ನಾವು ಭವಿಷ್ಯತ್ತಿನ ಬಗ್ಗೆ ನಿಶ್ಚಿತತೆ ಹೊಂದಿದ್ದೇವೆ.

**CWM, 15/74** **– ಶ್ರೀಮಾತೆ**

*

**ಕಳಿಂಗ ವಿನಾಶದ ಹಾಗೂ ಪುನರ್ಜನ್ಮದ ಯುಗ**

ಕಾಲಗತಿಯ ಮೇಲೆ ಹಾಗೂ ದೇವನ ಅತ್ಯಂತ ನಿಕಟ (immediate) ಉದ್ದೇಶದ ಮೇಲೆ ಏನೆಲ್ಲ ಅವಲಂಬಿಸಿರುತ್ತದೆಂದರೆ, ನಮ್ಮದೇ ಸರ್ವರೋಗಹರಗಳಿಗೆ (ರಾಮಬಾಣಗಳಿಗೆ) ಅಂಟಿಕೊಳ್ಳುವುದಕ್ಕಿಂತ ಹೆಚ್ಚಾಗಿ ದೇವನ ಉದ್ದೇಶವನ್ನು ಅರಸುವುದು ಹೆಚ್ಚು ಮಹತ್ವದ್ದಾಗಿರುತ್ತದೆ. ಕಾಲಪುರುಷ (ಮೃತ್ಯುದೇವತೆ) ತನ್ನ ಭೀಕರ ಕಾರ್ಯಕ್ಕಾಗಿ ಮೇಲೆದ್ದು ಬಂದಿದ್ದಾನೆ–ಲೋಕಕ್ಷಯಕೃತ್ಪ್ರವೃದ್ಧಃ ಒಂದು ಜಗತ್ತನ್ನು ನಾಶಮಾಡಲು ಹೆಚ್ಚಿಸಿಕೊಳ್ಳುತ್ತಿದ್ದಾನೆ–ಮತ್ತು ಯಾರು ಅವನ ಈ ಭೀಕರತೆಯನ್ನು, ಅಧಿಕಬಲ ಇರುವುದನ್ನು, ಅಪ್ರತಿರೋಧ್ಯವಾಗಿರುವುದನ್ನು ತಡೆಯಬಲ್ಲರು? ಆದರೆ ಅವನು ಕೇವಲ ಇದ್ದ ಜಗತ್ತನ್ನು ನಾಶಪಡಿಸುತ್ತಿರುವನಷ್ಟೇ ಅಲ್ಲ, ಆದರೆ ಮುಂದೆ ಬರಲಿರುವ ಜಗತ್ತನ್ನು ಸೃಷ್ಟಿಸುತ್ತಿದ್ದಾನೆ. ಹಾಗಾಗಿ ಅವನು ನಾಶಮಾಡುತ್ತಿರುವುದನ್ನು ಕುರಿತು ದುಃಖಪಡುವುದಕ್ಕಿಂತ ಹಾಗೂ ಅದನ್ನು ಅಪ್ಪಿಕೊಳ್ಳುವುದಕ್ಕಿಂತ ಅವನು ನಿರ್ಮಾಣ ಮಾಡುತ್ತಿರುವುದನ್ನು ಶೋಧಿಸುವುದು ಹಾಗೂ ಅದಕ್ಕೆ ಸಹಾಯ ಮಾಡುವುದು

ಹೆಚ್ಚು ಲಾಭದಾಯಕವಾದದ್ದು. ಆದರೆ ಅವನ ದಿಕ್ಕುಬದಲಿಕೆ (drift) ಶೋಧಿಸುವುದು ಸುಲಭವಲ್ಲ ಮತ್ತು ನಾವು ಯಾವಾಗಲೂ ತಾತ್ಕಾಲಿಕ ರಚನೆಗಳನ್ನು ಹೊಗಳುತ್ತೇವೆ, ಅವು ಈ ಕುರುಕ್ಷೇತ್ರದಲ್ಲಿ ಯೋಧರಾಗಿರುವ ಗುಡಾರಗಳ ಹಾಗಿರುತ್ತವೆ ಮತ್ತು ಅವು ಭವಿಷ್ಯತ್ತಿನ ಶಾಶ್ವತ ನಿರ್ಮಾಣಗಳೆಂದು ಭಾವಿಸುತ್ತೇವೆ.

ಸತ್ಯದ ಆಚರಣೆ ಹಾಗೂ ಕಲಿಯ ಆಚರಣೆ ಇವುಗಳಲ್ಲಿ ಭಿನ್ನತೆ ಕಲ್ಪಿಸುವ ಪಂಡಿತರ ವಿಚಾರ ಸರಿಯಾದದ್ದು, ಆದರೆ ಅವುಗಳ ಅನ್ವಯ ಯಾವಾಗಲೂ ಜಾಣತನದ್ದಾಗಿರುತ್ತದೆ ಇಲ್ಲವೆ ಪಾಂಡಿತ್ಯಪೂರ್ಣವಾಗಿರುತ್ತದೆ ಎಂದು ನನಗನಿಸು–ವುದಿಲ್ಲ. ಕಲಿಯುಗ ವಿನಾಶಕ್ಕಾಗಿ ಹಾಗೂ ಪುನರ್ಜನ್ಮಕ್ಕಾಗಿ ಇರುವ ಯುಗ, ಇನ್ನು ಮುಂದೆ ರಕ್ಷಿಸಲಾಗದಿರುವುದಕ್ಕೆ ಹತಾಶರಾಗಿ ಅಂಟಿಕೊಳ್ಳುವುದಕ್ಕಲ್ಲ ಎಂಬುದನ್ನು ಅವರು ಮರೆತಿರುತ್ತಾರೆ ಇಲ್ಲವೆ ಅದು ಅವರಿಗೆ ತಿಳಿದಿರುವುದಿಲ್ಲ, ಅವರು ಕಲಿವರ್ಜ್ಯದ ಪದ್ಧತಿಯಲ್ಲಿ ಭದ್ರವಾಗಿ ಬೇರೂರಿರುತ್ತಾರೆ, ಆದರೆ ದೌರ್ಬಲ್ಯ–ಗಳನ್ನಷ್ಟೇ ವರ್ಜ್ಯಮಾಡುವುದಲ್ಲ, ಹಳೆಯ ಸಾಮರಸ್ಯದ ಬಲಗಳನ್ನು ವರ್ಜ್ಯದ ಕ್ರಿಯೆಗೆ ಒಳಪಡಿಸಬೇಕಾಗಿರುತ್ತದೆ ಎಂಬುದನ್ನು ಮರೆತಿರುತ್ತಾರೆ. ರಕ್ಷಿಸಿಕೊಂಡು ಬಂದದ್ದು ಕೇವಲ ತಾತ್ಕಾಲಿಕ ವೇದಿಕೆ, ಅದನ್ನು ನಾವು ಸಮುದ್ರದ ತೀರಗಳ ಮೇಲೆ ರಚಿಸಿರುತ್ತೇವೆ, ಅವು ಹೆಚ್ಚು ಸ್ಥಿರವಾದ ವಾಸಸ್ಥಾನಕ್ಕಾಗಿ ಕಾದುಕೊಂಡಿರುತ್ತವೆ ಮತ್ತು ಅದೂ ಕೂಡ ಒಂದು ದಿನ ತರಂಗಗಳ ಅಪ್ಪಳಿಕೆಯಡಿಯಲ್ಲಿ ಮುರಿದು ಬೀಳಬೇಕು, ಜಲದ ಮಡುವಿನಲ್ಲಿ ಮುಳುಗಿ ಹೋಗಬೇಕು. ಆ ಬಗೆಯ ವಿನಾಶಕ್ಕಾಗಿ ಕಾಲ ಸನ್ನಿಹಿತವಾಗಿದೆಯೆ? ಅದು ಸನ್ನಿಹಿತವಾಗಿದೆ ಎಂದು ನಾವು ಯೋಚಿಸುತ್ತೇವೆ. ಆ ಜಲಗಳ ಅಪ್ಪಳಿಸುವಿಕೆಗಳನ್ನು ಕೇಳಿರಿ, ಮುತ್ತಿಗೆಯ ಸದ್ದಿಗಿಂತ ಹೆಚ್ಚು ದಿಗ್ಭ್ರಮೆಗೊಳಿಸುವಂತಹದು, ಆ ನಿಧಾನಗತಿಯ, ಅಸಮಾಧಾನ–ಗೊಂಡ, ಕನಿಕರವಿಲ್ಲದ, ಅಭದ್ರಗೊಂಡ ರಚನೆಯನ್ನು ಗುರುತಿಸಿರಿ, ಅದು ಕೊರೆದು ಹೋಗುವುದನ್ನು, ಕಿರುಗುಡುವುದನ್ನು, ಹೊಡೆತಗಳಿಂದ ಅಲುಗಾಡು–ತ್ತಿರುವುದನ್ನು, ಮುರಿದು ಬೀಳುತ್ತಿರುವುದನ್ನು, ಆ ಹೆದ್ದೆರೆಗಳ ಹುದುಗಿ (yeast) ನಲ್ಲಿ ಮೌನದಿಂದ ಇಲ್ಲವೆ ಎರಚಾಟದೊಂದಿಗೆ ಮುಳುಗುತ್ತಿರುವುದನ್ನು ಗಮನಿಸಿರಿ. ಹೊಸ ರಚನೆಗಾಗಿ ಕಾಲ ಕೂಡಿ ಬಂದಿದೆಯೆ? ಅದು ಬಂದಿದೆ ಎಂದು ನಾವು ಹೇಳುತ್ತೇವೆ. ಮನುಕುಲದ ಚಟುವಟಿಕೆಯನ್ನು, ಆತುರತೆಯನ್ನು, ಅತ್ತಿಂದಿತ್ತ ಅವಸರದಿಂದ ನಡೆದಾಡುವುದನ್ನು, ತೀವ್ರಗತಿಯಲ್ಲಿ ಪ್ರದೇಶ

ಶೋಧಿಸುವುದನ್ನು, ಅರಸುತ್ತಿರುವುದನ್ನು, ಅಸ್ತಿಭಾರಗಳನ್ನು ಹಾಕುತ್ತಿರುವುದನ್ನು ಗುರುತಿಸಿರಿ, ಅವತಾರ ಪುರುಷರು, ಶ್ರೇಷ್ಠ ವಿಭೂತಿಗಳು ಬರುತ್ತಿರುವುದನ್ನು, ಒತ್ತೊತ್ತಾಗಿ ಮೇಲೆದ್ದು ಬರುತ್ತಿರುವುದನ್ನು, ಒಬ್ಬರ ಹಿಂದೆ ಇನ್ನೊಬ್ಬರು ಹತ್ತಿರದಲ್ಲಿ ಹೆಜ್ಜೆ ಇರಿಸುತ್ತಿರುವುದನ್ನು ನೋಡಿರಿ. ಇವು ಕುರುಹುಗಳಾಗಿಲ್ಲವೆ ಮತ್ತು ಅವು ಕಲಿಯ ಮೊದಲ ಸತ್ಯಯುಗವನ್ನು ಸ್ಥಾಪಿಸಲು ಎಲ್ಲ ಅವತಾರಗಳಲ್ಲಿ ಶ್ರೇಷ್ಠವಾದ ಅವತಾರ ಬರುವುದನ್ನು ಕುರಿತು ಹೇಳುತ್ತಿಲ್ಲವೆ?

**CWSA, 12/55–56** **– ಶ್ರೀ ಅರವಿಂದರು**

*

**ಕಾರ್ಯಗಳನ್ನು ಇನ್ನೊಂದು ರೀತಿಯಲ್ಲಿ ಕೈಕೊಳ್ಳುವುದು ಸಾಧ್ಯವಿದೆ**

ಪ್ರತಿಯೊಬ್ಬನು ಅವಶ್ಯವಾದದ್ದೆಲ್ಲವನ್ನು ತನಗೆ ಸಾಧ್ಯವಿದ್ದ ಗರಿಷ್ಠ ಮಿತಿಯಲ್ಲಿ ಕೈಕೊಂಡರೆ, ಒಂದು ಸ್ಥಿರಗೊಂಡ ಹಂತವನ್ನು ತಲುಪುವ ಅವಕಾಶವಿರುತ್ತದೆ, ಅಲ್ಲಿ ಊರ್ಧ್ವಗತಿಯ ಚಲನೆ ಮುಂದುವರಿದುಕೊಂಡು ಹೋಗುತ್ತದೆ ಅದಕ್ಕಾಗಿ ಮತ್ತೊಮ್ಮೆ ಪ್ರಾರಂಭಿಸುವುದಕ್ಕಾಗಿ ಏನನ್ನೂ ನಾಶ ಮಾಡುವ ಆವಶ್ಯಕತೆ ಇರುವುದಿಲ್ಲ.

ಅದು ಅತ್ಯಗತ್ಯದ್ದಾಗಿರುವುದಿಲ್ಲ, ಆದರೆ ಇಲ್ಲಿಯವರೆಗೆ, ಯಾವಾಗಲೂ, ಆ ರೀತಿಯದಾಗಿದೆ.

ಪ್ರಕೃತಿ ಕೈಕೊಂಡದ್ದರ ಮೇಲೆ ನಮ್ಮ ಆಧಾರವನ್ನು ಕೈಗೆತ್ತಿಕೊಳ್ಳುವ ನಿರ್ಬಂಧಕ್ಕೆ ನಾವು ಒಳಗಾಗಬೇಕಾಗುವುದು ಸಂಭವಿಸುತ್ತಿರುತ್ತದೆ, ಏಕೆಂದರೆ ಇಲ್ಲಿಯವರೆಗೆ ಕಾರ್ಯನಿರತವಾದದ್ದು ಪ್ರಕೃತಿಯೇ ಆಗಿದೆ. ಆದರೆ ಅದೇವೇಳೆಗೆ ಅದರ ಕಾರ್ಯರೀತಿಯನ್ನು ನಾವು ಒಪ್ಪಿಕೊಳ್ಳುವುದಿಲ್ಲ, ಹಾಗಾಗಿ ಅದು ಚಿಕ್ಕ ಆಂತರಿಕ ಘರ್ಷಣೆಯನ್ನು ಉತ್ಪಾದಿಸುತ್ತದೆ (ಕುಟುಂಬದಲ್ಲಿ ಆಗುವಂತೆ ಎಂದು ನಾನು ಹೇಳಬಹುದು), ಆದರೆ ಅದು ಸ್ವಲ್ಪಮಟ್ಟಿಗೆ ವಿಷಯಗಳು ಕಠಿಣವಾಗುವಂತೆ ಮಾಡುತ್ತದೆ. ಏಕೆಂದರೆ ಪ್ರಕೃತಿ ತಾನಿರುವ ರೀತಿಗೆ ಕ್ಷೋಭೆ ಉಂಟಾಗುವುದನ್ನು ಇಷ್ಟಪಡುವುದಿಲ್ಲ. ಮತ್ತು ಆದಾಗ್ಯೂ ಪ್ರಕೃತಿ ಇಷ್ಟಪಡುವುದನ್ನು ನಾವು ಕೈಕೊಳ್ಳುತ್ತ ಹೋದರೆ ಅದು ಯಾವಾಗಲೂ ಅದೇ ಕತೆಯಾಗುತ್ತದೆ, ಅಲ್ಲಿ ಕಾಣದಂತಾಗುವಿಕೆ ಮತ್ತು ಪ್ರಾರಂಭ ಮಾಡುವಿಕೆ ಇರುತ್ತದೆ, ಏಕೆಂದರೆ ಅದು

ಅದರ ಲೀಲೆ. ಹಾಗಾಗಿ ಮನುಷ್ಯ ಅದು ನಾಶಮಾಡುತ್ತಿರುವುದನ್ನು ನಿಲ್ಲಿಸಬೇಕು. ಆದರೆ ಪ್ರಕೃತಿ ಅಕಸ್ಮಾತ್ತಾಗಿ ಒಂದು ಒಳ್ಳೆಯ ರೀತಿಯನ್ನು ಕಂಡುಕೊಳ್ಳುವಂತಾದರೆ ಎಂದರೆ ಅದರಲ್ಲಿ ಅಭಿರುಚಿ ಉಂಟಾದರೆ ಅದರಲ್ಲಿ ಸಹಕಾರ ನೀಡುವ ಮನೋಭಾವ ಬಂದರೆ, ಆಗ ಅದರ ಸಹಕಾರದೊಂದಿಗೆ ಯಶಸ್ಸನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ.

ನೈಜತೆಯಲ್ಲಿ ಅವಶ್ಯವಾದದ್ದು ಏನೆಂದರೆ ಪ್ರಕೃತಿಗೆ ಅದರ ರೀತಿಗಿಂತ ಮತ್ತೊಂದು ರೀತಿಯಲ್ಲಿ ಕಾರ್ಯವನ್ನು ಕೈಕೊಳ್ಳಬಹುದು ಎಂಬುದನ್ನು ತಿಳಿಸಿಕೊಡಬೇಕಾಗಿದೆ.

**CWM, 5/248–49** **– ಶ್ರೀಮಾತೆ**

*



## ಕಾಲಗತಿಯ ತರಂಗಗಳು

### ಕೊನೆಯೂ ಇಲ್ಲ, ಪ್ರಾರಂಭವೂ ಇಲ್ಲ

115. ಜಗತ್ತು ಪುನರಾವರ್ತಕ ದೀರ್ಘ ದಶಮಾಂಶವಿದ್ದ ಹಾಗಿದೆ, ಬ್ರಹ್ಮನ್ ಅದರ ಪೂರ್ಣಾಂಕವಾಗಿದೆ. ಪುನರಾವರ್ತಿಸುವ ಅವಧಿ ಪ್ರಾರಂಭಗೊಳ್ಳುವಂತೆ ಮತ್ತು ಕೊನೆಗೊಳ್ಳುವಂತೆ ಕಂಡುಬರುತ್ತದೆ, ಆದರೆ ಭಿನ್ನರಾಶಿ ಶಾಶ್ವತವಾದದ್ದು, ಅದಕ್ಕೆ ಎಂದಿಗೂ ಕೊನೆ ಎಂಬುದಿಲ್ಲ ಮತ್ತು ಯಾವುದೇ ನಿಜವಾದ ಪ್ರಾರಂಭವಿಲ್ಲ.

116. ವಸ್ತು–ವಿಷಯಗಳ ಪ್ರಾರಂಭ ಮತ್ತು ಕೊನೆ ಇವು ನಮ್ಮ ಅನುಭವದ ಸಾಂಪ್ರದಾಯಿಕ ಪದಗಳು, ಅವುಗಳ ನಿಜವಾದ ಅಸ್ತಿತ್ವದಲ್ಲಿ ಈ ಪದಗಳಿಗೆ ನೈಜತೆಯಿಲ್ಲ, ಪ್ರಾರಂಭ ಮತ್ತು ಕೊನೆ ಎಂಬುದಿಲ್ಲ.

**ಪ್ರಶ್ನೆ :** *"ಪ್ರಾರಂಭವೂ ಇಲ್ಲ, ಕೊನೆಯೂ ಇಲ್ಲ" ಸೃಷ್ಟಿ ಹಾಗೂ ಲಯ ಇವು ಕೇವಲ ಬಾಹ್ಯಪ್ರಜ್ಞೆಯ ಒಂದು ಭ್ರಮೆ ಎಂದು ಶ್ರೀ ಅರವಿಂದರು ಹೇಳುತ್ತಾರೆ.*

**ಶ್ರೀಮಾತೆ :** ನಾವು ಶಬ್ದಗಳನ್ನು ಉಪಯೋಗಿಸಬೇಕಾದ ಒತ್ತಾಯಕ್ಕೊಳ–ಗಾಗಿದ್ದೇವೆ, ಆದರೆ ಆ ವಿಷಯ ನಮ್ಮಿಂದ ಉಪಾಯವಾಗಿ ತಪ್ಪಿಸಿಕೊಳ್ಳುತ್ತದೆ, "ಸನಾತನ ದೈವೀ ತತ್ವ", "ಪರಮೋಚ್ಚನಾದವನು", "ದೇವ" ಎಂದು ತರ್ಜುಮೆಗೆ ಒಳಗಾದವುಗಳಿಗೆ ಪ್ರಾರಂಭವೂ ಇಲ್ಲ, ಕೊನೆಯೂ ಇಲ್ಲ. "ಅದು ಇದೆ" ಆದರೆ ಅದಿರುವುದು ಹಾಗಲ್ಲ, ಏಕೆಂದರೆ ಅದು ಪ್ರಕಟವಾದದ್ದು ಹಾಗೂ ಪ್ರಕಟವಾಗದೆ ಇರುವುದು ಇದೆಲ್ಲದರ ಆಚೆಗಿದೆ. ಪ್ರಕಟಣೆಯಲ್ಲಿರುವ ನಾವು ಅದನ್ನು ತಿಳಿದುಕೊಳ್ಳಲು ಹಾಗೂ ಗ್ರಹಿಸಲು ಅಸಮರ್ಥರಾಗಿದ್ದೇವೆ ಎಂಬಂತಹ ಏನೋ ಒಂದು ಅದಾಗಿದೆ– ಅದೇ ಪ್ರಾರಂಭವಿಲ್ಲದೆ ಹಾಗೂ ಕೊನೆಯಿಲ್ಲದೆ ಇರುವಂತಹದು. ಆದರೆ ಸತತ ಹಾಗೂ ಶಾಶ್ವತವಾಗಿ 'ತತ್' ಏನೋ ಒಂದೆಂದು ಪ್ರಕಟವಾಗುತ್ತದೆ, ಅದಕ್ಕೆ ಪ್ರಾರಂಭವಿರುತ್ತದೆ ಹಾಗೂ ಕೊನೆಯಿರುತ್ತದೆ. ಅಲ್ಲಿ 'ಕೊನೆ'ಗೊಳಿಸುವುದಕ್ಕೆ ಕೇವಲ ಎರಡು ರೀತಿಗಳಿರುತ್ತವೆ. ಒಂದು ರೀತಿ, ವಿನಾಶ–ಗೊಳ್ಳುವಿಕೆ, ಸರ್ವನಾಶಕ್ಕೊಳಗಾಗುವುದಾಗಿದೆ, ಮತ್ತೊಂದು ಪರಿವರ್ತನೆಗೆ ಒಳಪಡುವುದಾಗಿದೆ, ಪ್ರಕಟಣೆ ಹೆಚ್ಚು ಪರಿಪೂರ್ಣವಾಗಿ ಬೆಳೆಯುತ್ತಿದ್ದಂತೆ, ವಿನಾಶದ ಆವಶ್ಯಕತೆ ಕಡಿಮೆಯಾಗುತ್ತದೆ, ಅದೆಷ್ಟರ ಮಟ್ಟಿಗೆಂದರೆ, ಅದು ಮಾಯವಾದಾಗ ಅದರ ಸ್ಥಾನದಲ್ಲಿ ಪ್ರಗತಿಪರ ಪರಿವರ್ತನೆಯ ವಿಧಾನ ಬರುವುದೆಂದು ತೋರಿಬರುತ್ತದೆ.

*

**ಅದಿರಾಟದ (pulsatory) ಪ್ರಕಟಣೆ**

ಈ ಬಗೆಯ ಪ್ರಕಟಣೆ ಕುರಿತು ನನ್ನಲ್ಲಿ ಗ್ರಹಿಕೆಯಿತ್ತು– ಅದಿರಾಟದ್ದು (pulsatory) ಎಂದು ನಾನು ಹೇಳಿದಾಗ– ಅದು ಹೊರಗೆ ತೆರೆದುಕೊಳ್ಳುವುದು ಮತ್ತು ಸಂಕೋಚನಕ್ಕೆ ಒಳಗಾಗುವುದು ಎಂದಾಗಿರುತ್ತದೆ. ಒಂದು ವೇಳೆ ಬರುತ್ತದೆ,

ಆಗ ತೆರೆದಿರಿಸಿಕೊಳ್ಳುವಿಕೆ ಹೇಗಿರುತ್ತದೆಂದರೆ ದ್ರವವಾಗಿರುವಿಕೆ, ನಮ್ಯತೆ, ಬದಲಾಗುವುದಕ್ಕೆ ಕ್ಷಮತೆ ಇವೆಲ್ಲ ಹೇಗಿರುತ್ತವೆ ಎಂದರೆ ಹೊಸದಾದುದಕ್ಕೆ ಆಕಾರ ನೀಡುವುದಕ್ಕಾಗಿ ಮರು ಹೀರಿಕೊಳ್ಳುವಿಕೆಯ ಆವಶ್ಯಕತೆ ಇರುವುದಿಲ್ಲ ಮತ್ತು ಪ್ರಗತಿಪರ ಪರಿವರ್ತನೆ ಅಲ್ಲಿರುತ್ತದೆ. ಇದು ಏಳನೆಯ ವಿಶ್ವಂಭರ ಸೃಷ್ಟಿ, ಈ ಮೊದಲು ಆರು ಪ್ರಳಯಗಳಾಗಿವೆ, ಇದು ಏಳನೆಯ ಸೃಷ್ಟಿ, ಮರುಹೀರಿಕೊಳ್ಳು–ವಿಕೆಗೆ ಒಳಗಾಗದೆ ಇದು ಪರಿವರ್ತನೆಗೆ ಒಳಗಾಗುವುದು ಎಂದು ಥಿಯೋನ್ (Theon) ಹೇಳುತ್ತಿದ್ದ– ಅದು ಸ್ಪಷ್ಟವಾಗಿ ಪರಿಪೂರ್ಣವಾಗಿ ಮಹತ್ವದ್ದಲ್ಲ, ನಿಮ್ಮಲ್ಲಿ ಸನಾತನ ಪ್ರಜ್ಞೆ ಬಂದ ತತ್ಕ್ಷಣ ವಿಷಯಗಳು ಈ ಮಾರ್ಗದಲ್ಲಿ ಸಾಗಿ ಹೋಗುವವೋ ಇಲ್ಲವೆ ಆ ಮಾರ್ಗದಿಂದ ಸಾಗಿ ಹೋಗುವವೋ ಎಂಬುದು ಕನಿಷ್ಠ ಮಟ್ಟದಲ್ಲೂ ಮಹತ್ವದ್ದಾಗಿರುವುದಿಲ್ಲ. ಕೊನೆ ಕಂಡುಕೊಳ್ಳದಿರುವ ಏನೋ ಒಂದಕ್ಕಾಗಿ ಮಹತ್ವಾಕಾಂಕ್ಷೆ ಇಲ್ಲವೆ ಆವಶ್ಯಕತೆ, ಸೀಮಿತ ಪ್ರಜ್ಞೆ ಇರುವ ಮಾನವನಿಗೆ ಇರುತ್ತದೆ; ಏಕೆಂದರೆ ಅಂತರಂಗದಲ್ಲಿರುವ "ಶಾಶ್ವತತೆಯ ನೆನಪು" ಎಂದು ನಾವು ಕರೆಯಬಹುದಾದುದು ಇರುತ್ತದೆ ಮತ್ತು ಶಾಶ್ವತತೆಯ ಆ ನೆನಪು ಪ್ರಕಟಣೆಗಾಗಿ, ಶಾಶ್ವತತೆಯಲ್ಲಿ ಪಾಲು ಪಡೆಯಲು ಅಭೀಪ್ಸೆ ಪಡುತ್ತದೆ. ಆದರೆ ಶಾಶ್ವತತೆಯ ಅರ್ಥ ಕ್ರಿಯಾಶೀಲವಾಗಿದ್ದರೆ, ಉಪಸ್ಥಿತವಿದ್ದರೆ ನೀವು ದುಃಖಿಸುವುದಿಲ್ಲ– ಹರಿದು ಹೋದ ವಸ್ತ್ರವನ್ನು ಎಸೆದು ಬಿಟ್ಟಾಗ ನೀವು ದುಃಖಿಸುವುದಿಲ್ಲ ಅಲ್ಲವೆ? ಅದು ಅದೇ ವಿಷಯ, ವಿಶ್ವವೊಂದು ಮಾಯವಾದರೆ ಅದರರ್ಥ ಅದು ತನ್ನ ಕಾರ್ಯವಿಧಾನವನ್ನು ಇಡಿಯಾಗಿ ನೆರವೇರಿಸಿಕೊಂಡಿತ್ತು, ಅದು ತನ್ನ ಸಾಧ್ಯತೆಗಳ ಮಿತಿಯನ್ನು ತಲುಪಿತ್ತು ಮತ್ತು ಇನ್ನೊಂದು ವಿಶ್ವ ಅದರ ಸ್ಥಾನದಲ್ಲಿ ಬರಬೇಕಾಗಿತ್ತು ಎಂದಾಗುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ: ಮಾರ್ಚ 4, 1966 – ಶ್ರೀಮಾತೆ**

*

**ಶಾಶ್ವತತೆಯ ಅರ್ಥ ಮತ್ತು ಪೃಥ್ವಿಯ ಜೀವನ**

ನಿಮ್ಮ ಪ್ರಜ್ಞೆಯಲ್ಲಿ ಹಾಗೂ ಅಭಿವೃದ್ಧಿಯಲ್ಲಿ ನೀವು ಬಹಳ ಚಿಕ್ಕವರಾಗಿದ್ದಾಗ ಪೃಥ್ವಿ ಮಾಯವಾಗಬಾರದು ಎಂಬುದರಲ್ಲಿ ಭವ್ಯ ಆಸಕ್ತಿಯನ್ನು, ಅದು ಅವಿಸ್ಮರಣೀಯವಾಗಬೇಕೆಂಬುದನ್ನು ಭಾವನೆಗೆ ತಂದುಕೊಳ್ಳುತ್ತೀರಿ. (ಮನುಷ್ಯ

ಇಷ್ಟಪಡುವಷ್ಟು ಪರಿವರ್ತನೆಗೆ ಒಳಗಾಗುತ್ತಿರುವಾಗಲೂ ಕೂಡ, ಆದರೆ ಯಾವಾಗಲೂ ಪೃಥ್ವಿ ಅವಿಸ್ಮರಣೀಯಗೊಳ್ಳುತ್ತಿದ್ದಾಗ) ಸ್ವಲ್ಪ ಮುಂದೆ ಸಾಗಿ ಹೋದಾಗ, ನೀವು ಇನ್ನೂ ಸ್ವಲ್ಪ ಹೆಚ್ಚು ಪರಿಪಕ್ವತೆ ಪಡೆದಾಗ, ಅದಕ್ಕೆ ಬಹಳ ಕಡಿಮೆ ಮಹತ್ವವನ್ನು ಅಂಟಿಸುತ್ತೀರಿ. ಮತ್ತು ನೀವು ಶಾಶ್ವತತೆಯ ಅರ್ಥದೊಂದಿಗೆ ಸತತ ಆಧ್ಯಾತ್ಮಿಕ ಸಂಸರ್ಗದಲ್ಲಿದ್ದಾಗ, ಅದು ಕೇವಲ ಆಯ್ಕೆಯ ಪ್ರಶ್ನೆಯಾಗಿರುತ್ತದೆ, ಇನ್ನು ಮುಂದೆ ಆವಶ್ಯಕತೆಯಾಗಿ ಉಳಿದುಕೊಳ್ಳುವುದಿಲ್ಲ, ಏಕೆಂದರೆ ಅದು ಕ್ರಿಯಾಶೀಲ ಪ್ರಜ್ಞೆಯ ಮೇಲೆ ಪರಿಣಾಮ ಬೀರುವ ಏನೋ ಒಂದಾಗಿರುವುದಿಲ್ಲ.

ಅದು ಕಲಾವಿದನ ರೀತಿಯದಾಗಿದೆ, ಆದರೆ ಆ ಕಲಾವಿದ ತನಗೇ ಆಕಾರ ಕೊಟ್ಟುಕೊಳ್ಳುವವ, ಅವನು ಒಂದು, ಎರಡು, . . . ಹೀಗೆ ಅವಶ್ಯವಾದಷ್ಟು ಸಲ ಪ್ರಯತ್ನ ಮಾಡುತ್ತಾನೆ, ನಂತರ ತನ್ನಲ್ಲೇ ಕೊನೆ ಕಂಡುಕೊಳ್ಳುತ್ತಾನೆ, ಅದರಿಂದಾಗಿ ಹೊಸ ಪ್ರಕಟಣೆಗಳ ಆವಶ್ಯಕತೆಗಳಿಗೆ ತನ್ನನ್ನು ಸರಿಹೊಂದಿಸಿಕೊಳ್ಳುವಂತಾಗುತ್ತದೆ, ಅದರಿಂದಾಗಿ ಪ್ರತಿಯೊಂದನ್ನೂ ಹಿಂದೆಳೆದುಕೊಳ್ಳುವುದು ಅವಶ್ಯವಾಗುವುದಿಲ್ಲ, ಆ ಹಿಂದೆಳೆದುಕೊಳ್ಳುವಿಕೆ ಎಲ್ಲವನ್ನೂ ಮತ್ತೆ ಮಿಶ್ರಣ ಮಾಡುವುದಕ್ಕಾಗಿ ಮತ್ತು ಎಲ್ಲವನ್ನೂ ಮತ್ತೆ ಹೊರಗೆ ಹಾಕುವುದಕ್ಕಾಗಿ ಇರುತ್ತದೆ. ಆದರೆ ಈಗ ಅದು ಅದಕ್ಕಿಂತಲೂ ಹೆಚ್ಚಾಗಿದೆ, ನಾನು ಹೇಳಿದ ಹಾಗೆ ಅದು ಆಯ್ಕೆಯ ಪ್ರಶ್ನೆಯಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಪ್ರಕಟಣೆಯನ್ನು ಮೂರ್ತೀಕರಣ (objectification) ಕ್ಕಾಗಿ (ದಿವ್ಯಾನಂದ, ಅಭಿರುಚಿ . . .) ಮಾಡಲಾಗಿತ್ತು ಮತ್ತು ಒಮ್ಮೆ ಆಕಾರ ತಳೆದ ಅದು ಸಾಕಷ್ಟು ನಮ್ಯವಾದದ್ದು, ಸಾಕಷ್ಟು ಗ್ರಹಣಶೀಲ–ವಾದದ್ದು, ಸಾಕಷ್ಟು ನಯೋಪಾಯ (supple) ದ್ದು ಸಾಕಷ್ಟು ವಿಸ್ತಾರವಾದದ್ದು ಆಗಿದೆ, ಅದರಿಂದಾಗಿ ಪ್ರಕಟಣೆಯನ್ನು ಪ್ರಕಟವಾಗುವ ಹೊಸ ಶಕ್ತಿಗಳಿಂದ ರೂಪಿಸುವಂತಾಗುವುದು, ಇನ್ನು ಮುಂದೆ ಪ್ರತಿಯೊಂದನ್ನೂ ಇಲ್ಲವಾಗಿಸುವ ಮತ್ತು ಪ್ರತಿಯೊಂದನ್ನು ಮತ್ತೆ ಕೈಕೊಳ್ಳುವ ಆವಶ್ಯಕತೆ ಇಲ್ಲ.

ಬಾಗಿಕೊಳ್ಳುವಿಕೆ "ಪ್ರಾರಂಭವಾಗುವುದೆಲ್ಲ ಕೊನೆಗೊಳ್ಳಲೇಬೇಕು" ಎಂಬ ಹೊಸ ನಾಣ್ಣುಡಿಯೊಂದಿಗೆ ತನ್ನನ್ನು ತೋರಿಸಿಕೊಂಡಿತು. ಅದು ಅವಶ್ಯವಾಗಿ ಸತ್ಯವಾಗಿರದ ಮಾನವರ ಮಾನಸಿಕ ರಚನೆಯ ಹಾಗೆ ತೋರಿಬಂದಿತು.

**ಅನುಯಾಯಿಯೊಂದಿಗೆ ಮಾತುಕತೆ: ಮಾರ್ಚ 4, 1966 – ಶ್ರೀಮಾತೆ**

*

## ಸೃಷ್ಟಿಯ ಆವರ್ತ (cycle) ಗಳು ಮತ್ತು ಪ್ರಗತಿಪರ ಪ್ರಕಟಣೆ

ಸೃಷ್ಟಿಯ ವಿಧಾನದಲ್ಲಿ ಸೃಷ್ಟಿಸುವ ಒಂದು ಚಲನೆಯಿದೆ, ಅದರ ನಂತರ ಸಂರಕ್ಷಿಸುವ ಚಲನೆಯಿದೆ ಮತ್ತು ವಿಭಜನೆ ಇಲ್ಲವೆ ವಿನಾಶದಲ್ಲಿ ಕೊನೆಗೊಳ್ಳುತ್ತದೆ ಎಂದು ಹೇಳಲಾಗಿದೆ, ಮತ್ತು ಬಹಳಷ್ಟು ಸಲ "ಪ್ರಾರಂಭವಾದದ್ದೆಲ್ಲ ಕೊನೆಗೊಳ್ಳಬೇಕು" ಇತ್ಯಾದಿ ಎಂಬುದನ್ನು ಬಹಳಷ್ಟು ಸಲ ಪುನರಾವರ್ತಿಸಿ ಹೇಳಲಾಗಿದೆ.

ವಾಸ್ತವವಾಗಿ ನಮ್ಮ ಇತಿಹಾಸದಲ್ಲಿ ಒಂದರ ನಂತರ ಒಂದರಂತೆ ಬರುವ ಆರು ಅವಧಿಗಳಿದ್ದವು, ಅವು ಸೃಷ್ಟಿಯಿಂದ ಪ್ರಾರಂಭಗೊಂಡವು, ಸಂರಕ್ಷಿಸುವ ಶಕ್ತಿಯಿಂದ ದೀರ್ಘಕಾಲ ಉಳಿದುಕೊಂಡವು, ವಿಭಜನೆ, ವಿನಾಶ, ಮೂಲಕ್ಕೆ ತಿರುಗಿ ಹೋಗುವಿಕೆ ಇವೆಲ್ಲದರಿಂದ ಕೊನೆಗೊಂಡವು. ವಿನಾಶವಾಗುವುದನ್ನು ಪ್ರಳಯ ಎಂದು ಕರೆಯುತ್ತಾರೆ; ಮತ್ತು ಆ ಕಾರಣದಿಂದಾಗಿ ಈ ಸಂಪ್ರದಾಯವಿದೆ. ಆದರೆ ಏಳನೆಯ ಸೃಷ್ಟಿ ಪ್ರಗತಿಪರ ಸೃಷ್ಟಿಯಾಗುತ್ತದೆ ಎಂದು ಹೇಳಲಾಗಿದೆ, ಎಂದರೆ ಸೃಷ್ಟಿಯ ಪ್ರಾರಂಭ ಬಿಂದುವಿನಿಂದ, ಕೇವಲ ಸಂರಕ್ಷಣೆಯ ಅವಧಿ ಅನುಸರಿಸುವುದಷ್ಟೇ ಅಲ್ಲದೆ ಪ್ರಗತಿಪರ ಪ್ರಕಟಣೆ ಅನುಸರಿಸುವುದಿರುತ್ತದೆ, ಅದು ಭಗವಂತನನ್ನು ಹೆಚ್ಚು ಹೆಚ್ಚಾಗಿ ಸಂಪೂರ್ಣ ರೀತಿಯಲ್ಲಿ ಪ್ರಕಟಿಸುತ್ತದೆ, ಅದರಿಂದಾಗಿ ವಿಭಜನೆಯಾಗಲಿ, ಮೂಲಕ್ಕೆ ಮರಳಿ ಹೋಗುವುದಾಗಲಿ ಅವಶ್ಯವಾಗುವುದಿಲ್ಲ. ನಾವಿರುವ ಅವಧಿ ನಿಖರವಾಗಿ ಏಳನೆಯ ಸೃಷ್ಟಿ ಎಂದು ಘೋಷಿಸಲಾಗಿದೆ, ಹಾಗಾಗಿ ಅದು ಪ್ರಳಯದ ಮೂಲಕ, ಮೂಲಕ್ಕೆ ಮರಳಿ ಹೋಗುವುದರ ಮೂಲಕ, ವಿನಾಶ ಹಾಗೂ ಮಾಯವಾಗುವಿಕೆಯ ಮೂಲಕ ಕೊನೆಗೊಳ್ಳುವುದಿಲ್ಲ, ಆದರೆ ಅದನ್ನು ಸತತ ಪ್ರಗತಿ ಬದಲು ಮಾಡುತ್ತದೆ, ಏಕೆಂದರೆ ಅದರ ಸೃಷ್ಟಿಯಲ್ಲಿ ದೈವಿ ಮೂಲವನ್ನು ಹೆಚ್ಚು ಹೆಚ್ಚಾಗಿ ಪರಿಪೂರ್ಣ ರೀತಿಯಲ್ಲಿ ಹೊರಗೆಡುವುದಿರುತ್ತದೆ.

ಮತ್ತು ಇದನ್ನೇ ಕುರಿತು ಶ್ರೀ ಅರವಿಂದರು ಹೇಳುತ್ತಾರೆ. ಸತತ ಹೊರಗೆಡುವಿಕೆಯನ್ನು ಕುರಿತು ಮಾತನಾಡುತ್ತಾರೆ, ಎಂದರೆ, ಭಗವಂತ ಅತ್ಯಂತ ಹೆಚ್ಚಿನ ರೀತಿಯಲ್ಲಿ ಸಂಪೂರ್ಣವಾಗಿ, ಪರಿಪೂರ್ಣವಾಗಿ ಪ್ರಗತಿಪರ ಸೃಷ್ಟಿಯಲ್ಲಿ ಪ್ರಕಟನಾಗುತ್ತಾನೆ. ಈ ಪ್ರಗತಿಯ ಸ್ವಭಾವದಿಂದಾಗಿ ಇನ್ನು ಮುಂದೆ ಮೂಲಕ್ಕೆ ಮರಳಿ ಹೋಗುವ, ನಾಶವಾಗುವ ಆವಶ್ಯಕತೆ ಇರುವುದಿಲ್ಲ. ಪ್ರಗತಿ ಹೊಂದದೇ

ಇರುವುದೆಲ್ಲ ಮಾಯವಾಗುತ್ತದೆ, ಆ ಕಾರಣದಿಂದಾಗಿ ಭೌತಿಕ ದೇಹಗಳು ಮರಣ ಹೊಂದುತ್ತವೆ, ಅವು ಪ್ರಗತಿಪರವಾಗಿರುವುದಿಲ್ಲ. ಅವು ಒಂದು ಮಟ್ಟದ ವರೆಗೆ ಪ್ರಗತಿ ಹೊಂದುತ್ತವೆ, ನಂತರ ಅವುಗಳ ಪ್ರಗತಿ ನಿಂತುಹೋಗುತ್ತದೆ. ಬಹಳಷ್ಟು ಸಲ ಸ್ಥಿರವಾಗಿ ಕೆಲ ಸಮಯದ ವರೆಗೆ ಉಳಿದುಕೊಳ್ಳುತ್ತವೆ, ನಂತರ ಕುಗ್ಗಿಕೊಳ್ಳಲು ಪ್ರಾರಂಭಿಸುತ್ತವೆ, ಹಾಗೂ ಮಾಯವಾಗುತ್ತವೆ. ಅದು ಏಕೆಂದರೆ ಭೌತಿಕ ದ್ರವ್ಯದಿಂದಾದ ದೇಹ, ಸದ್ಯ ಅದಿರುವ ಹಾಗೆ ಸಾಕಷ್ಟು ನಮ್ಯವಾಗಿಲ್ಲ, ಅದಕ್ಕೆ ಸತತ ಪ್ರಗತಿಯತ್ತ ಸಾಗುವುದು ಸಾಧ್ಯವಾಗುವುದಿಲ್ಲ. ಆದರೆ ದೇಹವನ್ನು ಪರಿಪೂರ್ಣ–ಗೊಳಿಸುವುದಕ್ಕಾಗಿ ಸಾಕಷ್ಟು ನಮ್ಯವಾಗುವಂತೆ ಮಾಡುವುದು ಅಸಾಧ್ಯವಾದದ್ದಲ್ಲ, ಅದರಿಂದಾಗಿ ಅದಕ್ಕೆ ವಿಭಜನೆಯ ಎಂದರೆ ಮೃತ್ಯುವಿನ ಆವಶ್ಯಕತೆ ಇರುವುದಿಲ್ಲ.

ಇದನ್ನು ಸಿದ್ಧಿಸಿಕೊಳ್ಳಬೇಕಾದರೆ ಅತಿಮನಸ್ಸಿನ ಅವರೋಹಣ ಅವಶ್ಯ–ವಾಗಿರುತ್ತದೆ, ಇಲ್ಲಿಯವರೆಗೆ ಪ್ರಕಟವಾದ ಎಲ್ಲ ಶಕ್ತಿಗಳಿಗಿಂತ ಅದು ಹೆಚ್ಚಿನ ಶಕ್ತಿ ಹೊಂದಿರುತ್ತದೆ, ಅದು ದೇಹ ಸತತ ಪ್ರಗತಿ ಸಾಧಿಸುವುದಕ್ಕೆ ನಮ್ಯತೆ ನೀಡುತ್ತದೆ ಎಂದರೆ ತೆರೆದುಕೊಳ್ಳುತ್ತಿರುವ ದೈವೀಚಲನೆಯನ್ನು ಅನುಸರಿಸುವುದಕ್ಕೆ ಅದು ಅನುವು ಮಾಡಿಕೊಡುತ್ತದೆ.

**CWM, 7/205** **– ಶ್ರೀಮಾತೆ**

*

**ಪ್ರಗತಿಪರ ವಿಶ್ವ**

ಶೂನ್ಯವಾದಿಗಳು, ನಿರ್ವಾಣವಾದಿಗಳು ಹಾಗೂ ಮಾಯಾವಾದಿಗಳು ಇರುತ್ತಾರೆ, ಹಾಗೆಯೇ ಒಂದಿಲ್ಲೊಂದು ರೀತಿಯಲ್ಲಿ ಹಸ್ತಕ್ಷೇಪ ಮಾಡುವ ಭೂತದ ಅಸ್ತಿತ್ವವನ್ನು ಎಲ್ಲ ಧರ್ಮಗಳು ಒಪ್ಪಿಕೊಳ್ಳುತ್ತವೆ; ಪರಿಶುದ್ಧ ವೇದವಾದವಿದೆ, ಅದು ಪ್ರಗತಿಪರವಾಗಿ ಇಂದ್ರಿಯ ಗೋಚರವಾಗುವ ರೀತಿಯಲ್ಲಿ ಶಾಶ್ವತವಾಗಿ ಪರಮೋಚ್ಚನನ್ನು ತೆರೆದು ತೋರಿಸುತ್ತದೆ. ತನ್ನ ಅಭಿರುಚಿಗನುಗುಣವಾಗಿ ಒಬ್ಬ ತನ್ನನ್ನು ಇಲ್ಲಿ, ಇನ್ನೊಬ್ಬ ಅಲ್ಲಿ ಇಲ್ಲವೆ ಮತ್ತೆಲ್ಲಿಯೋ ಮಧ್ಯೆ ಬರುವ ಸೂಕ್ಷ್ಮವ್ಯತ್ಯಾಸಗಳೊಂದಿಗೆ ಇರಿಸಿಕೊಳ್ಳುತ್ತಾರೆ. ಆದರೆ ಶ್ರೀ ಅರವಿಂದರು ಅತ್ಯಂತ ಇಡಿಯಾದ ಸತ್ಯ ಎಂದು ಭಾವನೆಗೆ ತಂದುಕೊಂಡುದುದರ ಪ್ರಕಾರ, ಪ್ರಗತಿಪರ ವಿಶ್ವವೆಂದು ಕಲ್ಪನೆ ಮಾಡಿಕೊಂಡುದುದರ ಪ್ರಕಾರ, ಪ್ರತಿಕ್ಷಣ ಸಂಭವಿಸುವು–ದೆಲ್ಲವನ್ನು ಇಡಿಯಾದುದನ್ನು ತೆರೆದಿರಿಸುವುದಕ್ಕೆ ಎಂದು ಹೇಳುವತ್ತ ಮನುಷ್ಯನನ್ನು

ಕರೆದೊಯ್ಯಲಾಗುತ್ತದೆ: ಅದು ಪರಿಪೂರ್ಣವಾಗಿ ತರ್ಕಬದ್ಧವಾಗಿರುತ್ತದೆ. ಎಲ್ಲ ವೈರುಧ್ಯಗಳು ಹೆಚ್ಚುಕಡಿಮೆ ಇದರತ್ತ ಇಲ್ಲವೆ ಅದರತ್ತ ಇಲ್ಲವೆ ಒಂದು ನಿಲುವಿನಿಂದ ಇನ್ನೊಂದು ನಿಲುವಿನತ್ತ ಬಲವಾದ ಪ್ರವೃತ್ತಿ ಹೊಂದಿರುವುದರಿಂದ, ಮೇಲೆದ್ದು ಬರಬಲ್ಲವು ಎಂದು ನಾನು ನಂಬುತ್ತೇನೆ. 'ಪಾಪ' ಮತ್ತು 'ದೋಷ' ಇವುಗಳ ಅನಧಿಕೃತ ಪ್ರವೇಶವನ್ನು ಮತ್ತು ಅದರಿಂದ ಉಂಟಾಗುವ ಸಂಘರ್ಷವನ್ನು ಒಪ್ಪಿಕೊಳ್ಳುವವರು ಆ ಸಾಧ್ಯತೆಯನ್ನು ಕುರಿತು ಸ್ವಾಭಾವಿಕವಾಗಿ ವಾದ ಮಾಡಬಹುದು, ಆ ಸಂಘರ್ಷ ಮುಂದೆ ಜಗ್ಗುವ ಹಾಗೂ ಹಿಂದೆ ಜಗ್ಗುವ ಶಕ್ತಿಗಳಿಂದಾಗಿರುತ್ತದೆ. ಆಧ್ಯಾತ್ಮಿಕವಾಗಿ ಪರಮೋಚ್ಚ ಸಂಕಲ್ಪ ಇಲ್ಲವೆ ಪರಮೋಚ್ಚ ಸತ್ಯದೊಂದಿಗೆ ಸಂಬಂಧ ಕಲ್ಪಿಸಿಕೊಂಡವರಿಗೆ ಅವಶ್ಯವಾಗಿ ಪ್ರತಿಕ್ಷಣ ಸಂಭವಿಸುವ ಅತ್ಯಂತ ಒಳ್ಳೆಯದು ಅವರ ವೈಯಕ್ತಿಕ ಸಿದ್ಧಿಗಾಗಿ ಇರುತ್ತದೆ ಎಂದು ಹೇಳಬಹುದು. ಎಲ್ಲ ಸಂದರ್ಭಗಳಲ್ಲಿ ಅದು ಹಾಗಿರುತ್ತದೆ. ವಿಶ್ವವನ್ನು ಪರಮೋಚ್ಚ ತನ್ನ ಬಗೆಗಿನ ಸ್ವ–ಅರಿವನ್ನು ತೆರೆದಿರಿಸುವುದಾಗಿದೆ ಎಂದು ನೋಡುವವನಿಗೆ ಮಾತ್ರ ಷರತ್ತಿಲ್ಲದ ಅತ್ಯಂತ ಒಳ್ಳೆಯದಾದುದನ್ನು ಒಪ್ಪಿಸಿಕೊಡಬಹುದು.

**CWM, 4/214** **– ಶ್ರೀಮಾತೆ**

*

**ವಿಶ್ವದ ಸುರುಳಿ ವಕ್ರ (spiral) ದ ಚಲನೆ**

ಇಡೀ ಸೃಷ್ಟಿ ಸೃಷ್ಟಿಕರ್ತನೊಂದಿಗೆ ಏಕತೆ ಪಡೆಯುವತ್ತ ಚಲಿಸುತ್ತಿದೆ ಎಂದು ಹೇಳಬಹುದು, ಆದರೆ ಮೊಟ್ಟಮೊದಲು ಇಡೀ ಉತ್ಕ್ರಾಂತಿಕಾರಕ ಚಲನೆ ಸುರುಳಿ ವಕ್ರ ಚಲನೆಯಾಗಿದೆ ಎಂಬ ವಾಸ್ತವ ಸಂಗತಿ ಇದೆ. ಮತ್ತು ಈ ಸುರಳಿ ವಕ್ರದಲ್ಲಿ ಅಸಂಖ್ಯಾತ ಬಿಂದುಗಳಿವೆ, ಪ್ರತಿ ಬಿಂದುವಿನ ಊರ್ಧ್ವ ದಿಶೆಯಲ್ಲಿ ಪ್ರಗತಿ–ಯೊಂದನ್ನು ಸಾಧಿಸಲಾಗುತ್ತದೆ. ಆದರೆ ಅದೇ ಬಿಂದುವಿಗೆ ಮರಳಿ ಬರಲು ಮನುಷ್ಯ ಒಂದು ಇಡೀ ಸುತ್ತನ್ನು ಹಾಕಬೇಕಾಗುತ್ತದೆ, ಆದರೆ ಮರಳಿ ಬಂದಾಗ ಆ ಬಿಂದು ಸ್ವಲ್ಪ ಉಚ್ಚತರ ಮಟ್ಟದಲ್ಲಿರುತ್ತದೆ, ಮತ್ತು ಹಾಗಾಗಿ ಎಲ್ಲ ಕಾಲದಲ್ಲೂ ಇತರ ಕಾರ್ಯಗಳನ್ನು ಕೈಕೊಳ್ಳುತ್ತೀರಿ, ಬೇರೆ ಬಿಂದುಗಳನ್ನು ತಲುಪುತ್ತೀರಿ, ಮೊದಲನೆಯದನ್ನು ಮರೆತ ಹಾಗಿರುತ್ತದೆ, ಮಾನವ ಇತಿಹಾಸದಲ್ಲಿ ಅದನ್ನು ತರ್ಜುಮೆ ಮಾಡಿದ್ದು ಹೀಗಿದೆ:

ವೈಜ್ಞಾನಿಕ ದೃಷ್ಟಿಕೋನದಿಂದ, ಕಲಾತ್ಮಕ ದೃಷ್ಟಿಕೋನದಿಂದ, ರಾಜಕೀಯ, ಸಂಘಟನಾತ್ಮಕ ಹಾಗೂ ಸಾಮಾಜಿಕ ದೃಷ್ಟಿಕೋನಗಳಿಂದಲೂ ಕೂಡ ಅಸಾಧಾರಣ ಉತ್ಪಾದನೆಗಳಿರುವ ಅದ್ಭುತ ನಾಗರಿಕತೆಯೊಂದು ಅಲ್ಲಿದೆ. ಅಲ್ಲಿ ಸೊಗಸಾದ ನಾಗರಿಕತೆಗಳಿದ್ದವು, ಅವು ಭಾರತವನ್ನು ಅಫ್ರಿಕಾದೊಂದಿಗೆ ಜೋಡಿಸುವ ಭೂಖಂಡದ ರಹಸ್ಯ ನೆನಪನ್ನು ಉಳಿಸಿಕೊಟ್ಟಿವೆ, ಉದಾಹರಣೆಗೆ ಅವುಗಳ ಗುರುತು ಉಳಿದುಕೊಂಡಿಲ್ಲ. (ಮಾನವಕುಲಗಳು ಆ ನಾಗರಿಕತೆಯ ಅಲ್ಪಾವಶೇಷಗಳಾಗಿರಬಹುದು). ಆ ಬಗೆಯ ನಾಗರಿಕತೆಗಳಿವೆ, ಅವು ಹಠಾತ್ತನೆ ಮಾಯವಾಗುತ್ತವೆ, ಅದರ ನಂತರ ಅಂಧಕಾರ, ಅಪ್ರಜ್ಞೆ, ಅಜ್ಞಾನ ಇವುಗಳಿಂದ ತುಂಬಿಕೊಂಡಿರುವ, ಒಟ್ಟಿನಲ್ಲಿ ಆದಿಕಾಲದ ಕುಲಗಳು ಅನುಸರಿಸಿ ಬರುತ್ತವೆ, ಆ ಕುಲಗಳು ಪಶುಗಳಿಗೆ ಅತಿ ಹತ್ತಿರವಾಗಿರುತ್ತವೆ, ಅವುಗಳಲ್ಲಿ ಏನಾದರೂ ಭೇದವಿದೆಯೆ ಎಂದು ಮನುಷ್ಯ ಕೇಳಬಹುದು. ಮತ್ತು ಹಾಗಾಗಿ ಆ ಅಂಧಕಾರದಲ್ಲಿ ದೊಡ್ಡ ರಂಧ್ರವಿರುತ್ತದೆ, ಅದು ಎಲ್ಲ ಬಗೆಯ ಅವ್ಯವಸ್ಥೆಗಳ ಮೂಲಕ ಸಾಗಿ ಹೋಗುತ್ತದೆ. ನಂತರ ಒಮ್ಮೆಗೆ ಅದು ಮೇಲೆದ್ದು ಬರುತ್ತದೆ, ಅದರ ಮಟ್ಟ ಉಚ್ಚತರವಾಗಿರುತ್ತದೆ, ಶ್ರೇಷ್ಠತರ ಸದ್ಗುಣಗಳಿರುತ್ತವೆ, ಶ್ರೇಷ್ಠತರ ಸಿದ್ಧಿಯಿರುತ್ತದೆ, ಅದು ಆ ನಿಶೆಯಾದ್ಯಂತ, ನಿಶೆ ಭೌತದ್ರವ್ಯವನ್ನು ತಯಾರು ಮಾಡಿದ ಹಾಗಿರುತ್ತದೆ, ಅದರಿಂದಾಗಿ ಭೌತದ್ರವ್ಯ ಉಚ್ಚತರವಾದ ಏನೋ ಒಂದನ್ನು ಅಭಿವ್ಯಕ್ತಪಡಿಸುವಂತಾಗುತ್ತದೆ. ನಂತರ ಮತ್ತೊಂದು ಅಂಧಕಾರ, ವಿಸ್ಮೃತಿ: ಪೃಥ್ವಿ ಮತ್ತೆ ಅನಾಗರಿಕ, ಮಬ್ಬಾದದ್ದು, ಅಜ್ಞಾನದ್ದು ನೋವಿನಿಂದ ಕೂಡಿಕೊಂಡತಹದು ಆಗುತ್ತದೆ. ಮತ್ತು ಹಠಾತ್ತನೆ, ಸಾವಿರಾರು ವರ್ಷಗಳ ನಂತರ ಹೊಸ ನಾಗರಿಕತೆ ಬರುತ್ತದೆ.

ಹಾಗಾಗಿ ನೀವು ಅದರತ್ತ ಕೆಳಗಿನಿಂದ ನೋಡುತ್ತೀರಿ, ನಿಮಗೆ ನೀವೇ "ಪ್ರಗತಿ ಎಲ್ಲಿದೆ?" ಎಂದು ನಿಮಗೇ ಕೇಳಿಕೊಳ್ಳುತ್ತೀರಿ. ಏಕೆಂದರೆ ಅದು ಯಾವಾಗಲೂ ಮಾಯವಾಗುತ್ತದೆ, ಕುಸಿದು ಬೀಳುತ್ತದೆ ಇಲ್ಲವೆ ಕೊಳೆಯುತ್ತದೆ, ಸಂಪೂರ್ಣವಾಗಿ ಹಾಳಾಗುತ್ತದೆ ಮತ್ತು ಅದನ್ನು ಮರೆತುಬಿಡಲಾಗುತ್ತದೆ ಮತ್ತು ಮನುಕುಲ ಮತ್ತೊಮ್ಮೆ ಬಹಳ ಸಾದಾ, ಅವ್ಯವಸ್ಥಿತ, ಅರ್ಧಮಬ್ಬಿನಲ್ಲಿ ಅಂಗಲಾಚುತ್ತಿರು–ವಂತಹದು ಆಗುತ್ತದೆ. ಮತ್ತು ಆದಾಗ್ಯೂ ಹಠಾತ್ತನೆ ಅಲ್ಲಿ ಜ್ಞಾನೋದಯವಿರುತ್ತದೆ. ಮತ್ತು ಮನುಷ್ಯ ಜ್ಞಾನೋದಯದ ಮಧ್ಯದಲ್ಲಿದ್ದಾಗ; ಈಗ ನಾವು ಅದನ್ನು

ಹೊಂದಿದ್ದೇವೆ, ಅದು ಸರಿಯಾದ ವಿಷಯ, ನಾವು "ಈಗ ಮತ್ತೆ ಪತನಗೊಳ್ಳಬಾರದು" ಎಂದು ಹೇಳುತ್ತಾನೆ.

ಇಲ್ಲಿಯವರೆಗೆ ಯಾವಾಗಲೂ ಮರುಕಳಿಕೆ (relapse) ಉಂಟಾಗುತ್ತ ಬಂದಿದೆ.

**CWM, 5/247–48** – **ಶ್ರೀಮಾತೆ**

*



## ಜೀವನದ ಯುದ್ಧ ಭೂಮಿ

ಜಗತ್ತನ್ನು ಆದಿದ್ದ ಹಾಗೆ ತೆಗೆದುಕೊಳ್ಳಬೇಕಾಗಿರುವ, ಕಾರ್ಯಕೈಕೊಳ್ಳಬೇಕಾಗಿರುವ ಆದಾಗ್ಯೂ ಅಂತರಂಗದಲ್ಲಿ ಆಧ್ಯಾತ್ಮಿಕ ಜೀವನ ನಡೆಸಬೇಕಾಗಿರುವ ಮನುಷ್ಯನಿಗೆ ಯಾವುದು ತೊಂದರೆಯನ್ನು ಉಂಟುಮಾಡುತ್ತದೆ? ಎಚ್ಚತ್ತುಕೊಂಡ ಮನುಷ್ಯನಿಗೆ ಇಷ್ಟವಾಗುವ, ಗೀತೆಯಲ್ಲಿ ಪ್ರಾಮುಖ್ಯತೆ ನೀಡಿ ಅರ್ಜುನನ ವಿಷಾದಯೋಗ ಎಂಬಂತಹದು ಆಗುವಂತೆ ಮಾಡುವ ಅಸ್ತಿತ್ವದ ಈ ಮುಖ ಯಾವುದು? ವಿಶ್ವದ ಸಾರ್ವಜನಿಕ ದೃಶ್ಯವನ್ನು ಎದುರಿಸುವಂತೆ ಒತ್ತಾಯಕ್ಕೊಳಗಾದ ಮನುಷ್ಯನಲ್ಲಿ ಉಂಟಾಗುವ ಖಿನ್ನತೆ ಹಾಗೂ ಎದೆಗುಂದುವಿಕೆ ಆ ವಿಷಾದದಂತಿರುವುದಿಲ್ಲವೆ? ಆ ದೃಶ್ಯವನ್ನು ಅವನು ನೈತಿಕತೆಯ ಭ್ರಮೆ, ಸ್ವಧರ್ಮಿಷ್ಠಮನ್ಯತೆಯ ಭ್ರಮೆ ಇವುಗಳ ಪರದೆಯನ್ನು ತನ್ನೊಡನೆ ಉಚ್ಚತರ

ರೀತಿಯಲ್ಲಿ ರಾಜೀಮಾಡಿಕೊಳ್ಳುವುದು ಪರಿಣಾಮಕಾರಿ–ಯಾಗುವವರೆಗೆ ಅವನ ಕಣ್ಣುಗಳಿಂದ ಕಿತ್ತು ಹಾಕಲಾದೀತೆ? ಆ ಮುಖವೇ ಕುರುಕ್ಷೇತ್ರದ ಹತ್ಯಾಕಾಂಡ ಹಾಗೂ ಸಾಮೂಹಿಕ ಕೊಲೆ ಇವುಗಳ ರೂಪದಲ್ಲಿ ಆಕಾರ ತಳೆಯಿತು ಮತ್ತು ಆಧ್ಯಾತ್ಮಿಕವಾಗಿ ಎಲ್ಲ ವಸ್ತು–ವಿಷಯಗಳ ದೈವೀಪ್ರಭುವಿನ ದರ್ಶನದ ಮೂಲಕ ದೈವೀಕಾಲಗತಿ ತಾನು ನಿರ್ಮಾಣ ಮಾಡಿದ ಜೀವಿಗಳನ್ನು ನುಂಗಿ ಹಾಕಲು, ನಾಶಮಾಡಲು ಮೇಲೆದ್ದು ಬಂದಿತ್ತು. ಇದು ವಿಶ್ವಂಭರ ಸೃಷ್ಟಿಕರ್ತನಾಗಿರುವ ಎಲ್ಲ ಅಸ್ತಿತ್ವಗಳ ಪ್ರಭುವಿನದಿರುವ ಹಾಗೆಯೇ ವಿಶ್ವಂಭರ ವಿಧ್ವಂಸಕನ ದರ್ಶನ; ಅವನನ್ನು ಕುರಿತು ಪ್ರಾಚೀನ ಶಾಸ್ತ್ರಗಳು ನಿರ್ದಯ ಪ್ರತೀಕದಲ್ಲಿ: “ಸಂತರು, ಮಹಾಸಾಹಸಿಗಳು ಅವನ ಆಹಾರ, ಮೃತ್ಯು ಅವನ ಔತಣದಲ್ಲಿಯ ಮಸಾಲೆ” ಎಂದು ಹೇಳಬಲ್ಲವು. ಅದು ಅದೇ ಆದ ಸತ್ಯ, ಜೀವನದ ವಾಸ್ತವ ಸಂಗತಿಗಳಲ್ಲಿ ಮೊದಲು ಅಪ್ರತ್ಯಕ್ಷವಾಗಿ, ಮಬ್ಬಾದ ರೀತಿಯಲ್ಲಿ ಕಂಡುಕೊಂಡದ್ದು ಮತ್ತು ನೇರವಾಗಿ ಸ್ಪಷ್ಟವಾಗಿ ಆತ್ಮದ ದರ್ಶನದಲ್ಲಿ ತಾನೇ ಸ್ವತಃ ಜೀವನದಲ್ಲಿ ಪ್ರಕಟವಾದದ್ದನ್ನು ಕಂಡುಕೊಂಡಿರುವುದಾಗಿರುತ್ತದೆ. ಬಾಹ್ಯಮುಖ ವಿಶ್ವದ ಅಸ್ತಿತ್ವ ಹಾಗೂ ಮಾನವನ ಅಸ್ತಿತ್ವ, ಇವು ಹೋರಾಟ ಹಾಗೂ ಹತ್ಯೆ ಇವುಗಳ ಮೂಲಕ ಮುಂದುವರಿದುಕೊಂಡು ಹೋಗುವಂತಹವು, ಆಂತರಿಕ ಮುಖ ವಿಶ್ವಂಭರ ದೈವೀಸತ್ತೆ ತನ್ನ ನೆರವೇರಿಕೆಯನ್ನು ವಿಶಾಲ ಸೃಷ್ಟಿಯಲ್ಲಿ ಹಾಗೂ ವಿಶಾಲ ವಿನಾಶದಲ್ಲಿ ಕಂಡುಕೊಳ್ಳುವಂತಹದು.

**CWSA, 19/39–40** **– ಶ್ರೀ ಅರವಿಂದರು**

*

**ಯುದ್ಧ ಹಾಗೂ ವಿನಾಶ**

ಯುದ್ಧ ಹಾಗೂ ವಿನಾಶಗಳು ಅವುಗಳ ಕೇವಲ ಭೌತಿಕ ಮುಖಗಳಲ್ಲಿ ವಿಶ್ವಂಭರ ತತ್ವವಾಗಿಯಷ್ಟೇ ಅಲ್ಲ, ಆದರೆ ನಮ್ಮ ಮಾನಸಿಕ ಹಾಗೂ ನೈತಿಕ ಅಸ್ತಿತ್ವದಲ್ಲಿ ಕೂಡ ಇವೆ. ಬೌದ್ಧಿಕ, ಸಾಮಾಜಿಕ, ರಾಜಕೀಯ ಹಾಗೂ ನೈತಿಕವಾಗಿರುವ ಮನುಷ್ಯನ ವಾಸ್ತವ ಜೀವನದಲ್ಲಿ ಹೋರಾಟವಿಲ್ಲದೆ, ಸಮರವಿಲ್ಲದೆ ನಾವು ನಿಜವಾದ ಒಂದು ಹೆಜ್ಜೆಯನ್ನೂ ಇರಿಸಲಾಗುವುದಿಲ್ಲ, ಆ ಹೋರಾಟ ಹಾಗೂ ಸಮರ ಅಸ್ತಿತ್ವದಲ್ಲಿರುವ ಹಾಗೂ ಜೀವಿಸುವ ಮತ್ತು ಯಾವುದು ಅಸ್ತಿತ್ವದಲ್ಲಿರಲು ಹಾಗೂ ಜೀವಿಸಲು ಬಯಸುತ್ತದೆಯೋ ಅವುಗಳ

ನಡುವೆ ಇರುತ್ತವೆ. ಜನರು, ವಸ್ತು–ವಿಷಯಗಳು ಅವಿರುವ ಹಾಗೆ ಇದ್ದಾಗ ಮುಂದುವರಿದು ಹೋಗುವುದು, ಬೆಳೆಯುವುದು, ನೆರವೇರಿಕೆ ಕಂಡುಕೊಳ್ಳುವುದು ಮತ್ತು ಇನ್ನೂ ನಿರುಪದ್ರವತೆಯ ತತ್ವವನ್ನು ನಿಜವಾಗಿ, ಸಂಪೂರ್ಣವಾಗಿ ಲಕ್ಷ್ಯವಿಟ್ಟು ಗಮನಿಸುವುದು ಅಸಾಧ್ಯವಾಗಿರುತ್ತದೆ, ಆದಾಗ್ಯೂ ಆ ನಿರುಪದ್ರವತೆ–ಯನ್ನು ನಮ್ಮೆದುರಿಗೆ ನಡತೆಯ ಅತ್ಯುಚ್ಚ ಹಾಗೂ ಅತ್ಯಂತ ಒಳ್ಳೆಯದಾದ ನಿಯಮವೆಂದು ಇರಿಸಲಾಗಿದೆ. ನಾವು ಕೇವಲ ಆತ್ಮದ ಶಕ್ತಿಯನ್ನು ಉಪಯೋಗಿಸುತ್ತೇವೆ ಮತ್ತು ಎಂದಿಗೂ ಯುದ್ಧದ ಮೂಲಕ ನಾಶಮಾಡುವುದಿಲ್ಲ, ಭೌತಿಕ ಹಿಂಸೆಯನ್ನು ತಡೆಯುವ ರಕ್ಷಣಾತ್ಮಕವಾದದ್ದನ್ನು ಉಪಯೋಗಿಸುವುದಿಲ್ಲ? ಒಳ್ಳೆಯದು, ಆದಾಗ್ಯೂ ಆತ್ಮಶಕ್ತಿ ಪರಿಣಾಮಕಾರಿಯಾಗುವವರೆಗೆ, ಮನುಷ್ಯ–ರಲ್ಲಿರುವ, ಮತ್ತು ದೇಶಗಳಲ್ಲಿರುವ ಆಸುರೀ ಶಕ್ತಿ, ಇಂದು ಕೈಕೊಳ್ಳುತ್ತಿರುವ ಹಾಗೆ, ತುಳಿದು ಹಾಕುತ್ತದೆ, ಹತ್ಯೆಗೈಯುತ್ತದೆ, ಮಲಿನಗೊಳಿಸುತ್ತದೆ, ಆದರೆ ನೀವು ವಿರಾಮ ಸ್ಥಿತಿಯಲ್ಲಿ ಅಡ್ಡಿಪಡಿಸದೆ ಹಿಂಸೆಯನ್ನು ವರ್ಜಿಸಿ ಉಳಿದುಕೊಂಡಾಗ ಇತರರು ಹಿಂಸೆಯ ಮೂಲಕ ಕೈಕೊಳ್ಳುವಷ್ಟು ಜೀವನಾಶ ಮಾಡುತ್ತೀರಿ, ಆದಾಗ್ಯೂ ನೀವೊಂದು ಆದರ್ಶವನ್ನಿರಿಸಿರುತ್ತೀರಿ ಅದು ಒಂದು ದಿನ, ಏನೇ ಆಗಲಿ, ಹೆಚ್ಚು ಒಳ್ಳೆಯ ವಿಷಯಗಳತ್ತ ಕೊಂಡೊಯ್ಯಬೇಕು. ಆದರೆ ಆತ್ಮ–ಶಕ್ತಿಯೂ ಕೂಡ, ಅದು ಪರಿಣಾಮಕಾರಿಯಾದಾಗ, ನಾಶಮಾಡುತ್ತದೆ. ಅದನ್ನು ತೆರೆದ ಕಣ್ಣಿನಿಂದ ನೋಡಿದವರು ಮಾತ್ರ ಅದೆಷ್ಟು ಹೆಚ್ಚಿನ ರೀತಿಯಲ್ಲಿ ಭಯಾನಕ ಹಾಗೂ ವಿನಾಶಕಾರಕ ಆಗಿರುತ್ತದೆಂಬುದನ್ನು ತಿಳಿದುಕೊಳ್ಳಬಲ್ಲರು, ಅದು ಖಡ್ಗ, ತೋಪುಗಳನ್ನು ಉಪಯೋಗಿಸಿದಾಗ ಆಗುವುದಕ್ಕಿಂತ ಹೆಚ್ಚಿನದಾಗಿರುತ್ತದೆ, ತಮ್ಮ ದೃಷ್ಟಿಯನ್ನು ಕೇವಲ ಆ ಕ್ರಿಯೆಗೆ ಹಾಗೂ ಕೂಡಲೆ ಸಂಭವಿಸುವ ಅದರ ಪರಿಣಾಮಗಳಿಗೆ ಸೀಮಿತಗೊಳಿಸದೆ ಇದ್ದವರು ಅದರ ನಂತರದ ಪರಿಣಾಮಗಳು ಎಷ್ಟು ದಿಗ್ಭ್ರಮೆಗೊಳಪಡಿಸುವಂತಹವು ಆಗಿರುವವೆಂ–ಬುದನ್ನು, ಕೊನೆಯದಾಗಿ ಎಷ್ಟನ್ನು ನಾಶಮಾಡಲಾಯಿತು ಎಂಬುದನ್ನು, ಅದರೊಂದಿಗೆ ಅದರ ಮೇಲೆ ಅವಲಂಬಿಸಿದ್ದ ಹಾಗೂ ಉಪಜೀವನ ನಡೆಸುತ್ತಿದ್ದುದು ನಾಶವಾಯಿತು ಎಂಬುದನ್ನು ನೋಡಬಲ್ಲರು. ಅನಿಷ್ಟದ ಮೂಲಕ ಜೀವಿಸುವುದರಲ್ಲಿಯ ಹೆಚ್ಚಿನದನ್ನು ನಾಶಮಾಡದಿದ್ದರೆ ಅನಿಷ್ಟ ಮಾಯವಾಗು–ವುದಿಲ್ಲ ಮತ್ತು ವೈಯಕ್ತಿಕವಾಗಿ ಹಿಂಸೆಯ ಕ್ಷೋಭೆಕಾರಿ ಕಾರ್ಯಕೈಕೊಳ್ಳು–

ವುದರಿಂದ ಉಳಿದುಕೊಂಡಿದ್ದಾಗ್ಯೂ ಕೂಡ ವಿನಾಶ ಕಡಿಮೆ ರೀತಿಯ–ದಾಗಿರುವುದಿಲ್ಲ.

**CWSA, 19/42** **– ಶ್ರೀ ಅರವಿಂದರು**

*

ಜೀವನ ಯುದ್ಧ ಭೂಮಿಯಾಗಿದೆ.

**– ಶ್ರೀಮಾತೆ**

*

**ಕಲಿಯ ಎರಡು ಮುಖಗಳು**

. . . ಹೋರಾಟ ಹಾಗೂ ವಿನಾಶ ಇವುಗಳಲ್ಲಿ ಒಂದು ಮೊದಲನೆಯದು ಹಾಗೂ ಇನ್ನೊಂದು ಕೊನೆಯದು, ಸಾಮರಸ್ಯ ಯುದ್ಧಕ್ಕಿಂತ ಶ್ರೇಷ್ಠವಾದದ್ದಲ್ಲ, ಪ್ರೇಮ ಮೃತ್ಯುವಿಗಿಂತ ಹೆಚ್ಚು ಪ್ರಕಟವಾಗಿಲ್ಲ ಎಂದು ಹೇಳುವುದಲ್ಲ, ಇಲ್ಲವೆ ಭೌತಿಕ ಶಕ್ತಿಯ ಸ್ಥಾನದಲ್ಲಿ ಆತ್ಮದ ಶಕ್ತಿಯನ್ನು ತರುವುದನ್ನು, ಯುದ್ಧವನ್ನು ಶಾಂತಿಯಿಂದ, ಹೋರಾಟವನ್ನು ಏಕತೆಯಿಂದ, ನುಂಗಿ–ಹಾಕುವುದನ್ನು ಪ್ರೇಮದಿಂದ, ಅಹಂಕಾರವನ್ನು ವಿಶ್ವಂಭರತೆಯಿಂದ ಮೃತ್ಯುವನ್ನು ಅಮರತ್ವದಿಂದ ಸ್ಥಾನಾಂತರಿಸುವತ್ತ ನಾವು ಚಲಿಸಬಾರದು ಎಂದಿಲ್ಲ. ದೇವ ವಿಧ್ವಂಸಕ ಮಾತ್ರವಾಗಿಲ್ಲ, ಆದರೆ ಜೀವಿಗಳ ಮಿತ್ರನಾಗಿದ್ದಾನೆ, ವಿಶ್ವವ್ಯಾಪಿ ತ್ರಿಮೂರ್ತಿತ್ವ ಮಾತ್ರವಲ್ಲ, ವಿಶ್ವಾತೀತನೂ ಆಗಿದ್ದಾನೆ, ಭಯಾನಕ ಕಲಿ ಪ್ರೀತಿಸುವ, ಉಪಕಾರಿಯಾದ ಮಾತೆಯಾಗಿದ್ದಾನೆ; ಕುರುಕ್ಷೇತ್ರದ ಪ್ರಭು ದೈವೀ ಜೊತೆಗಾರ, ಹಾಗು ಸಾರಥಿ, ಸತ್ತೆಗಳನ್ನು ಆಕರ್ಷಿಸುವವನು ಅವತಾರ ಪುರುಷ ಶ್ರೀಕೃಷ್ಣನಾಗಿದ್ದಾನೆ. ಎಲ್ಲ ಹೋರಾಟ, ಸಂಘರ್ಷ ಹಾಗೂ ಗೊಂದಲಗಳಾದ್ಯಂತ ಅವನು ಕರೆದೊಯ್ಯುತ್ತಿರಲಿ, ಯಾವುದೇ ಗುರಿ ಇಲ್ಲವೆ ದೇವ ಪ್ರಮುಖನತ್ತ ನಮ್ಮನ್ನು ಆಕರ್ಷಿಸುತ್ತಿರಲಿ, ಅದು– ಅದರಲ್ಲಿ ಸಂಶಯವಿಲ್ಲ– ಈ ಎಲ್ಲ ಮುಖಗಳಾಚೆಗೆ ಕರೆದೊಯ್ಯುವುದಾಗಿರುತ್ತದೆ. ಈ ಮುಖಗಳ ಮೇಲೆ ನಾವು ದೃಢವಾಗಿ ಒತ್ತುಕೊಡುತ್ತೇವೆ. ಆದರೆ ಎಲ್ಲಿ, ಹೇಗೆ, ಯಾವ ಬಗೆಯ ಅತೀತತೆಯೆಡೆಗೆ, ಯಾವ ಪರಿಸ್ಥಿತಿಗಳಡಿಯಲ್ಲಿ ಎಂಬುದನ್ನು ನಾವು ಶೋಧಿಸಬೇಕು ಮತ್ತು ಅದನ್ನು ಶೋಧಿಸುವುದಕ್ಕೆ ಮೊದಲ ಆವಶ್ಯಕತೆ ಜಗತ್ತನ್ನು

ಅದಿದ್ದ ಹಾಗೆ ನೋಡುವುದಾಗಿದೆ, ಅವನ ಕ್ರಿಯೆಯನ್ನು, ಅದು ಪ್ರಾರಂಭದಲ್ಲಿ ಹಾಗೂ ಈಗ ತನ್ನನ್ನು ತೆರೆದು ತೋರಿಸಿಕೊಡುವುದನ್ನು ಗಮನಿಸಬೇಕು; ನಂತರ ಆ ಮಾರ್ಗ ಹಾಗೂ ಗುರಿ ಹೆಚ್ಚು ಚೆನ್ನಾಗಿ ತಮ್ಮನ್ನು ತೆರೆದು ತೋರಿಸುವವು. ನಾವು ಕುರುಕ್ಷೇತ್ರವನ್ನು ಒಪ್ಪಿಕೊಳ್ಳಬೇಕು, ಅಮರ ಜೀವನದತ್ತ ನಮ್ಮ ಮಾರ್ಗ ಕಂಡುಕೊಳ್ಳಲು ಮೊದಲು ನಾವು ಮೃತ್ಯುವಿನ ಮೂಲಕ ಇರುವ ಜೀವನಕ್ಕೆ ಅಧೀನರಾಗಬೇಕು; ಅರ್ಜುನನಿಗಿಂತ ಕಡಿಮೆ ರೀತಿಯಲ್ಲಿ ಭಯಭೀತರಾಗಿ ನಮ್ಮ ಕಣ್ಣುಗಳನ್ನು ಕಾಲಗತಿಯ ಹಾಗೂ ಮೃತ್ಯುವಿನ ಪ್ರಭುವಿನ ದರ್ಶನದತ್ತ ತೆರೆದಿರಿಸಬೇಕು ಮತ್ತು ಅವನನ್ನು ನಿರಾಕರಿಸುವುದನ್ನು, ದ್ವೇಷಿಸುವುದನ್ನು, ಅವನಿಂದ ಹಿಂಜರಿಯುವುದನ್ನು ನಿಲ್ಲಿಸಬೇಕು.

**CWSA, 19/45–46** **– ಶ್ರೀ ಅರವಿಂದರು**

*

**ಎಲ್ಲ ವಸ್ತು–ವಿಷಯಗಳಲ್ಲಿ ಯೋಗಿ ದೇವನನ್ನು ನೋಡುತ್ತಾನೆ**

ಧೀರನಾದವನು ಪ್ರತಿಯೊಂದು ಘಟನೆಯತ್ತ ಸೂಕ್ಷ್ಮವಾಗಿ ನೋಡುತ್ತಾನೆ, ಒಮ್ಮೆಗೆ ಕಂಡುಕೊಳ್ಳುವುದು ಅವನಿಗೆ ಸಾಧ್ಯವಾಗದೆ ಹೋದರೆ ಅದರ ಕೊನೆಯ ಉದ್ದೇಶಕ್ಕೆ, ಹೊರಹರಿತಕ್ಕೆ ಕಾರಣ ಕಂಡುಕೊಳ್ಳುವುದಕ್ಕೆ ಜ್ಞಾನೋದಯವಾಗು–ವವರೆಗೆ ಹಾಗೆ ಕಾದುಕೊಂಡಿದ್ದಾಗ, ಸ್ಥಿರವಾಗಿ ಪರಿಗಣಿಸುತ್ತಿದ್ದಾಗ ಜೀವನದ ಅರ್ಥ ಮನಸ್ಸಿಗೆ ಹೊಳೆಯುತ್ತದೆ, ಚಿಕ್ಕ ಇಲ್ಲವೆ ದೊಡ್ಡ ವಸ್ತು–ವಿಷಯಗಳಲ್ಲಿ, ಒಳ್ಳೆಯ ಹಾಗು ಕೆಟ್ಟ ಸಂಭವಿಸುವಿಕೆಗಳಲ್ಲಿ ಅನಂತ ಉದ್ದೇಶವೊಂದು ತನ್ನನ್ನು ತೆರೆದು ತೋರಿಸುತ್ತದೆ: ಸರ್ವಸಮರ್ಥ ದೈವಾನುಗ್ರಹ ಗುಬ್ಬಿಯ ಪತನಗೊಳ್ಳು–ವಿಕೆಯಲ್ಲಿ, ಇರುವೆಯ ಮೃತ್ಯುವಿನಲ್ಲಿ, ಹಾಗೆಯೇ ದೊಡ್ಡಪಟ್ಟಣಗಳನ್ನು ನಾಶಮಾಡುವ ಭೂಕಂಪದಲ್ಲಿ, ಸಾವಿರಾರು ಜನರನ್ನು ನಿರ್ಗತಿಕರನ್ನಾಗಿ, ನಿರಾಶ್ರಿತರನ್ನಾಗಿ ಮಾಡುವ ಪ್ರವಾಹಗಳಲ್ಲಿ ತನ್ನನ್ನು ತೆರೆದು ತೋರಿಸುತ್ತದೆ. ರುದ್ರ ಮತ್ತು ಶಿವ ತಮ್ಮಲ್ಲಿ ಏಕವಾಗಿರುವುದನ್ನು ತೆರೆದು ತೋರಿಸುತ್ತಾರೆ. ಯೋಗಿ ಎಲ್ಲ ವಸ್ತು–ವಿಷಯಗಳಲ್ಲಿ ದೇವನನ್ನು ನೋಡುತ್ತಾನೆ, ಎಲ್ಲ ಸತ್ತೆಗಳಲ್ಲಷ್ಟೇ ಅಲ್ಲ, ಆದರೆ ಎಲ್ಲ ಘಟನೆಗಳಲ್ಲೂ ನೋಡುತ್ತಾನೆ. ಅವನೇ ಪ್ರವಾಹ, ಅವನೇ ಭೂಕಂಪ. ಉಚ್ಚತರ ಜೀವನಕ್ಕೆ ಕರೆದೊಯ್ಯುವ ಮೃತ್ಯು ಅವನೇ. ಉಚ್ಚತರ ದಿವ್ಯಾನಂದಕ್ಕೆ ನಮ್ಮನ್ನು ತಯಾರು ಮಾಡುವ ದೈವೀ ನೋವು ಅವನೇ. ಈ ವಿಷಯ ಕುರಿತು

ವಾದ ಮಾಡಲಿಕ್ಕಾಗುವುದಿಲ್ಲ, ಅದನ್ನು ಕೇವಲ ನೋಡಬೇಕು. 'ಪರಿಪಶ್ಯಂತಿ ಧೀರಾಃ'. ಸ್ಥಿರ ಹೃದಯಕ್ಕೆ ಹಾಗೂ ಗಲಿಬಿಲಿಗೊಳ್ಳದ ತಿಳಿವಳಿಕೆಗೆ ದರ್ಶನ ಪಡೆಯುವುದು ಸಾಧ್ಯವಾಗುತ್ತದೆ.

**CWSA, 13/61–62** **– ಶ್ರೀ ಅರವಿಂದರು**

*

**ಒಂದು ನಿರ್ಧಾರಕ ಸಮರ**

ಮನುಕುಲ ಉದ್ವಿಗ್ನತೆಯ ಸಾರ್ವತ್ರೀಕರಣಗೊಂಡ ಸ್ಥಿತಿಯನ್ನು ತಲುಪಿದೆ ಎಂಬ ವಿಷಯ ಸ್ಪಷ್ಟವಾಗಿದೆ ಎಂದು ತೋರಿಬರುತ್ತದೆ– ಪ್ರಯತ್ನದಲ್ಲಿ ಉದ್ವಿಗ್ನತೆ, ಕ್ರಿಯೆಯಲ್ಲಿ ಉದ್ವಿಗ್ನತೆ, ದೈನಂದಿನ ಜೀವನದಲ್ಲಿ ಉದ್ವಿಗ್ನತೆ– ಎಷ್ಟೊಂದು ಅತಿಯಾದ ಚಟುವಟಿಕೆ, ಎಷ್ಟೊಂದು ತಳಮಳ ಕೂಡಿಕೊಂಡಿರುತ್ತದೆ ಎಂದರೆ ಇಡಿಯಾದ ಜೀವಜಾತಿ ಒಂದು ಬಿಂದುವನ್ನು ತಲುಪಿದೆಯೇನೋ ಎನ್ನುವ ಹಾಗಿದೆ, ಅಲ್ಲಿ ಅದು ಪ್ರತಿರೋಧದ ಆದ್ಯಂತ ಸಿಡಿದು ಹೊರಗೆ ಬರಬೇಕು ಮತ್ತು ಹೊಸ ಪ್ರಜ್ಞೆಯಲ್ಲಿ ಉಕ್ಕೇರಿ ಮುಂದೆ ಬರಬೇಕು ಇಲ್ಲವೆ ಮಬ್ಬಿನ ಹಾಗೂ ಜಡತೆಯ ಆಳದಲ್ಲಿ ಮುಳುಗಿ ಹೋಗಬೇಕು.

ಈ ಉದ್ವಿಗ್ನತೆ ಎಷ್ಟೊಂದು ಇಡಿಯಾದುದು ಮತ್ತು ಸಾರ್ವತ್ರೀಕರಣ–ಗೊಂಡದ್ದು ಆಗಿದೆಯೆಂದರೆ ಸ್ಪಷ್ಟವಾಗಿ ಏನೋ ಒಂದು ಮುರಿದು ಹೊರಗೆ ಬರಬೇಕು. ಅದು ಹಾಗೆಯೇ ಮುಂದುವರಿದುಕೊಂಡು ಹೋಗುವುದು ಸಾಧ್ಯವಿಲ್ಲ. ಆದಾಗ್ಯೂ ಹೊಸ ಶಕ್ತಿ, ಪ್ರಜ್ಞೆ ಮತ್ತು ಸಾಮರ್ಥ್ಯ ಇವುಗಳ ತತ್ವವೊಂದನ್ನು ಭೌತದ್ರವ್ಯದಲ್ಲಿ ಬೆಸುಗೆಗೆ ಒಳಪಡಿಸಲಾಗಿದೆ ಮತ್ತು ಅದರ ಒತ್ತಡದ ಮೂಲಕ ಈ ತೀಕ್ಷ್ಣ ಸ್ಥಿತಿ ಉಂಟಾಗಿದೆ ಎಂಬುದು ಇದೆಲ್ಲದರ ಕುರುಹಾಗಿದೆ. ಬಾಹ್ಯದಲ್ಲಿ ಪ್ರಕೃತಿ ವಿಪ್ಲವ (upheaval) ವನ್ನು ಉಂಟುಮಾಡಬೇಕೆಂದು ಬಯಸಿದಾಗೆಲ್ಲ ಅದು ಹಳೆಯ ರೂಢಿಗತ ಸಾಧನಗಳನ್ನು ಉಪಯೋಗಿಸು–ವುದನ್ನು ನಾವು ನಿರೀಕ್ಷಿಸಬಹುದು; ಆದರೆ ಇಲ್ಲಿ ಹೊಸ ಗೋಚರ ಸಂಗತಿ ಇದೆ, ಸ್ಪಷ್ಟವಾಗಿ ಆಯ್ದ ಕೆಲವರಿಗೆ ಅದು ಗೋಚರವಾಗಬಹುದು, ಆದಾಗ್ಯೂ ಈ ಕಡಿಮೆ ಸಂಖ್ಯೆಯಲ್ಲಿರುವವರು ಸಾಕಷ್ಟು ವಿಸ್ತಾರವಾಗಿ ಹರಡಿಕೊಂಡಿರಬಹುದು– ಈ ಗೋಚರ ಸಂಗತಿ ಪೃಥ್ವಿಯಾದ್ಯಂತ ಒಂದು ಬಿಂದುವಿನಲ್ಲಿ ಇಲ್ಲವೆ ಒಂದು ಸ್ಥಳದಲ್ಲಿ ಸ್ಥಗಿತಗೊಂಡಿಲ್ಲ, ಏಕೆಂದರೆ ಪೃಥ್ವಿಯ ಎಲ್ಲ ದೇಶಗಳಲ್ಲಿ ಅದರ

ಕುರುಹುಗಳು ಕಂಡುಬರುತ್ತವೆ. ಅದು ಒಂದು ಹೊಸ, ಉಚ್ಚತರ ಮತ್ತು ಆರೋಹಣ ಮಾಡುತ್ತಿರುವ ಪರಿಹಾರ, ವಿಶಾಲವಾದ, ಹೆಚ್ಚಿನ ರೀತಿಯಲ್ಲಿ ಪರಿಪೂರ್ಣತೆಯನ್ನು ಸುತ್ತುವರಿಯಲು ಉಕ್ಕೇರುವುದಕ್ಕಾಗಿ ಒಂದು ಪ್ರಯತ್ನ–ವಾಗಿರುತ್ತದೆ.

ಹೆಚ್ಚು ಸಾರ್ವತ್ರಿಕ, ಹೆಚ್ಚು ವಿಸ್ತಾರಗೊಂಡಂತಹವು, ಹೆಚ್ಚು ಸಾಮೂಹಿಕ ಸ್ವಭಾವದವು ಆದ ಕೆಲವು ವಿಚಾರಗಳು ಜಗತ್ತಿನಲ್ಲಿ ಕಾರ್ಯಗತಗೊಳ್ಳುತ್ತಿವೆ, ಮತ್ತು ಕಾರ್ಯನಿರತವಾಗಿವೆ. ಅವೆರಡೂ ಜೊತೆಗೂಡಿ ಸಾಗುತ್ತವೆ: ವಿನಾಶ ಹೆಚ್ಚು ಭವ್ಯವಾಗಿರುವ ಹೆಚ್ಚು ಇಡಿಯಾಗಿರುವುದರ ಸಾಧ್ಯತೆ ಮತ್ತು ನಿರ್ಬಂಧವಿಲ್ಲದ ಸೃಜನಶೀಲತೆ ಅನಾಹುತದ ಸಾಧ್ಯತೆಯನ್ನು ಹೆಚ್ಚುಗೊಳಿಸುವುದಿರುತ್ತದೆ, ಆ ಅನಾಹುತ ಹಿಂದೆಂದಿಗೂ ಆಗಿರದಷ್ಟು ಬೃಹತ್ ಪ್ರಮಾಣದ್ದಾಗುವುದು; ಅದೇ ವೇಳೆಗೆ ಉಚ್ಚತರ, ಎಲ್ಲವನ್ನೂ ಒಳಗೊಳ್ಳುವ ವಿಚಾರಗಳ ಸಂಕಲ್ಪಗಳ ಜನ್ಮತಾಳುವಿಕೆ, ಇಲ್ಲವೆ ಅದಕ್ಕೂ ಹೆಚ್ಚಾಗಿ ಪ್ರಕಟನೆಯಿರುತ್ತದೆ, ಅವುಗಳನ್ನು ಕೇಳಿಸಿಕೊಂಡಾಗ ಮೊದಲಿಗಿಂತ ಹೆಚ್ಚು ವಿಶಾಲವಾದ, ಹೆಚ್ಚು ಚಾಚಿಕೊಂಡಿರುವ ಹೆಚ್ಚು ಸಂಪೂರ್ಣವಾದ, ಪರಿಪೂರ್ಣವಾದ ಪರಿಹಾರ ಬರುವುದು.

ಆರೋಹಣ ಮಾಡುತ್ತಿರುವ ಉತ್ಕ್ರಾಂತಿಯ ರಚನಾತ್ಮಕ ಶಕ್ತಿಗಳು, ಹೆಚ್ಚುತ್ತಿರುವ ಪರಿಪೂರ್ಣ ಹಾಗೂ ದೈವಿಕ ಸಿದ್ಧಿಯನ್ನು ತರುವಂತಹಗಳು, ಮತ್ತು ಹೆಚ್ಚು ಹೆಚ್ಚಾಗಿ ವಿನಾಶಕಾರಿ ಶಕ್ತಿಗಳು– ನಿಯಂತ್ರಿಸಲಾಗದ ಹುಚ್ಚುತನವಿರುವ ಸಾಮರ್ಥ್ಯಪೂರ್ಣವಾಗಿ ವಿನಾಶಕಾರಿಯಾದವುಗಳು ಇವುಗಳ ನಡುವಿನ ಹೋರಾಟ ಹಾಗೂ ಸಂಘರ್ಷ ಹೆಚ್ಚು ಸ್ಪಷ್ಟವಾಗುತ್ತಲಿದೆ, ತಪ್ಪು ತಿಳಿದುಕೊಳ್ಳಲು ಸಾಧ್ಯವಾಗದಿರುವಂತೆ ತೋರಿಬರುತ್ತವೆ, ಯಾವುದು ಮೊದಲು ತನ್ನ ಗುರಿಯನ್ನು ತಲುಪುತ್ತದೆ ಎನ್ನುವುದಕ್ಕೆ ಅದು ಒಂದು ಬಗೆಯ ಪಂದ್ಯ ಅಥವಾ ಸಮರವಾಗಿದೆ, ಪ್ರಾಣಿಕ ಲೋಕದ ದೇವ–ವಿರುದ್ಧವಾದ ಎಲ್ಲ ವಿರೋಧೀ ಶಕ್ತಿಗಳು ಪೃಥ್ವಿಯ ಮೇಲೆ ಇಳಿದು ಬಂದ ಹಾಗೆ ತೋರಿಬರುತ್ತಿದೆ, ಅವು ಪೃಥ್ವಿಯನ್ನು ತಮ್ಮ ಕ್ರಿಯೆಯ ಕ್ಷೇತ್ರವೆಂದು ಮಾಡಿಕೊಂಡಿವೆ, ಅದೇ ವೇಳೆಗೆ ಒಂದು ಹೊಸ, ಉಚ್ಚತರ ಸಾಮರ್ಥ್ಯಪೂರ್ಣ ಆಧ್ಯಾತ್ಮಿಕ ಶಕ್ತಿ ಕೂಡ ಪೃಥ್ವಿಯ ಮೇಲೆ ಅವರೋಹಣ ಮಾಡಿ ಬಂದಿದೆ, ಅದರಲ್ಲಿ ಹೊಸ ಜೀವನ ತರಲಿದೆ. ಇದು ಸಮರ ಹೆಚ್ಚು ವಿಷಕಾರಿಯಾಗುವಂತೆ ಹಿಂಸಾತ್ಮಕವಾಗುವಂತೆ ಹಾಗೂ ಗೋಚರವಾಗುವಂತೆ

ಮಾಡುತ್ತದೆ ಆದರೆ ತೋರಿಕೆಗೆ ಹೆಚ್ಚು ನಿರ್ಣಾಯಕ ಕೂಡ ಆಗಿರುತ್ತದೆ, ಆ ಕಾರಣದಿಂದಾಗಿ ಪರಿಹಾರದತ್ತ ಬೇಗನೆ ತಲುಪುವಂತಾಗುವುದು.

**ಅನುಯಾಯಿಯೊಂದಿಗೆ ಮಾತುಕತೆ, ಜೂನ 1958 – ಶ್ರೀಮಾತೆ**

*

**ಭಗವಂತನ ಲೀಲೆ**

ವಿಶ್ವವನ್ನು ಭಗವಂತನ ಲೀಲೆ ಎಂದು ಕರೆಯಲಾಗುತ್ತದೆ.

**ಪ್ರಶ್ನೆ :** *ಏಕೆ?*

**ಶ್ರೀಮಾತೆ :** ಏಕೆ? ಅದು ಮಾತನಾಡುವ ಒಂದು ರೀತಿ! ಅದು ಮೋಜಿನ ಲೀಲೆಯಾಗಿದೆ ಎಂಬ ಭಾವನೆ ನಿಮಗೆ ಬರುತ್ತಿಲ್ಲವೆ? ಭಾವನೆಗೆ ತಂದುಕೊಳ್ಳದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ (ನಗು), ಅವರಿಗೆ ಆ ಲೀಲೆ ಮೋಜಿನದಾಗಿಲ್ಲ. ಆದಾಗ್ಯೂ ಅದು ಮಾತನಾಡುವ ಒಂದು ರೀತಿ. ಒಬ್ಬ ಮನುಷ್ಯ ಯೋಚಿಸದೆ ಅದು ಸಂತೋಷಕರ ಎಂದು ಹೇಳುತ್ತಾನೆ– ಇನ್ನೊಬ್ಬ ಶಕ್ತಿಗಳ ಲೀಲೆಯನ್ನು ಕುರಿತು ಹೇಳುತ್ತಾನೆ, ಅದು ಚಲನೆಯ ವಿಷಯ, ಪರಸ್ಪರರಲ್ಲಿ ಕೈಕೊಳ್ಳುವ ಕ್ರಿಯೆ. ಎಲ್ಲ ಚಟುವಟಿಕೆಗಳು ಶಕ್ತಿಗಳ ಲೀಲೆಯಾಗಿರುತ್ತವೆ ಹಾಗಾಗಿ ಅದನ್ನು ಆ ಅರ್ಥದಲ್ಲಿ ತೆಗೆದುಕೊಳ್ಳಬಹುದು. ಆದರೆ ನೀವು ತಿಳಿದುಕೊಳ್ಳಬೇಕಾದುದೆಂದರೆ ದೈವೀ ಶಕ್ತಿ, ದೈವೀ ಪ್ರಜ್ಞೆ ವಿಶ್ವವನ್ನು ಹಾಗೂ ವಿಶ್ವದಲ್ಲಿರುವ ಶಕ್ತಿಗಳ ಎಲ್ಲ ಲೀಲೆಯನ್ನು ಸೃಷ್ಟಿಸಲು ತನ್ನನ್ನು ಹೊರಗೆ ತೆರೆದುಕೊಂಡಿತು. ಅದರರ್ಥ ಅದೇ, ಬೇರೇನೂ ಅಲ್ಲ. ಅದು ಅವಶ್ಯವಾಗಿ ಕ್ರೀಡಾಂಗಣದಲ್ಲಿ ಆಡುವ ಆಟ ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ಇನ್ನೂ ಹಲವಾರು ಅರ್ಥಗಳಿವೆ.

**CWM, 6/267 – ಶ್ರೀ ಅರವಿಂದರು**

*

**ಭಗವಂತ ಎಲ್ಲರಲ್ಲಿಯೂ ಕಾರ್ಯಕೈಕೊಳ್ಳುತ್ತಾನೆ**

ದೈವೀಶಕ್ತಿ ತನ್ನ ಕಾರ್ಯಕ್ಕಾಗಿ ಎಲ್ಲೆಡೆಯಲ್ಲಿ ಕಾರ್ಯಕೈಕೊಳ್ಳುತ್ತದೆ, ಮನುಷ್ಯರ ದೋಷಗಳಲ್ಲಿ, ಅವರ ಸದಿಚ್ಛೆಯಲ್ಲಿ, ದುಷ್ಟ ಸಂಕಲ್ಪದಲ್ಲಿ ಅನುಕೂಲಕರ ವಿಷಯಗಳನ್ನು ಕುರಿತು ಕಾರ್ಯಕೈಕೊಂಡ ರೀತಿಯಲ್ಲಿ ಅದರ

ಕಾರ್ಯವಿರುತ್ತದೆ. ಮಿಶ್ರಣಕ್ಕೊಳಗಾಗದ ವಿಷಯ ಯಾವುದೂ ಇರುವುದಿಲ್ಲ; ಭಗವಂತನ ನಿಜವಾದ ಪರಿಶುದ್ಧವಾದ ಉಪಕರಣ ಎಂದು ಕರೆಯಬಹುದಾದದ್ದು ಎಲ್ಲಿಯೂ ಇರುವುದಿಲ್ಲ ಮತ್ತು ಮಾರ್ಗದಲ್ಲಿ ಮುನ್ನಡೆದು ಸಾಗುವುದಕ್ಕಾಗಿ ಭಗವಂತ ಮನುಷ್ಯನನ್ನೋ ಇಲ್ಲವೆ ವಿಷಯವೊಂದನ್ನೋ ಉಪಯೋಗಿಸುವುದು ಎಲ್ಲಿಯೂ ಪರಿಪೂರ್ಣ ಅಸಾಧ್ಯತೆ ಎಂಬುದಿಲ್ಲ. ವಿಷಯಗಳು ಅನಿಶ್ಚಿತವಾಗಿರು–ವವರೆಗೆ ಭಗವಂತ ಎಲ್ಲೆಡೆಯಲ್ಲಿ, ಬಹುಮಟ್ಟಿಗೆ, ಸಮಾನ ರೀತಿಯಲ್ಲಿ ಕಾರ್ಯ ಕೈಕೊಳ್ಳುತ್ತಾನೆ, ಜನರು ದೊಡ್ಡ ಹುಚ್ಚುತನದಲ್ಲಿಳಿದರೆ ಆಗ ವಿಷಯ ಭಿನ್ನವಾಗಿರುತ್ತದೆ. ಅದು ಯಾವ ಅರ್ಥದಲ್ಲಿ ಭವ್ಯ ಹುಚ್ಚುತನವಾಗಿರುತ್ತದೆಂದರೆ ವ್ಯಕ್ತಿಗಳ ಹಾಗೂ ಸಂಕಲ್ಪಗಳ ಮೊತ್ತವನ್ನು ತಮ್ಮದೇ ವಿನಾಶವನ್ನುಂಟು ಮಾಡುವ ಚಟುವಟಿಕೆಯಲ್ಲಿ ಪ್ರಕ್ಷೇಪಿಸಲಾಗಿರುತ್ತದೆ. ನಾನು ಪಟ್ಟಣವನ್ನು ಇಲ್ಲವೆ ಜನರನ್ನು ನಾಶಮಾಡುವ ಬಾಂಬು ಕುರಿತು ಹೇಳುತ್ತಿಲ್ಲ. ಅಸುರ ತನ್ನದೇ ವಿನಾಶದತ್ತ ಸಾಗಿ ಹೋಗುತ್ತಾನೆ ಎಂದು ಗೀತೆಯಲ್ಲಿ ಹೇಳಿದ ಹಾಗೆ ನಾನು ಹೇಳುತ್ತೇನೆ. ಸಂಭವಿಸುವುದು ಅದೇ ಆಗಿದೆ ಮತ್ತು ಇದು ಬಹಳ ಭವ್ಯ ದುರ್ದೈವ, ಏಕೆಂದರೆ ಯಾವಾಗಲೂ ಕ್ರೂರ ರೀತಿಯಲ್ಲಿ ನಾಶ ಮಾಡುವುದಕ್ಕಿಂತ, ರಕ್ಷಣೆ ಮಾಡಲು ಶಕ್ತರಾಗುವುದು, ಜ್ಞಾನೋದಯವನ್ನುಂಟು ಮಾಡುವುದು, ಪರಿವರ್ತನೆಗೆ ಒಳಪಡಿಸುವುದು ಹೆಚ್ಚು ಒಳ್ಳೆಯದು, ಯುದ್ಧದ ಭಯಾನಕ ಆಯ್ಕೆ ನಿಜವಾಗಿ ಅತ್ಯಂತ ಜುಗುಪ್ಸೆ ತರಿಸುವಂತಹದು, ಅದೆಂದರೆ ಅದು ಸಂಘರ್ಷ ಎಷ್ಟೊಂದು ಇಡಿಯಾಗಿ ಹಾಗೂ ಕ್ರೂರ ರೀತಿಯಲ್ಲಿ ಭೌತಿಕ ರೂಪ ತಾಳುತ್ತದೆಂದರೆ ಶಾಂತಿಯಿದ್ದಾಗ ರಕ್ಷಿಸಬಹುದಾಗಿದ್ದ ವಿಷಯಗಳು, ಯುದ್ಧದಿಂದಾಗಿ ಅವಶ್ಯವಾಗಿ ವಿನಾಶಕ್ಕೊಳಗಾಗುತ್ತವೆ– ಕೇವಲ ಜನರಷ್ಟೇ ಅಲ್ಲ, ವಸ್ತು–ವಿಷಯಗಳಷ್ಟೇ ಅಲ್ಲ, ಆದರೆ ಶಕ್ತಿಗಳು ಹಾಗೂ ಸತ್ತೆಗಳ ಪ್ರಜ್ಞೆಯೂ ಕೂಡ ವಿನಾಶಕ್ಕೊಳಗಾಗುತ್ತವೆ.

**ಪ್ರಶ್ನೆ :** *ಈಗಿನ ದಿನದ ರಾಜಕಾರಣದಲ್ಲಿ ಭಾರತಕ್ಕೆ ವಿಶೇಷ ಪಾತ್ರ ವಹಿಸು–ವುದಿದೆಯೆ?*

**ಶ್ರೀಮಾತೆ :** ಭಾರತ ಜಗತ್ತಿನಲ್ಲಿ ಒಂದು ಪಾತ್ರ ವಹಿಸುವುದಿದೆ. ಆದರೆ ಇದು ಆದರ್ಶದ್ದಾದ ಏನೋ ಒಂದು, ಅದಕ್ಕೆ ಪರಿವರ್ತನೆಯ ಆವಶ್ಯಕತೆ ಇರುತ್ತದೆ, ಅದು ನನಗೆ ತಿಳಿದ ಮಟ್ಟಿಗೆ ಸಂದರ್ಭ ಯಾವುದೇ ಇರಲಿ ಇನ್ನೂ ಸಂಭವಿಸಿಲ್ಲ. ಪೃಥ್ವಿ ನಿಷ್ಕಾಪಟ್ಯದ್ದಾದರೆ, ಅದು ಮೇಲ್ಮೈಯ ಹಾಗೂ ಬಾಹ್ಯ ದೃಷ್ಟಿಕೋನದಿಂದ

ತನ್ನ ಪಾತ್ರವನ್ನು ವಹಿಸಬಹುದು.

**CWM, 7/302–03** **– ಶ್ರೀಮಾತೆ**

*

ಪೃಥ್ವಿಯ ಮೇಲೆ ಸಂಭವಿಸುವುದೆಲ್ಲವೂ, ಅವಶ್ಯವಾಗಿ, ಪ್ರಗತಿಯತ್ತ ಕೊಂಡೊಯ್ಯುತ್ತದೆ, ಹಾಗಾಗಿ ಯುದ್ಧಗಳು ಧೈರ್ಯ ತಂದುಕೊಡುವ, ತಾಳ್ಮೆಯನ್ನು ಕಲಿಸುವ ನಿರ್ಭಯತೆಯನ್ನು ರೂಢಿಸಿಕೊಳ್ಳುವ ಶಾಲೆಗಳಿದ್ದ ಹಾಗಿರುತ್ತವೆ, ತನ್ನ ಕಾಲ ಮುಗಿದು ಹೋಗಿದ್ದರೂ ಮಾಯವಾಗುವುದನ್ನು ಕುರಿತು ತಿರಸ್ಕರಿಸುವುದನ್ನು ನಾಶಮಾಡುವುದಕ್ಕೆ ಅವು ಸೇವೆ ಸಲ್ಲಿಸುತ್ತವೆ ಮತ್ತು ಹೊಸ ವಿಷಯಗಳಿಗೆ ಸ್ಥಾನ ಮಾಡಿಕೊಡುತ್ತವೆ. ಕುರುಕ್ಷೇತ್ರದ ಯುದ್ಧಗಳಂತಹವು ಪೃಥ್ವಿಯ ಮೇಲೆ ದರ್ಪತೋರಿಸುವ ನಾಶಕಾರಕ ಕುಲವನ್ನು ತೊಡೆದು ಹಾಕಲು ಹಾಗೂ ನ್ಯಾಯ ಹಾಗೂ ಒಳ್ಳೆಯ ರೀತಿ ಇರುವ ಆಳಿಕೆ ನಡೆಸಲು ಒಂದು ರೀತಿಯನ್ನು ತೋರಿಸಿಕೊಡುವವು. ಅಪಾಯದ ಸಾನ್ನಿಧ್ಯವಿರುವುದರ ಮೂಲಕ ಬಹಳ ತಾಮಸಿಕ ಪ್ರಜ್ಞೆಯ ನಿರುತ್ಸಾಹವನ್ನು ಅಲುಗಾಡಿಸಲಾಗುವುದು ಮತ್ತು ನಿದ್ರಿಸುತ್ತಿರುವ ಚೈತನ್ಯಗಳನ್ನು ಎಚ್ಚರಿಸಲು ಸಾಧ್ಯವಾಗುವುದು. ಕೊನೆಗೆ ವ್ಯತ್ಯಾಸ ಕಂಡುಕೊಳ್ಳುವುದರ ಮೂಲಕ ಮತ್ತು ಅವುಗಳನ್ನು ಜೊತೆಗೂಡುವ ಹಾಗೂ ಅನುಸರಿಸುವ, ನಡುಕು ಹುಟ್ಟಿಸುವ ಗಾಬರಿಯಿಂದಾಗಿ ಇಂತಹ ಕಾಡುರೀತಿಯ ಹಾಗೂ ಹಿಂಸಾತ್ಮಕ ಪರಿವರ್ತನೆಯ ರೂಪ ಅನಾವಶ್ಯಕವಾಗುವಂತೆ ಮಾಡುವ ಪರಿಣಾಮಕಾರಿ ಮಾರ್ಗವನ್ನು ಹುಡುಕಲು ಜನರ ಮೇಲೆ ಒತ್ತಾಯ–ವುಂಟಾಗುತ್ತದೆ.

**CWM, 10/52–53** **– ಶ್ರೀಮಾತೆ**

*

## ಕಾಲಗತಿಯಲ್ಲಿ ದೇವನ ಚಲನೆ

### ಮಹಾಕಾಲ

ಎಲ್ಲ ಚಲನೆಗಳಲ್ಲಿ ಮಾನವ ಕ್ರಿಯೆಯ ಪ್ರತಿಯೊಂದು ಶ್ರೇಷ್ಠ ಮೊತ್ತದಲ್ಲಿ ಕಾಲಗತಿಯ ದಿವ್ಯಾತ್ಮನಿದ್ದಾನೆ, ಅವನನ್ನು ಯುರೋಪ ದೇಶ Zeitgeist ಎಂದು

ಭಾರತ ಕಾಲಪುರುಷನೆಂದು ಕರೆಯುತ್ತವೆ, ಅವನು ತನ್ನನ್ನು ಅಭಿವ್ಯಕ್ತಪಡಿಸುತ್ತಾನೆ. ಆ ಹೆಸರುಗಳೇ ಸ್ವತಃ ಆಳವಾದ ಪ್ರಾಮುಖ್ಯತೆ ಹೊಂದಿವೆ. ಎಲ್ಲರ ಮಾತೆಯಾದ ಹಾಗೂ ಎಲ್ಲವನ್ನೂ ನಾಶಮಾಡುವ ದೇವಿ ಕಾಳಿ ದೈವೀಶಕ್ತಿಯಾಗಿದ್ದಾಳೆ, ಆ ರೂಪದಲ್ಲಿ ಅವಳು ಮನುಕುಲದ ಹೃದಯದಲ್ಲಿ ರಹಸ್ಯವಾಗಿ ಕಾರ್ಯ–ಕೈಕೊಳ್ಳುತ್ತಾಳೆ, ಅವಳು ತಂಡ ತಂಡವಾಗಿ ಮುನ್ನುಗ್ಗುವ ಜನರ ರೂಪದಲ್ಲಿ, ಸಂಸ್ಥೆಗಳು ಹಾಗೂ ಘಟನೆಗಳ ರೂಪದಲ್ಲಿ ತನ್ನನ್ನು ಪ್ರಕಟಿಸುತ್ತಾಳೆ, ಮಹಾಕಾಲ ಅವಳ ಅಂತರಂಗದಲ್ಲಿರುವ ದಿವ್ಯಾತ್ಮ, ಅವಳಲ್ಲಿ ಅವನು ಹರಿದುಕೊಂಡು ಹೋಗುತ್ತಾನೆ, ಜಗತ್ತಿನ ಪ್ರಗತಿಗೆ ಹಾಗೂ ದೇಶಗಳ ಅದೃಷ್ಟಕ್ಕೆ ಎರಕ ನೀಡುತ್ತಾನೆ ಕಾಲದಲ್ಲಿ ತನ್ನ ನೆರವೇರಿಕೆ ಕಂಡುಕೊಳ್ಳುವುದು ಅವನದೇ ಚಾಲಕ ಶಕ್ತಿ (impetus), ಚಲನೆ ಒಮ್ಮೆ ಪ್ರಾರಂಭವಾದ ನಂತರ, ಅಂತರಂಗದಲ್ಲಿರುವ ದಿವ್ಯಾತ್ಮನ ಚಾಲಕ ಶಕ್ತಿ, ಕಾಲಗತಿ ಹಾಗೂ ದೈವೀಮಾತೆ ನಿರ್ದೇಶನದ ಹೊಣೆಯನ್ನು ಹೊತ್ತುಕೊಳ್ಳುತ್ತಾರೆ, ತಯಾರು ಮಾಡುತ್ತಾರೆ, ಪಕ್ವಗೊಳಿಸುತ್ತಾರೆ ಹಾಗೂ ನೆರವೇರಿಕೆ ಕಂಡುಕೊಳ್ಳುತ್ತಾರೆ. ಕಾಲಪುರುಷ ನಿರ್ಧಾರಿತ ದಿಶೆಯಲ್ಲಿ ಚಲಿಸಿದಾಗ ಜಗತ್ತಿನ ಎಲ್ಲ ಶಕ್ತಿಗಳ ಸ್ಥಾಪಿತಗೊಂಡ ತರಂಗಗಳಿಗೆ ಹಿಗ್ಗಿಕೊಳ್ಳಲು ಕರೆಕೊಡಲಾಗಿರುತ್ತದೆ, ಅವು ವಿಧಿಸಿದ ಉದ್ದೇಶದತ್ತ ಹೊರಳಬೇಕಾಗಿರುತ್ತದೆ. ಪ್ರಜ್ಞಾಪೂರ್ಣವಾಗಿ ಸಹಾಯ ಮಾಡುವಂತಹದು ಅದನ್ನು ಹಿಗ್ಗಿಸುತ್ತದೆ, ಆದರೆ ಅಡ್ಡಿಪಡಿಸುವಂತಹದು ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಹಿಗ್ಗಿಸುತ್ತದೆ ಮತ್ತು ಗಾಳಿಗುಡಿಸಿದ ಸಮುದ್ರದ ಮೇಲಿನ ತರಂಗದಂತೆ ಈಗ ಮೇಲಕ್ಕೇರುತ್ತ, ಈಗ ಕೆಳಗಡೆ ಬೀಳುತ್ತ ಈ ವಿಜಯದ ಶಿಖರದ ಮೇಲೆ ಉಚ್ಚವಾಗಿರುತ್ತ, ಈ ಎದೆಗುಂದುವಿಕೆಯ ಹಾಗೂ ಸೋಲಿನ ಅಲೆಕುಳಿಯ ಮೇಲೆ ಬೀಳುತ್ತ, ಅವಿತುಕೊಂಡ ದೈವೀಮೂಲದಿಂದ ಬಂದ ಪ್ರಚೋದನೆ ಅದರ ಪೂರ್ವಭಾವಿಯಾಗಿ ವಿಧಿಸಿದ ನೆರವೇರಿಕೆಯತ್ತ ಗುಡಿಸಿಕೊಂಡು ಹೋಗುತ್ತದೆ. ಮನುಷ್ಯ ಸಹಾಯ ಮಾಡಬಹುದು ಇಲ್ಲವೆ ಪ್ರತಿರೋಧಿಸಬಹುದು, ಆದರೆ ಕಾಲಪುರುಷ ಕಾರ್ಯಕೈಕೊಳ್ಳುತ್ತಾನೆ, ಆಕಾರ ನೀಡುತ್ತಾನೆ, ಬಲಪ್ರಯೋಗದಿಂದ ಉರುಳಿಸಿ ಬಿಡುತ್ತಾನೆ, ಒತ್ತಾಯಪಡಿಸುತ್ತಾನೆ.

**CWSA, 13/29–30** **– ಶ್ರೀ ಅರವಿಂದರು**

*

## ಯುಗಧರ್ಮ ಹಾಗೂ ಮನುಕುಲದ ನಾಲ್ಕು ಯುಗಗಳು

ಯುಗಧರ್ಮ ಎಂಬುದು ಒಂದಿದೆ. ನಾವು ಜೀವಿಸುತ್ತಿರುವ ಯುಗಕ್ಕೆ ಸರಿಯಾದ ಸಂಸ್ಥೆಗಳು ಮತ್ತು ಕ್ರಿಯೆಗಳ ರೀತಿಗಳಿರುತ್ತವೆ. ಏಕೆಂದರೆ ಕ್ರಿಯೆ, ಉಪಯೋಗಿಸಬೇಕಾದ ಜ್ಞಾನದ ಇಲ್ಲವೆ ಸಂಕಲ್ಪದ ಬಲ, ಸ್ಥಳ ಹಾಗೂ ಪಾತ್ರೆ ಇವುಗಳ ಮೇಲೆ ಅವಲಂಬಿಸಿರುತ್ತದೆ. ಒಂದು ಯುಗದಲ್ಲಿ ಸರಿಯಾಗಿದ್ದವು ಎನಿಸಿದ ಸಂಸ್ಥೆಗಳು ಇನ್ನೊಂದು ಯುಗದಲ್ಲಿ ಸರಿಯಾಗಿರುವುದಿಲ್ಲ. ಸಾಮಾಜಿಕ ನಿಯಮವನ್ನು ಸಾಮಾಜಿಕ ನಿಯಮದಿಂದ, ಧರ್ಮವನ್ನು ಧರ್ಮದಿಂದ, ನಾಗರಿಕತೆಯನ್ನು ನಾಗರಿಕತೆಯಿಂದ ಬದಲು ಮಾಡುತ್ತ ದೇವ ನಿರಂತರವಾಗಿ ಮುನ್ನಡೆಯುತ್ತ ನಮ್ಮ ಮಾನವ ಪರಿಪೂರ್ಣತೆಯ ಪ್ರಕಟಣೆಗಳತ್ತ ಕರೆದೊಯ್ಯುತ್ತಿದ್ದಾನೆ, ಆ ಪ್ರಕಟಣೆಗಳು ಅತ್ಯುನ್ನತ ಹಾಗೂ ಎಲ್ಲವನ್ನು ಹೆಚ್ಚಿನ ರೀತಿಯಲ್ಲಿ ಅಪ್ಪಿಕೊಳ್ಳುವಂತಹಗಳು ಆಗಿರುತ್ತವೆ. ದೇವನ ವಿಶ್ವವ್ಯಾಪಿ ಸುತ್ತುವರಿಕೆಯಿರುವ ಚಲನೆಯಲ್ಲಿ ಅವನು ವಿಶ್ವದಾದ್ಯಂತ ಒಂದು ಬಗೆಯ ಸ್ಥಿರ ಸಾಮರ್ಥ್ಯವಿರುವುದನ್ನು ಸ್ಥಾಪಿಸಿದಾಗ ಅದು ಮಾನವನ ಸತ್ಯಯುಗವಾಗಿರುತ್ತದೆ. ತಡವರಿಸುವ ಸಾಮರಸ್ಯವಿದ್ದಾಗ, ಮನುಷ್ಯರ ರೀತಿಯಲ್ಲಲ್ಲ, ಆದರೆ ಸ್ವೀಕರಿಸಲಾದ ಶಕ್ತಿಯೊಂದಿಗೆ ಇಲ್ಲವೆ ರಾಜಕೀಯ ಉಪಕರಣದೊಂದಿಗೆ ನಿರ್ವಹಣೆ ತೊಂದರೆ–ದಾಯಕವಾಗಿದ್ದಾಗ, ಅದು ತ್ರೇತಾಯುಗವಾಗಿರುತ್ತದೆ. ತಡವರಿಸುತ್ತಿರುವುದು ಎಡವುವಂತಾದಾಗ ಮತ್ತು ಸಾಮರಸ್ಯವನ್ನು ಪ್ರತಿಯೊಂದು ಹೆಜ್ಜೆಯಲ್ಲಿ ಕಾಳಜಿ ಪೂರ್ವಕವಾದ ಹಾಗೂ ಶ್ರಮದಾಯಕವಾದ ವಿಧಿಸಿದ ನಿಯಮದ ಪ್ರಕಾರ ಕಾಯ್ದುಕೊಂಡು ಬರಬೇಕಾದಾಗ ಅದು ಅವನ ದ್ವಾಪರಯುಗ, ವಿಭಜನೆ–ಯುಂಟಾದಾಗ ಮತ್ತು ಎಲ್ಲವೂ ಕುಸಿತ ಮತ್ತು ಹಾಳಾಗುವಿಕೆಯಲ್ಲಿ ಕೆಳಗಿಳಿದು ಹೋದಾಗ, ಜಲಪ್ರಳಯದ ನಂತರ ಯಾವುದೂ ಉಳಿದುಕೊಳ್ಳದಂತಾದಾಗ ಅದು ಅವನ ಕಲಿಯುಗವಾಗಿರುತ್ತದೆ. ಇದು ಎಲ್ಲ ಮಾನವ ವಿಚಾರ ಹಾಗೂ ಸಂಸ್ಥೆಗಳು ಪ್ರಗತಿ ಸಾಧಿಸುವ ಸ್ವಾಭಾವಿಕ ನಿಯಮ. ಅದು ಯಾವಾಗಲೂ ಮೊತ್ತದಲ್ಲಿ, ಮುಂದುವರಿದುಕೊಂಡು ಸತತ ಸಾಗುವ ರೀತಿಯಲ್ಲಿ ಅನ್ವಯ–ವಾಗುತ್ತದೆ, ಆದರೆ ವಿವರದಲ್ಲಿ ಕಡಿಮೆ ಪರಿಪೂರ್ಣತೆ ಇರುತ್ತದೆ. ಮಾನವ ಧರ್ಮ, ಸಮಾಜ, ನಾಗರಿಕತೆ ಇವುಗಳಲ್ಲಿ ಪ್ರತಿಯೊಂದಕ್ಕೆ ಅದರ ನಾಲ್ಕು ಯುಗಗಳಿರುತ್ತವೆ ಎಂದು ಬಹುಮಟ್ಟಿಗೆ ಹೇಳಬಹುದು. ಏಕೆಂದರೆ ಈ ಚಲನೆ

ಅತ್ಯಂತ ಸ್ವಾಭಾವಿಕವಾದದ್ದು ಅಷ್ಟೇ ಅಲ್ಲ, ಆದರೆ ಸತ್ಪರಿಣಾಮಕಾರಿಯಾದದ್ದು. ಅದು ನಿರಾಶಾವಾದಕ್ಕೆ ಸಮರ್ಥನೆ ನೀಡುವುದಲ್ಲ ಇಲ್ಲವೆ ಮೂಕ ವಿಧಿ ಮತ್ತು ವೇದನಾಪೂರ್ಣ ನಿರ್ಮೂಲನ ಇವುಗಳ ಪರಮಸತ್ಯ (gospel) ವಲ್ಲ. ರೂಪಕ್ಕೆ ಅಂಟಿಕೊಳ್ಳುವಿಕೆಯಲ್ಲಿ ನಾವು ಬಹಳಷ್ಟು ಸಲ ಯೋಚಿಸುವ ಹಾಗೆ ಅದು ಕುಗ್ಗುವಿಕೆಯಿಂದಾಗುವ ವಿಷಣ್ಣತೆಯಲ್ಲ ಮತ್ತು ಎಲ್ಲ ಮಾನವ ಸಿದ್ಧಿಗಳನ್ನು ಕುರಿತು ಇರುವ ನಿಯಮವಲ್ಲ. ಪ್ರತಿಯೊಂದು ಸತ್ಯಯುಗಕ್ಕೆ ಕಲಿಯುಗವಿರುವ ಹಾಗೆ, ಅಷ್ಟೇ ಸಮನಾಗಿ ಪ್ರತಿಯೊಂದು ಕಲಿಯುಗ ತನ್ನ ಸತ್ಯಯುಗವನ್ನು ತಯಾರು ಮಾಡುತ್ತದೆ. ಆ ವಿನಾಶ ಈ ಸೃಷ್ಟಿಗೆ ಅವಶ್ಯವಾಗಿತ್ತು ಮತ್ತು ಹೊಸ ಸಾಮರಸ್ಯ ಅದನ್ನು ಪರಿಪೂರ್ಣಗೊಳಿಸಿದಾಗ ಹಳೆಯದಕ್ಕಿಂತ ಹೆಚ್ಚು ಒಳ್ಳೆಯದಾಗಿರುತ್ತದೆ. ಆದರೆ ಅಲ್ಲಿ ದೌರ್ಬಲ್ಯವಿದೆ, ವಿಫಲತೆಯತ್ತ ಹೊರಳುವ ಅರ್ಧ ಯಶಸ್ಸಿದೆ, ಅಲ್ಲಿ ಎದೆಗುಂದುವಿಕೆಯಿದೆ, ಚೈತನ್ಯ ಹಾಗೂ ನಂಬಿಕೆಗಳ ಹಾನಿಯಿದೆ, ಅದು ವಿಭಜನೆಯ ನಮ್ಮ ಅವಧಿಗಳ ಮೇಲೆ ಮೋಡ ಮುಸುಕುವಂತೆ ಮಾಡುತ್ತದೆ, ತೋರಿಕೆಯ ಸಮರವಿದೆ, ಹಿಂಸೆಯಿದೆ, ಕುಚೇಷ್ಟೆ ಇದೆ, ಅತ್ತಿಂದಿತ್ತ ಸಾಗುವ ಗಲಭೆ, ತುಳಿತಗಳಿವೆ, ಅವು ಕ್ರಮೇಣ ಕೈಕೊಳ್ಳಲಾಗುವ ನಮ್ಮ ಸೃಷ್ಟಿ ಹಾಗೂ ಅರ್ಧಪರಿಪೂರ್ಣತೆ ಇವುಗಳಿರುವ ಅವಧಿಗಳಲ್ಲಿ ಉಪಸ್ಥಿತವಿರುತ್ತವೆ. ಹಾಗಾಗಿ ಎಲ್ಲವೂ ನಾಶವಾಗುತ್ತದೆಂದು ಜನರು ಹತಾಶರಾಗಿ ಕೂಗಿ ಹೇಳುತ್ತಾರೆ ಹಾಗೂ ದುಃಖಪಡುತ್ತಾರೆ. ಅವರು ದೇವನ ದೈವೀಪ್ರೇಮದಲ್ಲಿ, ವಿವೇಕದಲ್ಲಿ ವಿಶ್ವಾಸವಿರಿಸಿದರೆ, ತಮ್ಮ ಸಂಪ್ರದಾಯಶೀಲ ಹಾಗೂ ಸಂಕುಚಿತ ಯೋಚನೆಗಳಿಗೆ ಆದ್ಯತೆ ನೀಡದಿದ್ದರೆ ಅವರು, ಅದಕ್ಕೂ ಹೆಚ್ಚಾಗಿ, ಎಲ್ಲವೂ ಮರುಜನ್ಮ ಪಡೆಯುತ್ತದೆ, ಎಂದು ಕೂಗಿ ಹೇಳಬಲ್ಲರು.

**CWSA, 12/54–55** **– ಶ್ರೀ ಅರವಿಂದರು**

*

**ಕಾಳಿ–ಶ್ರೇಷ್ಠ ದೈವೀಮಾತೆ**

ಕುರುಕ್ಷೇತ್ರದಲ್ಲಿ ಯಾವುದು ಭವ್ಯ ಹತ್ಯೆಯನ್ನು ಕುರಿತು ನಿಜವಾಗಿತ್ತೋ ಅದು ಜಗತ್ತಿನಲ್ಲಿ ಕೈಕೊಳ್ಳಲಾದ ಎಲ್ಲ ವಿಷಯಗಳನ್ನು ಕುರಿತು ಲೀಲೆಯನ್ನು ಪೂರ್ತಿಗೊಳಿಸುವ ಸೃಷ್ಟಿ, ವಿನಾಶ ಹಾಗೂ ರಕ್ಷಿಸಿಕೊಂಡು ಬರುವಿಕೆ ಕುರಿತು ನಿಜವಾಗಿದೆ.

ಈ ಬೋಧನೆಯ ಶ್ರೇಷ್ಠತೆ ಶ್ರೇಷ್ಠರಾದವರಿಗಾಗಿ ಇದೆ. ಯಾರಿಗೆ ಬೃಹದಾಕಾರದ ಬದಲಾವಣೆಗಳನ್ನು ಸಾಧ್ಯಗೊಳಿಸಲು ಅಧಿಕಾರ ನೀಡಲಾಗಿರು–ತ್ತದೆಯೋ ಅಂತಹರು ಕಾಲಪುರುಷನ ಶಕ್ತಿಯೊಂದಿಗೆ ತುಂಬಿಕೊಂಡಿರುತ್ತಾರೆ. ಕಾಳಿ ಅವರಲ್ಲಿ ಪ್ರವೇಶಿಸಿರುತ್ತಾಳೆ ಮತ್ತು ಅವಳು ಪ್ರವೇಶಿಸಿದಾಗ ತರ್ಕಬದ್ಧತೆ ಹಾಗೂ ಸಾಧ್ಯತೆ ಕುರಿತು ಕಾಳಜಿ ಮಾಡುವುದಿಲ್ಲ. ಅವಳು ಪ್ರಕೃತಿಯ ಶಕ್ತಿ–ಯಾಗಿದ್ದು ಮಗುವೊಂದು ಹಗುರಾಗಿ ಚೆಂಡೊಂದನ್ನು ಎಸೆಯುವ ಹಾಗೆ ತಾರೆಗಳು ತಮ್ಮ ಪಥದಲ್ಲಿ ಚಲಿಸುವಂತೆ ಮಾಡುತ್ತಾಳೆ ಮತ್ತು ಆ ಶಕ್ತಿಗೆ ಯಾವುದೂ ಅಸಾಧ್ಯವಲ್ಲ. ಅವಳು 'ಅಘಟನಾ–ಘಟನಾತ್ ಪತೀಯಸಿ'. ಅಸಾಧ್ಯವಾದದ್ದು ಸಂಭವಿಸುವಂತೆ ಮಾಡುವುದರಲ್ಲಿ ಕೌಶಲವಿದ್ದವಳಾಗಿದ್ದಾಳೆ. ಅವಳು 'ದೇವಾತ್ಮಶಕ್ತಿಃ ಸ್ವಗುಣೈರ್ನಿಗೂಢಾ', ತನ್ನದೇ ಕಾರ್ಯಗತಿಗಳಲ್ಲಿ ಅವಿತುಕೊಂಡ ದೈವೀ ಸಾಮರ್ಥ್ಯ ಮತ್ತು ಅವಳಿಗೆ ಉದ್ದೇಶವೊಂದನ್ನು ನೆರವೇರಿಸಲು ವಹಿಸಿಕೊಟ್ಟ ಅಧಿಪತ್ಯದಿಂದ ಕಾರ್ಯಕೈಕೊಳ್ಳಲು ಅವಳಿಗೆ ಕೇವಲ ಕಾಲದ ಆವಶ್ಯಕತೆ ಇರುತ್ತದೆ, ಬೇರಾವುದರ ಆವಶ್ಯಕತೆ ಇರುವುದಿಲ್ಲ. ಅವಳು ಕಾಲಗತಿಯಲ್ಲಿ ಚಲಿಸುತ್ತಾಳೆ ಮತ್ತು ಅದೇ ಚಲನೆ ತನ್ನ ನೆರವೇರಿಕೆ ಕಂಡುಕೊಳ್ಳುತ್ತದೆ, ತನ್ನ ಸಾಧನಗಳನ್ನು ಸೃಷ್ಟಿಸುತ್ತದೆ, ತನ್ನ ಗುರಿಗಳನ್ನು ಸಿದ್ಧಿಸಿಕೊಳ್ಳುತ್ತದೆ. ಒಬ್ಬ ಮನುಷ್ಯನಲ್ಲಿಗಿಂತ ಅವಳು ಇನ್ನೊಬ್ಬನಲ್ಲಿ ಹೆಚ್ಚಿನ ಕಾರ್ಯಕೈಕೊಳ್ಳುತ್ತಾಳೆಂಬುದು ಆಕಸ್ಮಿಕವಾಗಿರುವುದಿಲ್ಲ. ಅವನು ಸಂಭವನೀಯ ಪಾತ್ರೆಯೆಂದು ಆಯ್ದುಕೊಳ್ಳುವುದಕ್ಕೆ ಕಾರಣವಾಗಿರುತ್ತದೆ ಮತ್ತು ಅವನನ್ನು ಆಯ್ದುಕೊಂಡ ನಂತರ ಉದ್ದೇಶ ಸಫಲವಾಗುವವರೆಗೆ ಅವಳು ಅವನನ್ನು ತಿರಸ್ಕರಿಸುವುದಿಲ್ಲ ಇಲ್ಲವೆ ಅವನು ಅವಳನ್ನು ತಿರಸ್ಕರಿಸುವುದಕ್ಕೆ ಅನುವು ಮಾಡಿಕೊಡುವುದಿಲ್ಲ.

ಮನುಷ್ಯ ತನ್ನ ಕಾರ್ಯಗಳನ್ನು ತಿರಸ್ಕರಿಸಿದ್ದಾನೆ ಎಂದು ತೋರಿಬಂದಾಗ ಅವನ ಕಾರ್ಯ ಮುಗಿದಿರುತ್ತದೆ ಮತ್ತು ಕಾಳಿ ಇನ್ನೊಬ್ಬನಿಗಾಗಿ ಅವನನ್ನು ಬಿಟ್ಟುಕೊಟ್ಟಿರುತ್ತಾಳೆ. ಶ್ರೇಷ್ಠ ಕಾರ್ಯವನ್ನು ಕೈಕೊಂಡ ಮನುಷ್ಯನೊಬ್ಬನನ್ನು ವಿನಾಶಕ್ಕೀಡು ಮಾಡಿದಾಗ ಅದು ಅವನ ಅಹಂಮನ್ಯತೆಯ ಕಾರಣದಿಂದಾ–ಗಿರುತ್ತದೆ, ಅವನು ತನ್ನೊಳಗಿರುವ ಶಕ್ತಿಯನ್ನು ದುರುಪಯೋಗ ಮಾಡಿರುತ್ತಾನೆ, ನೆಪೋಲಿಯನ್‌ನನ್ನು ಮರಿದು ಹಾಕಿದ ಹಾಗೆ ದುರುಪಯೋಗ ಮಾಡಿಕೊಂಡ–ವನನ್ನು ಚೂರು, ಚೂರು ಮಾಡಲಾಗುತ್ತದೆ. ಕೆಲವು ಉಪಕರಣಗಳನ್ನು ಭದ್ರವಾಗಿ

ಇರಿಸಲಾಗುತ್ತದೆ, ಕೆಲವನ್ನು ಆಚೆಗೆ ಎಸೆದು ಬಿಡಲಾಗುತ್ತದೆ, ಚೂರು ಚೂರು ಮಾಡಲಾಗುತ್ತದೆ, ಆದರೆ ಎಲ್ಲವೂ ಉಪಕರಣಗಳೇ ಆಗಿರುತ್ತವೆ. ಇದು ಶ್ರೇಷ್ಠ ಜನರ ಶ್ರೇಷ್ಠತೆ, ಅದು ಅವರದೇ ಬಲದ ಮೂಲಕ ಅಲ್ಲ, ತಮ್ಮದೇ ಬಲದ ಮೂಲಕ ಅವರು ಶ್ರೇಷ್ಠ ಘಟನೆಗಳನ್ನು ನಿರ್ಧರಿಸಲಾರರು, ಆದರೆ ಅವರು ಸೇವೆ ಸಲ್ಲಿಸಲು ಯೋಗ್ಯರಾಗಿರುತ್ತಾರೆ ಮತ್ತು ವಿಶೇಷವಾಗಿ ರಚನೆಗೊಳಗಾಗಿರುವ ಉಪಕರಣಗಳಾಗಿರುತ್ತಾರೆ, ದೈವೀ ಸಾಮರ್ಥ್ಯ ಅವರನ್ನು ನಿರ್ಧರಿಸುತ್ತದೆ. ಯಾವುದೇ ಮನುಷ್ಯನಿಗಿಂತ ಹೆಚ್ಚಾಗಿ ಮಿರಾಬ್ಯೆಯು (Mirabeau) ಫ್ರೆಂಚ ಕ್ರಾಂತಿಯನ್ನು ಸೃಷ್ಟಿಸುವುದಕ್ಕೆ ಸಹಾಯ ಮಾಡಿದ. ಅವನು ತನ್ನನ್ನು ಅದರ ವಿರುದ್ಧ ಇರಿಸಿಕೊಂಡು ಹೆಣಗತೊಡಗಿದಾಗ, ರಾಜಾಧಿಕಾರದ ಆಸರೆಯಾದಾಗ ಚಕ್ರವನ್ನು ಹಿಂತಿರುಗಿಸಲು ಪ್ರಯತ್ನಿಸಿದಾಗ ಫ್ರಾನ್ಸ ದೇಶದ ಅತಿ ಬಲವುಳ್ಳದ್ದಾದ ಫ್ರೆಂಚ್ ಕ್ರಾಂತಿ ಹಿಂದೆ ಜಾರುವುದಕ್ಕೆ ನಿಂತುಕೊಂಡಿತೆ? ಕಾಳಿ ಮಿರಾಬ್ಬಿಯುವಿನ ಮೇಲೆ ತನ್ನ ಕಾಲನ್ನಿರಿಸಿದಳು ಮತ್ತು ಅವನು ಮಾಯವಾದ; ಆದರೆ ಕ್ರಾಂತಿ ಮುಂದುವ–ರಿದುಕೊಂಡು ಸಾಗಿತು, ಏಕೆಂದರೆ ಆ ಕ್ರಾಂತಿ ಕಾಲಪುರುಷನ ಪ್ರಕಟಣೆಯಾಗಿತ್ತು, ಕ್ರಾಂತಿ ದೇವನ ಸಂಕಲ್ಪದಿಂದಾಗಿತ್ತು.

ಅದು ಯಾವಾಗಲೂ ಹಾಗಿರುತ್ತದೆ. ಶ್ರೇಷ್ಠ ಘಟನೆಗಳು ತಮ್ಮ ಕಾರ್ಯದಿಂದ ಆದವುಗಳು ಎಂದು ಹೆಮ್ಮೆಪಟ್ಟುಕೊಳ್ಳುವ ಜನರಿರುತ್ತಾರೆ, ಏಕೆಂದರೆ ಆ ಘಟನೆಗಳ ಪ್ರಾರಂಭದಲ್ಲಿ ತಮ್ಮ ಕೈ ಅದರಲ್ಲಿದ್ದುದರ ಭಾವನೆ ಅವರಿಗಿರುತ್ತದೆ, ಅವರು ಕಾಲಗತಿಯ ಕಂದಕದಲ್ಲಿ ಅಧಃಪತನ ಹೊಂದುತ್ತಾರೆ, ಮತ್ತು ಇತರರು ಅವರ ಚೂರುಚೂರಾದ ಪ್ರಸಿದ್ಧಿಯ ಮೇಲೆ ಮುನ್ನಡೆದುಕೊಂಡು ಹೋಗುತ್ತಾರೆ. ತಮ್ಮ ಅಂತರಂಗದಲ್ಲಿ ಕಾಳಿಯಿಂದ ಮುಂದೆ ಗುಡಿಸಿಕೊಂಡು ಹೋದವರು, ವಿಧಿಯೊಂದಿಗೆ ಯಾವ ಒಪ್ಪಂದವನ್ನು ಮಾಡಿಕೊಳ್ಳದೇ ಇದ್ದವರು ಮಾತ್ರ ಉಳಿದುಕೊಳ್ಳುತ್ತಾರೆ. ವ್ಯಕ್ತಿಗಳಲ್ಲಿರುವ ಶ್ರೇಷ್ಠತೆ ಅಂತರಂಗದಲ್ಲಿರುವ ಸನಾತನ ದೈವೀ ಚೈತನ್ಯದ ಶ್ರೇಷ್ಠತೆಯಾಗಿರುತ್ತದೆ.

**CWSA, 13/31–32** **– ಶ್ರೀ ಅರವಿಂದರು**

*

**ಪ್ರಶ್ನೆ :** *ಈಗ ಪೃಥ್ವಿಯ ಮೇಲೆ ಅತಿಮಾನಸ ಅವತರಣ ಮಾಡಿರುವುದರಿಂದ ಜಗತ್ತಿನ ಸದ್ಯದ ಸ್ಥಿತಿಯನ್ನು ಬದಲು ಮಾಡಲು ಯುದ್ಧ ಅವಶ್ಯವಾಗಿರುತ್ತದೆಯೆ?*

**ಶ್ರೀಮಾತೆ :** ಎಲ್ಲವೂ ದೇಶಗಳ ಗ್ರಹಣಶಕ್ತಿಯ ಮೇಲೆ ಅವಲಂಬಿಸಿರುತ್ತದೆ. ಅವರು ವಿಸ್ತಾರವಾಗಿ ಹಾಗೂ ತೀವ್ರಗತಿಯಿಂದ ಹೊಸ ಶಕ್ತಿಗಳ ಪ್ರಭಾವಕ್ಕೆ ತಮ್ಮನ್ನು ತಮ್ಮ ಕಲ್ಪನೆಗಳಲ್ಲಿ ಹಾಗೂ ಕ್ರಿಯೆಯಲ್ಲಿ ತೆರೆದಿರಿಸಿಕೊಂಡರೆ, ಆಗ ಯುದ್ಧವನ್ನು ತಪ್ಪಿಸಹುದು. ಆದರೆ ಅದು ಯಾವಾಗಲೂ ಭಯವನ್ನುಂಟು ಮಾಡುತ್ತಿರುತ್ತದೆ ಮತ್ತು ಯಾವಾಗಲೂ ತಡೆಹಿಡಿದಿಟ್ಟ ಸ್ಥಿತಿಯಲ್ಲಿರುತ್ತದೆ. ಪ್ರತಿಯೊಂದು ತಪ್ಪು ಮತ್ತು ಪ್ರಜ್ಞೆಯನ್ನು ಅಂಧಕಾರದಲ್ಲಿರಿಸುವಿಕೆ ಈ ಭಯ ಹೆಚ್ಚಾಗುವಂತೆ ಮಾಡುತ್ತವೆ.

ಮತ್ತು ಆದಾಗ್ಯೂ ಕೊನೆಯ ವಿಶ್ಲೇಷಣೆಯಲ್ಲಿ ಪ್ರತಿಯೊಂದೂ ನಿಜವಾಗಿ ದೈವೀಕೃಪೆಯ ಮೇಲೆ ಅವಲಂಬಿಸಿರುತ್ತದೆ ಮತ್ತು ನಾವು ಭವಿಷ್ಯತ್ತಿನತ್ತ ಗಾಢ ನಂಬಿಕೆಯಿಂದ ಹಾಗೂ ಪ್ರಶಾಂತತೆಯಿಂದ ನೋಡಬೇಕು, ಅದೇ ವೇಳೆಗೆ ಸಾಧ್ಯವಿದ್ದಷ್ಟು ವೇಗದಿಂದ ಪ್ರಗತಿ ಸಾಧಿಸುತ್ತಿರಬೇಕು.

**CWM, 10/53** **– ಶ್ರೀಮಾತೆ**

*

## ಭವಿಷ್ಯತ್ತನ್ನು ಕುರಿತು ಇಣುಕು ನೋಟಗಳು

### ಭಾರತೀಯ ಯೋಗದ ಹೊರಹೊಮ್ಮುವಿಕೆ

ನಿರಂತರ ಜನ್ಮತಾಳುತ್ತಿರುವುದು ಭೌತಿಕ ಜಗತ್ತಿನ ಅಮರತ್ವದ ಸ್ಥಿತಿಯಾಗಿದೆ. ನಾವು ವೇದನೆ ಹಾಗೂ ಪ್ರಯಾಸಗಳ ಯುಗದಲ್ಲಿದ್ದೇವೆ, ತಮ್ಮಲ್ಲಿಯೇ ಉಪಯುಕ್ತತೆಯ ಯಾವುದೇ ಬಲವತ್ತರವಾದ ಸಾಮರ್ಥ್ಯವಿರುವ ಇಲ್ಲವೆ ಯಾವುದೇ ಉಳಿದುಕೊಳ್ಳುವ ರಹಸ್ಯ ಸದ್ಗುಣವಿರುವ ಎಲ್ಲ ಬಗೆಯ ಯೋಚನೆಗಳನ್ನು ಹಾಗೂ ಚಟುವಟಿಕೆಗಳನ್ನು ಪರಮೋಚ್ಚ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಮತ್ತು ಅವುಗಳು ಮರುಜನ್ಮತಾಳಲು ಅವುಗಳಿಗೆ ಅವಕಾಶ ಒದಗಿಸಲಾಗುತ್ತದೆ. ಜಗತ್ತು ಇಂದು Medea ಇರುವ ದೊಡ್ಡ ಕಡಾಯಿಯ ಮುಖವನ್ನು ಮುಂದಿರಿಸುತ್ತಿದೆ, ಅದರಲ್ಲಿ ಎಲ್ಲ ವಿಷಯಗಳನ್ನು ಎಸೆಯಲಾಗುತ್ತಿದೆ, ಚೂರು ಚೂರು ಮಾಡಲಾಗುತ್ತಿದೆ, ಪ್ರಯೋಗ ಕೈಕೊಳ್ಳಲಾಗುತ್ತಿದೆ, ಸಂಯೋಜನೆ ಮತ್ತು ಮರುಸಂಯೋಜನೆ ಮಾಡಲಾಗುತ್ತದೆ, ಅದು ನಾಶವಾಗುವುದಕ್ಕಾಗಿ ಮತ್ತು ಹೊಸರೂಪಗಳ ಚೆದುರಿ ಹೋದ ವಸ್ತುಗಳನ್ನು ಒದಗಿಸುವುದಕ್ಕಾಗಿ ಇಲ್ಲವೆ ಅಸ್ತಿತ್ವದ ಹೊಸ ಅವಧಿಗಾಗಿ ಪುನರುಜ್ಜೀವನಗೊಂಡು, ಬದಲಾಗಿ

ಹೊರಹೊಮ್ಮುವುದಕ್ಕಾಗಿ ಇರುತ್ತದೆ. ಭಾರತೀಯ ಯೋಗ, ಅದರ ಸಾರದಲ್ಲಿ, ವಿಶೇಷ ಬಗೆಯ ಕ್ರಿಯೆ ಇಲ್ಲವೆ ಪ್ರಕೃತಿಯ ಶ್ರೇಷ್ಠ ಸಾಮರ್ಥ್ಯಗಳಿಗೆ ರೂಪು ನೀಡುವಿಕೆಯಾಗಿದ್ದು, ಅದೇ ಸ್ವತಃ ವಿಶಿಷ್ಟ ಗುಣಲಕ್ಷಣಗಳುಳ್ಳದ್ದಾಗುವುದು, ವಿಭಜಿತಗೊಂಡದ್ದು, ನಾನಾ ರೀತಿಯಲ್ಲಿ ರೂಪುತಾಳಿದ್ದು ಆಗುವ ಅದು ಕಾರ್ಯರೂಪಕ್ಕೆ ಬರುವ ಸಾಧ್ಯತೆ ಹೊಂದಿರುವ ಮನುಕುಲದ ಭವಿಷ್ಯತ್ತಿನ ಜೀವನದ ಕ್ರಿಯಾಶೀಲ ಅಂಶಗಳಲ್ಲಿ ಒಂದಾಗಿದೆ. ಅದು ಸ್ಮೃತಿಪೂರ್ವಕಾಲದ ಮಗು, ನಮ್ಮ ಆಧುನಿಕ ಕಾಲದಲ್ಲಿ ಅದರ ಜೀವಶಕ್ತಿ (vitality) ಮತ್ತು ಸತ್ಯ ಇವುಗಳಿಂದ ಅದನ್ನು ರಕ್ಷಿಸಿಕೊಂಡು ಬರಲಾಗಿದೆ, ರಹಸ್ಯ ಶಾಲೆಗಳಲ್ಲಿ ಹಾಗೂ ವಿರಾಗಿಗಳ ಆಶ್ರಮಗಳಲ್ಲಿ ಆಶ್ರಯ ಪಡೆದಿದ್ದ ಅದು ಈಗ ಅಲ್ಲಿಂದ ಹೊರಹೊಮ್ಮುತ್ತಿದೆ ಮತ್ತು ಜೀವಂತವಿರುವ ಮಾನವ ಸಾಮರ್ಥ್ಯಗಳು ಹಾಗೂ ಉಪಯುಕ್ತತೆಗಳು ಇವುಗಳ ಭವಿಷ್ಯತ್ತಿನ ಮೊತ್ತದಲ್ಲಿ ಅದು ತನ್ನ ಸ್ಥಾನವನ್ನು ಅರಸುತ್ತಿದೆ. ಆದರೆ ಅದು ಮೊದಲು ತನ್ನನ್ನು ಮರುಶೋಧನೆಗೆ ಒಳಪಡಿಸಬೇಕು, ಅದು ಪ್ರತಿನಿಧಿಸುತ್ತಿರುವ ಆ ಸರ್ವಸಾಧಾರಣ ಸತ್ಯದಲ್ಲಿ, ಪ್ರಕೃತಿಯ ಆ ನಿಂತುಹೋಗದ ಗುರಿಯಲ್ಲಿ ತನ್ನ ಸತ್ತೆಯನ್ನು, ಅತ್ಯಂತ ಗಾಢವಾದ ಕಾರಣವನ್ನು ಮೇಲ್ಮೈಗೆ ತರಬೇಕು, ಮತ್ತು ಈ ಹೊಸ ಸ್ವ–ಜ್ಞಾನ ಮತ್ತು ಸ್ವ–ಯೋಗ್ಯತಾ ನಿರ್ಣಯ ಇವುಗಳ ಪ್ರಭಾವದ ಮೂಲಕ ತನ್ನದೇ ಮರಳಿ ಪಡೆದ ಮತ್ತು ಹೆಚ್ಚು ವಿಶಾಲ ಸಮನ್ವಯವನ್ನು ಕಂಡುಕೊಳ್ಳಬೇಕು. ತನ್ನನ್ನೇ ಸ್ವತಃ ಮರಳಿ ಗುರುತಿಸಿಕೊಂಡ ಅದು ಬಹಳ ಸುಲಭವಾಗಿ, ಸಾಮರ್ಥ್ಯಪೂರ್ಣವಾಗಿ ಮನುಕುಲದ ಮರುಸಂಘಟನೆಗೆ ಒಳಗಾದ ಜೀವನದಲ್ಲಿ ಪ್ರವೇಶಿಸುವುದು, ಆ ಮನುಕುಲದ ವಿಧಾನಗಳು ಅಂತರಂಗದಲ್ಲಿ ಅತ್ಯಂತ ರಹಸ್ಯ ಗುಪ್ತವಾದ ಭಾಗಗಳತ್ತ ಮತ್ತು ಅಸ್ತಿತ್ವದ ಹಾಗೂ ವ್ಯಕ್ತಿತ್ವದ ಅತ್ಯುಚ್ಚ ಎತ್ತರಗಳತ್ತ ಕರೆದೊಯ್ಯುವವೆಂದು ಹಕ್ಕು ಸಾಧಿಸುವವು.

**CWSA, 23/5–6** **– ಶ್ರೀ ಅರವಿಂದರು**

*

**ಪರಿವರ್ತನೆಗಾಗಿ ಒತ್ತಡ ಇಲ್ಲವೆ ವಿಭಜನೆ**

ಎಲ್ಲ ಜೀವನವನ್ನು ಕೈಗೆತ್ತಿಕೊಳ್ಳಬೇಕು, ಆದರೆ ಎಲ್ಲ ಜೀವನ ಪರಿವರ್ತನೆಗೆ ಒಳಗಾಗಬೇಕು, ಎಲ್ಲವೂ ಅತಿಮಾನಸ ಸ್ವಭಾವದಲ್ಲಿ ಆಧ್ಯಾತ್ಮಿಕ ಸತ್ತೆಯ

ಯಥಾಯೋಗ್ಯ ಅಭಿವ್ಯಕ್ತಿ, ಒಂದು ಭಾಗ, ಒಂದು ರೂಪವಾಗಬೇಕು. ಆ ಬದಲಾವಣೆಯನ್ನು ಸಹಿಸಿಕೊಳ್ಳಲಾಗದ ಚಟುವಟಿಕೆಯ ಎಲ್ಲ ರೂಪಗಳು ಮಾಯವಾಗಬೇಕು, ಅದನ್ನು ಸಹಿಸಿಕೊಳ್ಳುವುದೆಲ್ಲವೂ ಸುರಕ್ಷಿತವಾಗಿ ಉಳಿದು–ಕೊಳ್ಳುವುದು ಮತ್ತು ಆತ್ಮದ ಸಾಮ್ರಾಜ್ಯದಲ್ಲಿ ಪ್ರವೇಶಿಸುವುದು. ದೈವೀ ಶಕ್ತಿಯೊಂದು ಕಾರ್ಯನಿರತವಾಗಿದೆ ಮತ್ತು ಕೈಕೊಳ್ಳಬೇಕಾದುದನ್ನು, ಕೈಕೊಳ್ಳದೆ ಇರಬೇಕಾ–ದುದನ್ನು ಯಾವುದನ್ನು ಕ್ಷಣಕಾಲ ಕೈಗೆತ್ತಿಕೊಳ್ಳಬೇಕು ಇಲ್ಲವೆ ಯಾವುದನ್ನು ಶಾಶ್ವತವಾಗಿ ಕೈಬಿಡಬೇಕು ಎಂಬುದನ್ನು ಪ್ರತಿಕ್ಷಣ ಆಯ್ದುಕೊಳ್ಳುತ್ತದೆ, ಏಕೆಂದರೆ ಅದರ ಸ್ಥಾನದಲ್ಲಿ ನಾವು ನಮ್ಮದೇ ಆಸೆ, ನಮ್ಮದೇ ಅಹಂಕಾರವನ್ನು ಇರಿಸದೇ ಇರಬೇಕು ಮತ್ತು ಆ ಗುರಿಗಾಗಿ ನಾವು ಯಾವಾಗಲೂ ಎಚ್ಚರಿರಬೇಕು, ಜಾಗರೂಕತೆಯಿಂದಿರಬೇಕು, ದೈವೀ ಮಾರ್ಗದರ್ಶನಕ್ಕೆ ಜೀವಂತವಾಗಿರಬೇಕು, ತಪ್ಪುದಾರಿಗೆಳೆಯುವ ಅದೈವಿಕವಾದುದನ್ನು, ಅದು ಅಂತರಂಗದಿಂದ ಬಂದಿರಲಿ ಇಲ್ಲವೆ ಬಾಹ್ಯದಿಂದ ಬಂದಿರಲಿ, ಅದನ್ನು ಪ್ರತಿರೋಧಿಸಬೇಕು. ಆ ದೈವೀ ಶಕ್ತಿ ಸಾಕಾಗುತ್ತದೆ ಮತ್ತು ಅದು ಮಾತ್ರ ಸಮರ್ಥವಾಗಿರುತ್ತದೆ, ಅದು ಮಾರ್ಗಗಳ ಗುಂಟ ನೆರವೇರಿಕೆಯತ್ತ ಕರೆದೊಯ್ಯುತ್ತದೆ ಮತ್ತು ಅದು ಉಪಯೋಗಿಸುವ ಸಾಧನಗಳು ಬಹಳ ಭವ್ಯವಾಗಿರುತ್ತವೆ, ಬಹಳಷ್ಟು ಅಂತರಂಗದಲ್ಲಿರುತ್ತವೆ, ಮನಸ್ಸು ಅನುಸರಿಸುವುದಕ್ಕೆ ಬಹಳ ಸಂಕೀರ್ಣವಾಗಿರುತ್ತವೆ, ಆದೇಶ ನೀಡುವುದು ಬಹಳ ಕಡಿಮೆಯದಾಗಿರುತ್ತದೆ. ಅದು ಶ್ರಮದಾಯಕವಾದ, ಕಠಿಣವಾದ ಮತ್ತು ಅಪಾಯಕಾರಕವಾದ ಮಾರ್ಗ, ಆದರೆ ಬೇರೆ ಮಾರ್ಗವಿಲ್ಲ.

ಅಲ್ಲಿ ಕೇವಲ ಎರಡು ನಿಯಮಗಳಿವೆ, ಅವು ತೊಂದರೆಯನ್ನು ಕುಗ್ಗಿಸುತ್ತವೆ ಮತ್ತು ಅಪಾಯವನ್ನು ನಿವಾರಿಸುತ್ತವೆ. ಅಹಂಕಾರದಿಂದ, ಪ್ರಾಣಿಕ ಆಸೆಯಿಂದ ಕೇವಲ ಮನಸ್ಸಿನಿಂದ, ದುರಹಂಕಾರದಿಂದ ಒಳಗೊಂಡು ತರ್ಕ ಮಾಡುವ ಅಸಮರ್ಥತೆಯಿಂದ ಬರುವ ಎಲ್ಲವನ್ನೂ, ಅಜ್ಞಾನದ ನಿಯೋಗಿಗಳಿಗೆ ಸಹಾಯ ಮಾಡುವುದನ್ನೂ ನಿರಾಕರಿಸಬೇಕು. ಮನುಷ್ಯ ಆಳಾತಿ ಆಳದಲ್ಲಿರುವ ಆತ್ಮದ ಧ್ವನಿಯನ್ನು ಗುರುವಿನ ನಿರ್ದೇಶನವನ್ನು, ದೈವೀಪ್ರಭುವಿನ ಆಜ್ಞೆಯನ್ನು, ದೈವೀಮಾತೆಯ ಕಾರ್ಯಗತಿಯನ್ನು ಕುರಿತು ಕೇಳಿಸಿಕೊಳ್ಳುವುದನ್ನು, ಅನುಸರಿ–ಸುವುದನ್ನು ಕಲಿತುಕೊಳ್ಳಬೇಕು. ಇಂದ್ರಿಯಾಸಕ್ತಿಯ ಆಸೆಗಳಿಗೆ ಮತ್ತು ದೌರ್ಬಲ್ಯಗಳಿಗೆ, ಪ್ರಾಣಿಕ ತನ್ನ ತಳಮಳಗೊಳ್ಳುವ ಅಜ್ಞಾನದಲ್ಲಿರುವಾಗ ಹೊಂದಿರುವ ಹಾತೊರೆತ ಹಾಗೂ ಭಾವೋದ್ರೇಕಗಳಿಗೆ, ತನ್ನ ವೈಯಕ್ತಿಕ ಮನಸ್ಸಿನ

ಆದೇಶಗಳಿಗೆ– ಅವು ಶ್ರೇಷ್ಠತರ ಜ್ಞಾನದಿಂದ ಜ್ಞಾನೋದಯ ಪಡೆದಿರುವುದಿಲ್ಲ– ಅಂಟಿಕೊಳ್ಳುವವನು ನಿಜವಾದ ಆಂತರಿಕ ನಿಯಮವನ್ನು ಕಂಡುಕೊಳ್ಳಲಾರನು ಮತ್ತು ದೈವೀ ನೆರವೇರಿಕೆಯ ಮಾರ್ಗದಲ್ಲಿ ಅಡಚಣೆಗಳು ಗುಡ್ಡೆಗಟ್ಟುವಂತೆ ಮಾಡುತ್ತಾನೆ. ಆ ಮಬ್ಬಾಗಿಸುವ ನಿಯೋಗಿಗಳನ್ನು ಪತ್ತೆ ಹಚ್ಚುವವನು ಮತ್ತು ತ್ಯಜಿಸುವವನು, ಆಂತರಿಕ, ಬಾಹ್ಯ ಹಾಗೂ ಆಂತರಿಕ ನಿಜವಾದ ಮಾರ್ಗದರ್ಶಕನನ್ನು ತಾರತಮ್ಯದಿಂದ ಕಂಡುಕೊಳ್ಳುವವನು ಹಾಗೂ ಅನುಸರಿ–ಸುವವನು ಆಧ್ಯಾತ್ಮಿಕ ನಿಯಮವನ್ನು ಶೋಧಿಸುತ್ತಾನೆ ಮತ್ತು ಯೋಗದ ಗುರಿಯನ್ನು ತಲುಪುತ್ತಾನೆ.

**CWSA, 23/186–87** – **ಶ್ರೀ ಅರವಿಂದರು**

*

**ಇಡಿಯಾದುದನ್ನು ಸರ್ವ ಸಾಮಾನ್ಯ ರೀತಿಯಲ್ಲಿ ಎತ್ತಿ ಹಿಡಿಯುವುದು**

ಒಂದು ಕಾಲವಿತ್ತು, ಅಷ್ಟು ಬಹಳ ದೀರ್ಘ ಕಾಲದ ಹಿಂದಲ್ಲ. ಆಗ ಮನುಷ್ಯನ ಆಧ್ಯಾತ್ಮಿಕ ಅಭೀಪ್ಸೆಯನ್ನು ನಿಶ್ಚಲನೀರವತೆಯಲ್ಲಿರುವ ನಿಷ್ಕ್ರಿಯ ಶಾಂತಿಯತ್ತ, ಈ ಜಗತ್ತಿನ ಎಲ್ಲ ವಸ್ತು–ವಿಷಯಗಳಿಂದ ನಿರ್ಲಿಪ್ತವಾದದ್ದರತ್ತ ಹೊರಳಿಸಲಾಗಿತ್ತು, ಅದು ಹೋರಾಟವನ್ನು, ನಿಖರವಾಗಿ ಸಮರದಿಂದ ಮೇಲಕ್ಕೇರುವುದಕ್ಕಾಗಿ, ತಪ್ಪಿಸಿಕೊಳ್ಳುವುದಾಗಿತ್ತು, ಪ್ರಯತ್ನದಿಂದ ಮುಕ್ತಿ ಪಡೆಯುವುದಾಗಿತ್ತು. ಅದು ಆಧ್ಯಾತ್ಮಿಕ ಶಾಂತಿಯಾಗಿತ್ತು, ಅಲ್ಲಿ ಉದ್ವಿಗ್ನತೆ, ಹೋರಾಟ ಮತ್ತು ಪ್ರಯತ್ನ ಇವುಗಳು ನಿಂತು ಹೋಗುತ್ತಿದ್ದವಲ್ಲದೆ, ವೇದನೆ ಅದರ ಎಲ್ಲ ರೂಪಗಳಲ್ಲಿ ನಿಂತುಹೋಗುತ್ತಿತ್ತು ಮತ್ತು ಇದನ್ನು ದೈವೀಕೃಪೆ, ದೈವೀನೆರವು ಮತ್ತು ದೈವೀಮಧ್ಯಸ್ಥಿಕೆ ಎಂದು ಪರಿಗಣಿಸಲಾಗುತ್ತಿತ್ತು. ಮತ್ತು ಈಗಲೂ ಕೂಡ, ತಳಮಳ, ಉದ್ವಿಗ್ನತೆ ಹಾಗೂ ಅಧಿಕ ಒತ್ತಡಗಳಿರುವ ಈ ಯುಗದಲ್ಲಿ ಈ ಸಾರ್ವಭೌಮ ಶಾಂತಿ, ದೊರಕಿಸಬಹುದಾದ ಎಲ್ಲ ಸಹಾಯದಲ್ಲಿ ಅತ್ಯಂತ ಒಳ್ಳೆಯದು, ಅತ್ಯಂತ ಸ್ವಾಗತಾರ್ಹವಾದದ್ದು, ಕೇಳಿಕೊಂಡ ಹಾಗೂ ಭರವಸೆ ತಾಳಿದ ಉಪಶಮನ. ಬಹಳಷ್ಟು ಜನರಿಗೆ ಅದು ಇನ್ನೂ ದೈವೀ ಮಧ್ಯಸ್ಥಿಕೆ ದೈವೀಕೃಪೆಯ ಮಧ್ಯಸ್ಥಿಕೆ ಆಗಿರುತ್ತದೆ.

ವಾಸ್ತವದಲ್ಲಿ ನೀವು ಸಿದ್ಧಿಸಿಕೊಳ್ಳಬೇಕಾದುದು ಏನೇ ಇರಲಿ, ನೀವು ಈ ಪರಿಪೂರ್ಣ ಮತ್ತು ಬದಲಾಗದ ಶಾಂತಿಯನ್ನು ಸ್ಥಾಪಿಸುವುದರೊಂದಿಗೆ

ಪ್ರಾರಂಭಿಸಬೇಕು.– ಅದು ಯಾವುದೇ ಕಾರ್ಯಕ್ಕಾಗಿ ಅವಶ್ಯವಾದ ಆಧಾರ. ಆದರೆ ಪ್ರತ್ಯೇಕಗೊಂಡ, ಇಲ್ಲವೆ ವೈಯಕ್ತಿಕ ಮತ್ತು ಅಹಂಮನ್ಯತೆ ಇರುವ ಮುಕ್ತಿಯನ್ನು ಕುರಿತು ಯೋಚಿಸದೆ ಇದ್ದಾಗ ನೀವು ಅಲ್ಲಿಗೆ ನಿಂತುಬಿಡಲಾರಿರಿ. ದೈವೀಕೃಪೆಗೆ ಇನ್ನೊಂದು ಮುಖವಿದೆ, ಅದು ಪ್ರಗತಿಯ ಮುಖವಾಗಿದ್ದು ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸುತ್ತದೆ, ಮನುಕುಲವನ್ನು ಹೊಸ ಸಿದ್ಧಿಯತ್ತ ಮುಂದೂಡುವ ಆ ಮುಖ ಹೊಸ ಜಗತ್ತಿನ ದ್ವಾರಗಳನ್ನು ತೆರೆದಿರಿಸುತ್ತದೆ, ಅದರ ಪ್ರಯೋಜನ ಪಡೆಯುವುದಕ್ಕೆ ಕೆಲವರು ಶಕ್ತರಾಗುವಂತೆ ಮಾಡುತ್ತದಷ್ಟೇ ಅಲ್ಲ, ಆದರೆ ಅವರ ಪ್ರಭಾವದ ಮೂಲಕ, ಅವರ ಉದಾಹರಣೆ ಹಾಗೂ ಸಾಮರ್ಥ್ಯದ ಮೂಲಕ ಉಳಿದ ಮನುಕುಲಕ್ಕೆ ಒಂದು ಹೊಸ ಹಾಗೂ ಹೆಚ್ಚು ಒಳ್ಳೆಯದಾದ ಸ್ಥಿತಿಯನ್ನು ತಂದುಕೊಡುತ್ತದೆ.

ಭವಿಷ್ಯತ್ತಿನಲ್ಲಿ ಹಾಗೂ ಈಗಾಗಲೆ ಪೂರ್ವಭಾವಿಯಾಗಿ ಕಂಡುಕೊಂಡ ಸಾಧ್ಯತೆಗಳಲ್ಲಿ ಅದು ಸಿದ್ಧಿಯ ನೀಳನೋಟ (vista) ಗಳನ್ನು ತೆರೆದಿರಿಸುತ್ತದೆ, ಅವುಗಳ ಮೂಲಕ ಹೊಸ ಶಕ್ತಿಗಳಿಗೆ ಪ್ರಜ್ಞಾಪೂರ್ವಕವಾಗಿ ಇಲ್ಲವೆ ಪ್ರಜ್ಞಾರಹಿತವಾಗಿ ತೆರೆದಿರಿಸಿಕೊಂಡ ಮನುಕುಲದ ಇಡಿಯಾದ ಭಾಗವನ್ನು ಉಚ್ಚತರ, ಹೆಚ್ಚು ಸಾಮರಸ್ಯವುಳ್ಳ, ಹೆಚ್ಚು ಪರಿಪೂರ್ಣವಾದ ಜೀವನದತ್ತ ಮೇಲಕ್ಕೆತ್ತಿ ಹಿಡಿಯಲಾಗುವುದು ಮತ್ತು ವ್ಯಕ್ತಿಗತ ಪರಿವರ್ತನೆಗಳು ಎಲ್ಲ ಸಂಘಟನೆಗಳಲ್ಲಿ ಅನುಮತಿ ದೊರಕಿಸದಿದ್ದರೂ, ಸಾಧ್ಯವಾಗದಿದ್ದರೂ ಕನಿಷ್ಠಪಕ್ಷ ಅಲ್ಲಿ ಒಂದು ಬಗೆಯ ಇಡಿಯಾದುದನ್ನು ಮೇಲಕ್ಕೆತ್ತಿ ಹಿಡಿಯುವುದಿರುತ್ತದೆ, ಹೊಸ ಶಾಂತಿವ್ಯವಸ್ಥೆ, ಹೊಸ ಸಾಮರಸ್ಯ ಸ್ಥಾಪಿತಗೊಳ್ಳಲು ಶಕ್ಯವಾಗುವಂತೆ ಮಾಡುವ ಎಲ್ಲದರ ಸಾಮರಸ್ಯವನ್ನುಂಟು ಮಾಡುವುದಿರುತ್ತದೆ; ಅವ್ಯವಸ್ಥೆಯಿಂದ ಉಂಟಾದ ತಳಮಳ ಹಾಗೂ ಸದ್ಯ ಇರುವ ಹೋರಾಟ ಮಾಯವಾಗುವುದಿರುತ್ತದೆ, ಅದರ ಸ್ಥಾನದಲ್ಲಿ ಇಡಿಯಾದುದು ಸಾಮರಸ್ಯದಿಂದ ಕಾರ್ಯಕೈಕೊಳ್ಳುವುದಕ್ಕೆ ಅನುವು ಮಾಡಿಕೊಡುವ ಶಾಂತಿ ವ್ಯವಸ್ಥೆ ಬರುವುದಿರುತ್ತದೆ.

*

**ಅತಿಮಾನಸದ ಅವರೋಹಣದಿಂದ ಉಂಟಾದ ಇತರ ಪರಿಣಾಮಗಳು**

ಅಲ್ಲಿ ಇತರ ಪರಿಣಾಮಗಳಿರುತ್ತವೆ, ವಿರುದ್ಧ ವಿಧಾನ, ಅದು ಜೀವನದಲ್ಲಿ ಸೃಷ್ಟಿಯಾದ ವಿಕೃತಿಯನ್ನು ಕುರೂಪವನ್ನು ನಿರ್ಮೂಲ ಮಾಡುವ ಪ್ರವೃತ್ತಿ

ಹೊಂದಿರುತ್ತದೆ, ಆ ವಿಕೃತಿ ಮನಸ್ಸಿನ ಮಧ್ಯಸ್ಥಿಕೆಯಿಂದ ಆಗಿರುತ್ತದೆ, ವಿರೂಪ–ಗೊಳ್ಳುವಿಕೆಗಳ ಇಡೀ ಶ್ರೇಣಿ ವೇದನೆಯನ್ನು, ದುಃಸ್ಥಿತಿಯನ್ನು, ನೈತಿಕ ಬಡತನವನ್ನು ಉಲ್ಬಣಗೊಳಿಸಿವೆ, ಕೀಳುಸ್ಥಿತಿಯಲ್ಲಿರುವ, ಜುಗುಪ್ಸೆ ತರಿಸುವ ದುಸ್ಥಿತಿಗಳ ಇಡೀ ವಲಯ ಮಾನವ ಜೀವನದ ಇಡೀ ಭಾಗವನ್ನು ಭೀಕರವಾದ–ದ್ದನ್ನಾಗಿ ಮಾಡಿದೆ. ಅದು ಮಾಯವಾಗಬೇಕು. ಅದು ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಮನುಕುಲ ಪಶು ಜೀವನಕ್ಕಿಂತ ಅನಂತಪಟ್ಟು ಕೀಳಾದದ್ದನ್ನಾಗಿ ಮಾಡುತ್ತದೆ, ಪಶು ಜೀವನ ಅದರ ಸರಳತೆ, ಸ್ವಾಭಾವಿಕವಾಗಿ ಸ್ವಯಂ ಪ್ರೇರಣೆ ಹೊಂದಿರುವಿಕೆ ಇವುಗಳೊಂದಿಗೆ ಉಳಿದದ್ದೇನೇ ಇದ್ದರೂ ಸಾಮರಸ್ಯದಿಂದ ಕೂಡಿರುತ್ತದೆ. ಮನುಕುಲದ ಇಡೀ ಭಾಗ ಅಹಂಕಾರಕ್ಕೆ ಸಂಬಂಧಿಸಿದ ಆವಶ್ಯಕತೆ–ಗಳತ್ತ ಹೊರಳಿಕೊಂಡಿರುವುದರ ಕಾರಣದಿಂದಾಗಿ ದುಃಸ್ಥಿತಿಗೆ ಹಾಗೂ ಕೀಳ್ದೆಸೆಗೆ ಒಳಗಾಗಿರುವಷ್ಟು ಪಶು ಜೀವನ ಒಳಗಾಗಿರುವುದಿಲ್ಲ.

ಮನುಷ್ಯ ಮೇಲ್ಗಡೆಗೆ ಸಾಗಬೇಕು, ದೈವೀ ಪ್ರಕಾಶ ಹಾಗೂ ದೈವೀ ಸಾಮರಸ್ಯಗಳಲ್ಲಿ ಮುನ್ನುಗ್ಗಬೇಕು ಇಲ್ಲವೆ ಹಿತಕರ, ವಿಕೃತಗೊಂಡಿರದ ಪಶು ಜೀವನದ ಸರಳತೆಯಲ್ಲಿ ಹಿಮ್ಮೊಗವಾಗಿ ಮುಳುಗಿ ಹೋಗಬೇಕು.

(ಕ್ಷಣಕಾಲದ ಮೌನದ ನಂತರ ಶ್ರೀಮಾತೆಯವರು ಅಧಿಕವಾಗಿ ಹೇಳಿದ್ದು).

ಮೇಲಕ್ಕೆತ್ತಲು ಸಾಧ್ಯವಾಗದಂತಹರು, ಪ್ರಗತಿಯನ್ನು ತಿರಸ್ಕರಿಸುವವರು ಸ್ವಯಂಚಾಲಿತವಾಗಿ ಮಾನಸಿಕ ಪ್ರಜ್ಞೆಯ ಉಪಯೋಗವನ್ನು ಕಳೆದುಕೊಳ್ಳುತ್ತಾರೆ ಮತ್ತು ಅಧಃಪತನ ಹೊಂದುತ್ತಾರೆ.

**ಅನುಯಾಯಿಯೊಂದಿಗೆ ಮಾತುಕತೆ: ಜೂನ್ 1958** **– ಶ್ರೀಮಾತೆ**

*

ಹಿಂದಿನ ಅನುಭವದ ಪರಿಣಾಮವನ್ನು ಕಳೆದುಕೊಳ್ಳುತ್ತೇವೇನೋ ಉಚ್ಚ ಹಾಗೂ ವಿಶಾಲವಾದ ಪ್ರಜ್ಞೆಯನ್ನು ಬಿಟ್ಟುಕೊಟ್ಟು ಮತ್ತೆ ನಿಮ್ನಸ್ಥಿತಿಗೆ ಇಳಿದು ಹೋಗುತ್ತೇವೇನೋ ಎಂಬ ಭಯದಿಂದ ಬಹಳಷ್ಟು ಸಲ ನಾವು ಹಳೆಯದಕ್ಕೆ ಅಂಟಿಕೊಂಡಿರುತ್ತೇವೆ.

**CWM, 15/70** **– ಶ್ರೀಮಾತೆ**

*

**ಭವಿಷ್ಯದ್ದರ್ಶನ (Apocalypse)**

ಭೌತಿಕ ದುಃಸ್ಥಿತಿ ಇಲ್ಲವೆ ಜಗತ್ತಿನ ಸಂಪತ್ತಿನ ಅಸಮಾನ ಹಂಚಿಕೆ ಇವುಗಳ ನಿವಾರಣೆಗೆ ಉಪಾಯ ಕಂಡುಕೊಳ್ಳಬಹುದೆಂಬುದನ್ನು ಮನುಷ್ಯ ತಿಳಿದುಕೊಳ್ಳ–ಬಲ್ಲನು. ಅದೆಲ್ಲದಕ್ಕೆ ಉಪಾಯವೆಂದಾಗಿ ಮನುಷ್ಯ ಆರ್ಥಿಕ ಮತ್ತು ಸಾಮಾಜಿಕ ಪರಿಹಾರಗಳನ್ನು ಕುರಿತು ಯೋಚಿಸಬಲ್ಲನು, ಆದರೆ ಈ ವಿಶಿಷ್ಟ ದುಃಸ್ಥಿತಿ, ಈ ಮಾನಸಿಕ ದುಃಸ್ಥಿತಿ, ಪ್ರಾಣಿಕ ವಿಕೃತಿ – ಬದಲಾಗದೆ ಇರದೇ ಇರುವಂತಹವು ಅವು ಬದಲಾಗಲು ಬಯಸುವುದಿಲ್ಲ. ಈ ಬಗೆಯ ಮನುಕುಲಕ್ಕೆ ಸೇರಿದವರು ವಿಭಜನೆಗೆ ಮೊದಲಿನಿಂದಲೇ ಗುರಿಯಾಗಿರುತ್ತಾರೆ.

ಅತಿಮನಸ್ಸಿನೊಡನೆ ಏಕತೆ ಪಡೆಯಲು ಹಾಗೂ ತನ್ನನ್ನು ಮುಕ್ತಗೊಳಿಸಿ–ಕೊಳ್ಳಲು ಶಕ್ತವಾಗಿರುವ ಮನುಕುಲದ ಭಾಗ, ಮಾನವ ಪ್ರಜ್ಞೆಯ ಭಾಗ ಸಂಪೂರ್ಣವಾಗಿ ಪರಿವರ್ತನೆ ಹೊಂದುವುದು. ಅದು ತನ್ನ ಭವಿಷ್ಯತ್ತಿನ ನೈಜತೆಯತ್ತ ಚಲಿಸುತ್ತಿದೆ, ಅದನ್ನಿನ್ನೂ ಬಾಹ್ಯರೂಪದಲ್ಲಿ ಅಭಿವ್ಯಕ್ತಪಡಿಸಲಾಗಿಲ್ಲ, ಪಶುಜೀವನದ ಸರಳತೆಗೆ, ಪ್ರಕೃತಿಗೆ ಸಮೀಪವಾದದ್ದನ್ನೆಲ್ಲ ಪ್ರಕೃತಿಯಿಂದ ಮರುಹೀರಿಕೊಳ್ಳಲಾಗುವುದು, ಆದ್ಯಂತವಾಗಿ ಮೈಗೂಡಿಸಿಕೊಳ್ಳಲಾಗುವುದು. ಆದರೆ ಮಾನವ ಪ್ರಜ್ಞೆಯ ಭ್ರಷ್ಟವಾದ ಭಾಗವನ್ನು ಅಂತ್ಯಗೊಳಿಸಲಾಗುವುದು, ಏಕೆಂದರೆ ಅದು ಮನಸ್ಸನ್ನು ತಪ್ಪಾಗಿ ಉಪಯೋಗಿಸಿ ಈ ವಿಕೃತಿಗೆ ಅನುವು ಮಾಡಿಕೊಡುತ್ತದೆ.

ಆ ಬಗೆಯ ಮನುಕುಲ ಫಲರಹಿತ ಪ್ರಯತ್ನಕ್ಕೆ ಸೇರಿದುದಾಗಿದೆ ಮತ್ತು ಅದನ್ನು ತೆಗೆದು ಹಾಕಲಾಗುವುದು; ಅದು ವಿಶ್ವಂಭರ ಇತಿಹಾಸದ ಗತಿಯಲ್ಲಿ ಎಷ್ಟೋ ಬೇರೆ ಅಕಾಲಿಕ ಜೀವಜಾತಿಗಳನ್ನು ತೆಗೆದು ಹಾಕಿದ ರೀತಿಯದಾಗಿದೆ.

ಪ್ರವಾದಿಗಳೆಂದು ಕರೆಯಲಾದ ಕೆಲವು ಜನರಿದ್ದರು, ಅವರಿಗೆ ಭವಿಷ್ಯತ್ತಿನ ಈ ದರ್ಶನವಾಗಿತ್ತು, ಆದರೆ ಯಾವಾಗಲೂ ಆಗುವ ಹಾಗೆ ಅದು ಮಿಶ್ರಣಕ್ಕೊಳ–ಗಾಗಿತ್ತು ಭವಿಷ್ಯತ್ತಿನ ಅವರ ದರ್ಶನದಲ್ಲಿ ಅತಿಮಾನಸ ಜಗತ್ತಿನ ದರ್ಶನವಾಗಿ–ರಲಿಲ್ಲ, ಈ ಅತಿಮಾನಸ, ಒಪ್ಪಿಗೆ ನೀಡುವ ಮನುಕುಲದ ಭಾಗವನ್ನು ಎತ್ತಿ ಹಿಡಿಯುವುದಕ್ಕೆ ಮತ್ತು ಭೌತಿಕ ಜಗತ್ತನ್ನು ಪರಿವರ್ತಿಸುವುದಕ್ಕೆ ಬರುವುದಿತ್ತು ಎಂಬುದು ಅವರಿಗೆ ತಿಳಿದಿರಲಿಲ್ಲ. ಹಾಗಿದ್ದರೂ ಈ ವಿಕೃತಗೊಂಡ ಮಾನವ

ಪ್ರಜ್ಞೆಯಲ್ಲಿ ಜನಿಸಿದವರಿಗೆ ವಿಶ್ವಾಸ ನೀಡುವುದಕ್ಕಾಗಿ ನಂಬಿಕೆಯ ಮೂಲಕ ಪಾಪ ನರಕಗಳಿಂದ ವಿಮೋಚನೆ ಪಡೆಯುವುದನ್ನು ಕಲಿಸಿಕೊಡಲಾಗುತ್ತಿತ್ತು. ಭೌತದ್ರವ್ಯದಲ್ಲಿ ಭಗವಂತನ ಯಜ್ಞಾಹುತಿಯಲ್ಲಿ ನಂಬಿಕೆ ಇದ್ದವರು ಸ್ವಯಂಚಾಲಿತವಾಗಿ ರಕ್ಷಣೆ ಪಡೆಯುತ್ತಿದ್ದರು, ಆ ರಕ್ಷಣೆ ಇನ್ನೊಂದು ಜಗತ್ತಿನಲ್ಲಿ ದೊರಕುತ್ತಿತ್ತು – ಕೇವಲ ನಂಬಿಕೆ, ಅಲ್ಲಿ ತಿಳಿವಳಿಕೆ ಇರುತ್ತಿರಲಿಲ್ಲ, ಬುದ್ಧಿಮತ್ತೆ ಇರುತ್ತಿರಲಿಲ್ಲ. ಅವರು ಅತಿಮಾನಸ ಜಗತ್ತನ್ನು ಎಂದಿಗೂ ನೋಡಲಿಲ್ಲ ಇಲ್ಲವೆ, ಭೌತದ್ರವ್ಯದಲ್ಲಿ ತೊಡಗಿಕೊಳ್ಳುವಿಕೆ ಭಗವಂತನ ಶ್ರೇಷ್ಠ ಯಜ್ಞಾಹುತಿ ಎಂಬುದನ್ನು ಅವರು ನೋಡಲಿಲ್ಲ, ಈ ತೊಡಗಿಕೊಳ್ಳುವಿಕೆಯೇ ಭೌತದ್ರವ್ಯ ಭಗವಂತನ ಇಡಿಯಾದ ಜ್ಞಾನಪ್ರಕಾಶನ (revelation) ದತ್ತ ಕರೆದೊಯ್ಯುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ: ಜೂನ್ 1958 – ಶ್ರೀಮಾತೆ**

*

**ಅಸುರನ ಪರಿವರ್ತನೆ ಇಲ್ಲವೆ ವಿಘಟನೆ**

**ಪ್ರಶ್ನೆ :** *ಶ್ರೀಮಾತೆಯವರೆ, ಅಸುರನಲ್ಲಿ ಭಗವಂತನ ಸ್ವಲ್ಪ ಏನೋ ಇದೆಯೆಂದು ಹೇಳಲಾಗಿದೆ.*

**ಶ್ರೀಮಾತೆ :** ಸ್ವಾಭಾವಿಕವಾಗಿ ಅದು ಹಾಗಿದೆ.

**ಪ್ರಶ್ನೆ :** *ಭಗವಂತ ಅಸುರನ ಜೊತೆಗೆ ಹೋರಾಡಿದಾಗ ಅವನಲ್ಲಿರುವ ಭಗವಂತ ಏನು ಮಾಡುತ್ತಾನೆ?*

**ಶ್ರೀಮಾತೆ :** ಅವನು ಭಗವಂತನಲ್ಲಿ ಮರಳಿ ಹೋಗುತ್ತಾನೆ. ನಿಮಗೆ ಆ ಕತೆ ತಿಳಿದಿದೆಯೆ? ಅವನನ್ನು ಮರಳಿ ಹೀರಿಕೊಳ್ಳಲಾಗುವುದು, ಇದನ್ನು ಕುರಿತು ರಾಮಾಯಣದಲ್ಲಿ ಬರುವ ಕತೆ ಈ ಅರ್ಥದಲ್ಲಿ ಬಹಳ ಸತ್ಯವಾದದ್ದು.

**ಪ್ರಶ್ನೆ :** *ಭಗವಂತನಲ್ಲಿ ಭಗವಂತ ಮರಳಿ ಹೋಗುವವರೆಗೆ ಅಲ್ಲಿ ಪರಿವರ್ತನೆ ಇರುವುದಿಲ್ಲ?*

**ಶ್ರೀಮಾತೆ :** ಅದು ಪ್ರಳಯ! ಅದು ಪರಿವರ್ತನೆಯಲ್ಲ, ಅದು ಪೃಥ್ವಿ ವಿಘಟನೆ ಹೊಂದುವುದಾಗಿರುತ್ತದೆ. ಅಲ್ಲಿ ಆರು ಸೃಷ್ಟಿಗಳಿದ್ದವೆಂದು ಹೇಳಲಾಗಿದೆ ಎಂದರೆ ವಿಶ್ವದ ಆರು ಹೊರರೂಪ ಕೊಡುವುದಾಗಿರುತ್ತದೆ, ಆರು ಸಲ ವಿಶ್ವ ಹಿಂತಿರುಗಿ

ಹೋಯಿತು. ಅದನ್ನು ಶಾಸ್ತ್ರಗಳಲ್ಲಿ ನಿರೂಪಿಸಲಾಗಿದೆ, ಭಗವಂತನಲ್ಲಿ ಹಿಂತಿರುಗಿ ಹೋಯಿತು. ಇದನ್ನು ಕೊನೆ ಎಂದು ಹೇಳಲಾಗಿದೆ. ಅದು ಸ್ಪಷ್ಟವಾಗಿ ಒಂದು ಕೊನೆ ಕಂಡುಕೊಳ್ಳುವುದಾಗಿದೆ, ಆದರೆ ಅದು ಸಂಪೂರ್ಣಗೊಳಿಸುವುದಲ್ಲ. ಆ ಸೃಷ್ಟಿಯಲ್ಲಿ ಏನೋ ಒಂದರ ಕೊರತೆ ಇದ್ದುದರಿಂದ ಅದನ್ನು ಹಿಂತೆಗೆದುಕೊಂಡು ಪುನಃ ತಯಾರು ಮಾಡಬೇಕಾದ ಆವಶ್ಯಕತೆ ಉಂಟಾಯಿತು. ನಮ್ಮ ಸದ್ಯದ ಸೃಷ್ಟಿ ಏಳನೆಯದೆಂದು ಹೇಳಲಾಗಿದೆ, ಅದು ಏಳನೆಯದಾದ್ದರಿಂದ ಅದು ನಿಜವಾದ–ದ್ದಾಗಿದೆ, ಎಂದರೆ, ಅದು ಕೊನೆಯದು, ಅದನ್ನು ಮತ್ತೆ ಹಿಂತೆಗೆದುಕೊಳ್ಳ–ಲಾಗುವುದಿಲ್ಲ, ಅದು ಪರಿವರ್ತನೆಗೊಳಗಾಗುತ್ತ ಮುಂದುವರಿಯುತ್ತದೆ ಮತ್ತು ಹೆಚ್ಚು ಹೆಚ್ಚಾಗಿ ಪರಿಪೂರ್ಣವಾಗುತ್ತದೆ, ಅದರಿಂದಾಗಿ ಅದನ್ನು ಹಿಂತೆಗೆದುಕೊಳ್ಳ–ಲಾಗುವುದಿಲ್ಲ.

ಸದ್ಯದ ಸೃಷ್ಟಿಯ ವಿಶೇಷ ಗುಣಲಕ್ಷಣ 'ಸಮತೋಲನ' ವಾಗಿದೆ; ಆ ಕಾರಣದಿಂದಾಗಿ ಈ ಸೃಷ್ಟಿಯಲ್ಲಿ, ಪ್ರತಿಯೊಂದು ವಸ್ತು–ವಿಷಯ ಅದರ ಸ್ಥಾನದಲ್ಲಿ ಪರಿಪೂರ್ಣ ಸಮತೋಲನದಲ್ಲಿದ್ದರೆ, ಸರಿ, ಅಲ್ಲಿ ಅನಿಷ್ಟವಿರುವುದಿಲ್ಲ. ಅನಿಷ್ಟ–ವೆಂದರೇನು?– ಅದು ವಸ್ತು–ವಿಷಯಗಳು ಸಮತೋಲನದಲ್ಲಿ ಇರದೆ ಇರುವು–ದಾಗಿದೆ! ಯಾವುದೂ ತನ್ನಲ್ಲಿಯೇ ಕೆಟ್ಟದ್ದಾಗಿರುವುದಿಲ್ಲ, ತಪ್ಪಾದುದು ಅದರ ಸ್ಥಾನವಾಗಿರುತ್ತದೆ, ಅದು ನಿಜವಾದ ಸ್ಥಾನವಾಗಿರುವುದಿಲ್ಲ.

**ಪ್ರಶ್ನೆ :** *ಹಾಗಾದರೆ ಅಸುರನ ಸ್ಥಾನವೇನು?*

**ಶ್ರೀಮಾತೆ :** ಅವನನ್ನು ಭಗವಂತನಲ್ಲಿ ಹಿಂತೆಗೆದುಕೊಳ್ಳುವುದಾಗಿರುತ್ತದೆ. ನಾಲ್ಕು ಶ್ರೇಷ್ಠ ಅಸುರರಿದ್ದರು. ಈ ನಾಲ್ಕು ಜನರಲ್ಲಿ ಇಬ್ಬರನ್ನು ಪರಿವರ್ತಿಸಲಾಗಿದೆ. ಅವರು ದೈವೀ ಕಾರ್ಯದಲ್ಲಿ ಭಾಗವಹಿಸುತ್ತಿದ್ದಾರೆ. ಇನ್ನಿಬ್ಬರು ನಿರಾಕರಿಸುತ್ತಿದ್ದಾರೆ. ಎಷ್ಟು ಕಾಲದವರೆಗೆ ಅವರು ನಿರಾಕರಿಸಬಲ್ಲರು? ನಾವು ಕಾದು ನೋಡೋಣ. ಹಾಗಾಗಿ ಅವರು ಪರಿವರ್ತನೆಗೆ ಒಳಪಡುವುದನ್ನು ಎಂದರೆ ತಮ್ಮ ಸ್ಥಾನದಲ್ಲಿರುವುದನ್ನು ಸಮಚಿತ್ತತೆ ಹೊಂದಿರುವುದನ್ನು ಆಯ್ಕೆ ಮಾಡಿಕೊಳ್ಳುವುದು ಇಲ್ಲವೆ ದೈವೀ ಮೂಲದಲ್ಲಿ ಪುನಃ ಹೀರಿಕೊಳ್ಳುವಿಕೆಗೆ ಒಳಗಾಗುವುದನ್ನು ಆಯ್ಕೆ ಮಾಡಿಕೊಳ್ಳು–ವುದಿರುತ್ತದೆ.

ಒಬ್ಬನಿದ್ದಾನೆ, ಅವನು ಬಹುಮಟ್ಟಿಗೆ ಪರಿವರ್ತನೆಗೊಳಗಾಗುವುದನ್ನು ಕೈಕೊಳ್ಳಲು ಪ್ರಯತ್ನಿಸಿದ್ದಾನೆ ಮತ್ತು ಅದರಲ್ಲಿ ಯಶಸ್ವಿಯಾಗಲಿಲ್ಲ. ಅದನ್ನು

ಕೈಕೊಳ್ಳಬೇಕಾದಾಗ ಅದು ಬಹಳ ಅಹಿತಕರ ಎಂದು ತೋರಿಬಂದಿತು. ಹಾಗಾಗಿ ಅವನು ಅದನ್ನು ಇನ್ನೊಂದು ಸಮಯ ಬರುವುದಕ್ಕಾಗಿ ಮುಂದೂಡಿದ್ದಾನೆ.

ಇನ್ನೊಬ್ಬನನ್ನು ಕುರಿತು ಹೇಳುವುದಾದರೆ ಅವನು ಪ್ರಯತ್ನ ಮಾಡುವುದನ್ನು ನಿರಾಕರಿಸುತ್ತಾನೆ. ಅವನು ಜಗತ್ತಿನಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಕೈಗೆತ್ತಿ–ಕೊಂಡಿದ್ದಾನೆ, ಏಕೆಂದರೆ ವಿಷಯಗಳು ಅವಿರುವ ರೀತಿಯಲ್ಲಿ ತಿಳಿದುಕೊಂಡಿರದೆ ಇದ್ದ ಜನರು ಅವನನ್ನು 'ದೇಶಗಳ ಪ್ರಭು' ಎಂದು ಕರೆಯುತ್ತಾರೆ. ವಾಸ್ತವದಲ್ಲಿ ಸ್ವಲ್ಪ ಕಾಲದ ಹಿಂದೆ ನಾನು ಜಗತ್ತನ್ನು ಆಳುವ ಶಕ್ತಿಗಳನ್ನು ಕುರಿತು ಹೇಳುತ್ತಿದ್ದೆ, ಅವು ತಮ್ಮ ಆಳಿಕೆಯನ್ನು ಬಿಟ್ಟುಕೊಡಲು ಬಯಸುವುದಿಲ್ಲ. ಅವು ಅದರೊಡನೆ ಸಂಪೂರ್ಣ ತೃಪ್ತಿಯಿಂದಿವೆ.– ಒಂದು ದಿನ ತನ್ನ ಕೊನೆ ಬರುತ್ತದೆ ಎಂಬುದನ್ನು ಅವನು ತಿಳಿದಿಲ್ಲ ಎಂದಲ್ಲ, ಆದರೆ ಅದನ್ನು ಸಾಧ್ಯವಿದ್ದಷ್ಟು ದೀರ್ಘಕಾಲದವರೆಗೆ ಯಾವಾಗಲೂ ಮುಂದೂಡುತ್ತ ಬಂದಿದ್ದಾನೆ.

ಆದರೆ ಅವುಗಳಿಗೆ ಮಾನವ ಆಯಾಮಗಳಿಲ್ಲದೆ ಇರುವುದರಿಂದ ಅದು ಬಹಳ ದೀರ್ಘಕಾಲದವರೆಗೆ ಹಾಗೆಯೇ ನಡೆದುಕೊಂಡು ಹೋಗಬಹುದು ಅಲ್ಲವೆ? ಪೃಥ್ವಿಯ ಮೇಲೆ ಎಲ್ಲಿಯೋ ಒಂದೆಡೆ ಮಾನವ ಪ್ರಜ್ಞೆಯೊಂದು ಅವುಗಳ ಪ್ರಭಾವಕ್ಕೆ ಪ್ರತಿಸ್ಪಂದಿಸುತ್ತ ಇರುವವರೆಗೆ ಅವು ಉಳಿದುಕೊಳ್ಳುತ್ತವೆ. ಹಾಗಾಗಿ ಆ ಸಮಸ್ಯೆಯನ್ನು ನೀವು ಕಲ್ಪನೆ ಮಾಡಿಕೊಳ್ಳಬಹುದು. ಈಗ ಅದು ವ್ಯಕ್ತಿಗಳ ಮೂಲಕ ಇರುವುದಿಲ್ಲ. ಆದರೆ ರಾಷ್ಟ್ರಗಳ ಮೂಲಕ ತಮ್ಮ ಪ್ರಭಾವ ಬೀರುತ್ತವೆ.

**CWM, 6/170–72** **– ಶ್ರೀಮಾತೆ**

*

ಕಬ್ಬಿಣದ ಯುಗ ಕೊನೆಗೊಂಡಿಹುದು. ಕೇವಲ ಈಗ
ಮೃತವಾಗುತ್ತಿರುವ ಗತಕಾಲದ ಕೊನೆಯ ಭೀಕರ ಉದ್ರೇಕ
ರಾಷ್ಟ್ರಗಳನು ಅಲುಗಾಡಿಸುವುದು ಮತ್ತು ಅದು ಸಾಗಿ ಹೋದಾಗ
ಅನರ್ಥಗಳನು ಕಳೆದುಕೊಂಡ ಪೃಥ್ವಿ ತನ್ನ ಹೆಚ್ಚು ಸುಂದರ ಹುಬ್ಬುಗಳನು
ಮೇಲಕ್ಕೆತ್ತುವುದು.

**CWSA, 2/244** **– ಶ್ರೀ ಅರವಿಂದರು**

*

**ಅಸುರರ ಮೂಲ ಹಾಗೂ ಕೊನೆ**

**ಪ್ರಶ್ನೆ :** *ದೈವೀ ಪ್ರಕಾಶ, ದೈವೀ ಪ್ರೇಮ, ದೈವೀ ಸತ್ಯ ಹಾಗೂ ಮೃತ್ಯುವಿಗೆ ವಿರುದ್ಧವಾದುದು ಹೀಗೆ ನಾಲ್ಕು ದೈವೀ ಶಕ್ತಿಗಳಿವೆ ಎಂದು ಹೇಳಿದ್ದೀರಿ.*

**ಶ್ರೀಮಾತೆ :** ಮತ್ತು ಏನು?

(ಮತ್ತೊಂದು ಮಗು ನಗುತ್ತ ಹೇಳುತ್ತದೆ) ಜೀವನ!

**ಶ್ರೀಮಾತೆ :** ಅಹಾ!

**ಪ್ರಶ್ನೆ :** *ಆಗ ಈ ಶಕ್ತಿಗಳು ಭಗವಂತನಿಂದ ಬೇರೆಯಾದವು ಮತ್ತು ಮಿಥ್ಯೆಯವಾಗಿ ಬದಲಾದವು.*

**ಶ್ರೀಮಾತೆ :** ಹೌದು, ಅದು ಆ ರೀತಿಯ ಏನೋ ಒಂದಾಗಿದೆ!

ಪ್ರಕಾಶ ಇಲ್ಲವೆ ಪ್ರಜ್ಞೆ, ಆನಂದ ಇಲ್ಲವೆ ಪ್ರೇಮ, ಜೀವನ ಮತ್ತು ಸತ್ಯ.

ನಂತರ ದೈವೀ ಪ್ರಕಾಶ ಇಲ್ಲವೆ ದೈವೀ ಪ್ರಜ್ಞೆ ಅಂಧಕಾರವಾಯಿತು, ಮತ್ತು ಅಪ್ರಜ್ಞೆಯಾಯಿತು, ದೈವೀ ಪ್ರೇಮ ಮತ್ತು ದೈವೀ ಆನಂದ ಇವು ದ್ವೇಷ ಮತ್ತು ವೇದನೆಗಳಾದವು, ಸತ್ಯ ಮಿಥ್ಯೆಯಾಯಿತು, ಜೀವನ ಮೃತ್ಯುವಾಯಿತು. ಸರಿ, ಮೊದಲಿನವೆರಡು, ಆದರೆ ನಿಖರವಾಗಿ ಅದೇ ಸ್ಥಿತಿಗಳಲ್ಲಲ್ಲ. ಮೊದಲನೆಯದು ಪರಿವರ್ತನೆ ಹೊಂದಿತು ಮತ್ತು ಕಾರ್ಯಕೈಕೊಳ್ಳುತ್ತಿದೆ, ಆದರೆ ಅದು ಮಾನವ ದೇಹ ಧರಿಸಲು ನಿರಾಕರಿಸುತ್ತಿದೆ, ಅದು ತನ್ನ ಕಾರ್ಯದಲ್ಲಿ ಸೀಮಿತತೆ ಉಂಟುಮಾಡುತ್ತದೆಂದು ಹೇಳುತ್ತದೆ; ಬಹುಶಃ ಒಂದು ದಿನ ಅದು ದೇಹಧಾರಣ ಮಾಡಬಹುದು, ಆದರೆ ಸದ್ಯ ಅದು ನಿರಾಕರಿಸುತ್ತಿದೆ. ಎರಡನೆಯದು ಪರಿವರ್ತನೆಗೆ ಒಳಗಾಗದೆ ಮತ್ತು ಅದರದೇ ಸಂಕಲ್ಪದ ಪ್ರಕಾರ ಅದನ್ನು ಕರಗಿಸಲಾಗಿದೆ. ಅದು ತನ್ನ ಮೂಲದಲ್ಲಿ ಕರಗಿ ಹೋಗಿದೆ ಮತ್ತು ಕೊನೆಯವೆರಡು ಸರಿಯಾಗಿ ನಿರಾಕರಿಸುತ್ತಿವೆ.

ಮೃತ್ಯುವಿಗೆ ಸೇರಿದ ಒಬ್ಬ ಅವತಾರ ಮಾಡಲು ಪ್ರಯತ್ನಿಸಿದ. ಆದರೆ ಅವನನ್ನು ಪರಿವರ್ತಿಸಲಾಗಲಿಲ್ಲ. ಅವನು ಅವತಾರ ತಾಳಲು ಪ್ರಯತ್ನಿಸಿದ, ಅದು ಬಹಳ ಅಪರೂಪದ್ದಾದ ಏನೋ ಒಂದು, ಅದು ಭಾಗಶಃ ಅವತಾರವಾಗಿತ್ತು,

ಇಡಿಯಾದ ಅವತಾರವಾಗಿರಲಿಲ್ಲ. ಇಡಿಯಾದ ಅವತಾರ ಅವುಗಳಿಗೆ ಕಠಿಣವಾದದ್ದು. ಮಾನವ ದೇಹಗಳು ಹಾಗೂ ಪ್ರಜ್ಞೆಗಳು ಅತ್ಯಂತ ಕಿರಿದಾಗಿರುತ್ತವೆ.

ಇನ್ನೊಂದನ್ನು ಕುರಿತು ಹೇಳುವುದಾದರೆ ಅವನ ಹಲವಾರು ಉದ್ಭವ (emanation) ಗಳಿವೆ, ಅವು ಕೆಲವು ಮಾನವ ದೇಹಗಳಲ್ಲಿ ಬಹಳ ಕ್ರಿಯಾಶೀಲ–ವಾಗಿವೆ ಮತ್ತು ಪೃಥ್ವಿಯ ಇತ್ತೀಚಿನ ಇತಿಹಾಸದಲ್ಲಿ ದೊಡ್ಡ ಪಾತ್ರ ವಹಿಸಿವೆ!

**ಪ್ರಶ್ನೆ :** *ಅಸುರರು ತಮ್ಮ ತಮ್ಮಲ್ಲಿ ಜಗಳಾಡುವುದಿಲ್ಲವೆ?*

**ಶ್ರೀಮಾತೆ :** ಓಹ್ ಹೌದು! ಆಸುರೀ ಪ್ರಭಾವದಡಿಯಲ್ಲಿರುವ ಜನರ ಹಾಗೆ ಜಗಳಾಡುತ್ತಾರೆ. ಅವರು ತಮ್ಮೊಳಗೆ ಅತ್ಯಂತ ಕೆಟ್ಟ ವೈರಿಗಳಾಗಿರುತ್ತಾರೆ. ಅದೊಂದು ನೆಮ್ಮದಿ ನೀಡುವ ವಿಷಯವೆಂದು ನಾವು ಹೇಳಲೇಬೇಕು, ಏಕೆಂದರೆ ಅವರು ತಮ್ಮಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದರೆ ವಿಷಯಗಳು ಇನ್ನೂ ಹೆಚ್ಚು ಕಠಿಣವಾಗುತ್ತಿದ್ದವು. ಬಹುಶಃ ಅದು ಇರುವುದು ಹಾಗೆ, ಏಕೆಂದರೆ ಸಮತೋಲನದ ನಿಯಮ ಜಗತ್ತಿನ ಮೇಲೆ ಆಳಿಕೆ ನಡೆಸುತ್ತಿದೆ. ಅದು ಅವರ ಪ್ರಭಾವದ ಬಲವನ್ನು ಕಡಿಮೆ ಮಾಡುವುದಕ್ಕಿದೆ. ಆದಾಗ್ಯೂ . . . ಮಿಥ್ಯೆಯ ಪ್ರಭುವಿನಲ್ಲಿ ಪ್ರಭಾವದ ಹೆಚ್ಚಿನ ಭಾಗವಿದೆ. ಇದು ಸಾಸಂರ್ಗಿಕ ರೋಗಗಳ ಹಾಗೆ ಅವುಗಳಷ್ಟೇ ಬಲದಿಂದ ಸಂಸರ್ಗವಾದಾಗ ನಿಮ್ಮನ್ನು ಹಿಡಿದುಕೊಳ್ಳುತ್ತದೆ. ಅದಕ್ಕೆ ಇನ್ನೂ ಹೆಚ್ಚಿನ ಬಲವಿದೆ.

**ಪ್ರಶ್ನೆ :** *ಮಧುರ ಮಾತೆಯವರೆ, ಮಿಥ್ಯೆ ಅವತಾರ ತಾಳಲು ಪ್ರಯತ್ನಿಸಲಿಲ್ಲವೆ?*

**ಶ್ರೀಮಾತೆ :** ತನ್ನಿಂದ ಉದ್ಭವವಾದವುಗಳನ್ನು ಅವನು ಪೃಥ್ವಿಯ ಮೇಲೆ ಕಳಿಸಿದ, ಆದರೆ ಅದರ ಉದ್ದೇಶ ಪರಿವರ್ತನೆಗೆ ಒಳಗಾಗುವುದಾಗಿರಲಿಲ್ಲ. ಏನೇ ಆಗಲಿ ಅದರಲ್ಲಿ ಅವನು ಯಶಸ್ವಿಯಾಗಲಿಲ್ಲ.

**ಪ್ರಶ್ನೆ :** *ವಿರೋಧೀ ಶಕ್ತಿಗಳಿಗೆ ಮನುಷ್ಯ ಏಕೆ ಆಕರ್ಷಣೆಯ ಕೇಂದ್ರವಾಗಿದ್ದಾನೆ! ಅವನು ಎಷ್ಟೊಂದು ಸೀಮಿತತೆಗೆ ಒಳಗಾದವನಾಗಿದ್ದಾನೆ.*

**ಶ್ರೀಮಾತೆ :** ಹೌದು, ಹಾಗೆಯೇ ಅವು ಸಾಮಾನ್ಯವಾಗಿ ಒಬ್ಬ ಮನುಷ್ಯನ ಮೇಲೆ ಕಾರ್ಯಕೈಕೊಳ್ಳುವುದಿಲ್ಲ. ಅವು ಪೃಥ್ವಿಯ ವಾತಾವರಣದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತವೆ, ತಿಳಿಯಿತೆ? ಮತ್ತು ಮನುಷ್ಯರ ಮೇಲೆ ಹಿಡಿತ

ಸಾಧಿಸದೆ ಪೃಥ್ವಿಯ ವಾತಾವರಣದ ಮೇಲೆ ಹಿಡಿತ ಸಾಧಿಸಲಾಗುವುದಿಲ್ಲ, ಏಕೆಂದರೆ ಮನುಷ್ಯನಲ್ಲಿ ಅತ್ಯುಚ್ಚ ಪಾರ್ಥಿವ ಶಕ್ತಿ ಪ್ರಕಟವಾಗುತ್ತದೆ. ಪರಿವರ್ತನೆ–ಗಾಗಿ ಮಾನವ ದೇಹವನ್ನು ಧರಿಸುವುದನ್ನು ಕುರಿತು ಹೇಳುವುದಾದರೆ, ಅದಕ್ಕೆ ಉತ್ತರ, ನಿಜವಾಗಿ, ಬಹಳ ಸರಳವಾಗಿರುತ್ತದೆ. ಅದು ಏಕೆಂದರೆ ಮನುಷ್ಯನಲ್ಲಿ ಚೈತ್ಯ ಸತ್ತೆಯಿದೆ. ಚೈತ್ಯ ಸತ್ತೆಯ ಪ್ರಭಾವವನ್ನು ಶಾಶ್ವತವಾಗಿ ವಿರೋಧಿಸುವ ಆಸುರನಿರುವುದಿಲ್ಲ, ಅದಕ್ಕೆ ಶರಣಾಗುವುದನ್ನು ಹಾಗೂ ನಿಕಟವಾದ ಬಂಧನಕ್ಕೆ ಒಳಗಾಗುವುದನ್ನು ಎಂತಹ ಪ್ರಯತ್ನದಿಂದಾಗಲಿ ತಡೆಯಲಾಗುವುದಿಲ್ಲ. ಅದೇ ನಿಖರವಾಗಿ ಅವುಗಳ ಅಸ್ತಿತ್ವದಲ್ಲಿರುವ ವೈರುಧ್ಯವಾಗಿದೆ.

**CWM, 6/173** **– ಶ್ರೀಮಾತೆ**

*

ಗತಕಾಲದಿಂದ ಪೂರ್ವಭಾವಿಯಾಗಿ ನೋಡಲಾದ ಆ ದಿನ ಕೊನೆಗೆ ಬರಲಿಹುದು
ಪ್ಯಾಟ್ಮೊಸ್ (Patmos) ನಲ್ಲಿ ಜಾನ್ (John) ಕಂಡಿದ್ದ, ಶೆಲಿ ಕನಸಿನಲಿ ಕಂಡಿದ್ದ
ದಿವ್ಯಾನಂದದ ನಗರವನು, ಸುವರ್ಣ ಯುಗವನು
ದರ್ಶನ ಹಾಗೂ ವ್ಯರ್ಥ ಕಲ್ಪನೆಗಳು ನಂಬಿಹವು.

**CWSA, 2/244** **– ಶ್ರೀ ಅರವಿಂದರು**

*

## ಧ್ರುವೀಕರಣಗೊಂಡ ಜಗತ್ತಿನ ಕೊನೆ

**ಪ್ರಶ್ನೆ :** *ಶ್ರೀಮಾತೆಯವರೆ, ಸದ್ಯದ ಜಗತ್ತಿನಲ್ಲಿ ಅಮೇರಿಕಾ ಮತ್ತು ರಸಿಯಾ ಎಂಬ ಎರಡು ಭವ್ಯ ಪಾಳೆಯಗಳಲ್ಲಿ ರಾಜಕೀಯ ವಿಭಜನೆಗೊಂಡಿದೆ. ಅವುಗಳಲ್ಲಿ ರಾಜೀಮಾಡಿಕೊಳ್ಳುವಿಕೆ ಎಂದು ಬರುವುದು?*

**ಶ್ರೀಮಾತೆ :** ಓಹ್! ಅದು ಬಹಳ ಸುಲಭವಾದದ್ದು. ಸರಳವಾಗಿ ಅದು ಸುಲಭ–ವಾದದ್ದೆಂದು ಅವರು ತಿಳಿದುಕೊಳ್ಳದೇ ಇರುವ ಕಾರಣದಿಂದಾಗಿ ನಾನು ಹೇಳುತ್ತಿರುವುದು ಏನೆಂದರೆ ಅದು ಕೊನೆಗೆ ಸಂಭವಿಸುವ ವಿಷಯವಾಗಿದೆ. ಈ

ವಿಷಯಗಳು ಕೇವಲ ತೋರಿಕೆಗಳು ಮತ್ತು ಮೇಲ್ಮೈಯಲ್ಲಿರುವ ವಿಚಾರಗಳು ಹಾಗೂ ಆಸಕ್ತಿಗಳು – ಆಸಕ್ತಿಗಳು! ನಿಜವಾದ ಆಸಕ್ತಿಗಳೂ ಕೂಡ ಅಲ್ಲ. ತಮ್ಮ ಆಸಕ್ತಿಗಳ ಬಗ್ಗೆ ಇರುವ ವಿಚಾರಗಳು. ನಿಜವಾದ ಆರ್ಥಿಕ ಪರಿಹಾರವನ್ನು ಅನ್ವಯಿಸಿದರೆ, ಅವರ ಸಮಸ್ಯೆಗಳ ಆಧಾರವೇ ಕುಸಿದು ಬೀಳುವುದು, ಅಲ್ಲಿ ಕೇವಲ ರಾಜಕೀಯ ಧೋರಣೆ ಉಳಿದುಕೊಳ್ಳುವುದು, ಅದು ಅತ್ಯಂತ ಮೇಲ್ಮೈಯಲ್ಲಿರು–ವಂತಹದು. ಅದು ಬಹಳ ಪೊಳ್ಳಾದದ್ದು, ಅದಕ್ಕೆ ಆಳವಿಲ್ಲ, ಎಲ್ಲದಕ್ಕಿಂತಲೂ ಹೆಚ್ಚಾಗಿ ಕೇವಲ ಶಬ್ದಗಳಿಂದ ಕೂಡಿಕೊಂಡಂತಹದು, ಬಹಳ ಪೊಳ್ಳಾದ ಶಬ್ದಗಳು, ಅದು ಬಹಳ ಜೋರಾಗಿ ಕೇಳಿಸುತ್ತದೆ ಏಕೆಂದರೆ ಅದು ಪೊಳ್ಳಾಗಿದೆ, ಅವು ದೊಡ್ಡ ಶಬ್ದಗಳು. ಅವರ ಧೋರಣೆಯ ಕೇವಲ ಸೊಗಸಾದ ಹಾಗೂ ನಿಜವಾದ ಆಧಾರ, ನಾನು ಹೇಳಿದ ಹಾಗೆ, ಎರಡು ವಿಷಯಗಳಲ್ಲಿ ಉಳಿದುಕೊಂಡಿದೆ: ಆಯವ್ಯಯದ ಆಧಾರ, ಆರ್ಥಿಕ ಆಧಾರ, ಸರಿ, ಆರ್ಥಿಕ ಸಮಸ್ಯೆಯನ್ನು ಪರಿಹರಿಸಿದರೆ ಎಂದರೆ ಪರಿಹಾರವನ್ನು ಅನ್ವಯಿಸಿದರೆ ಈ ರಾಜಕೀಯ ಭಿನ್ನತೆಗಳಿಗಿರುವ ಆಧಾರದ ದೊಡ್ಡ ಭಾಗ ಮಾಯವಾಗುವುದು. ಜೀವನದ ಸಮಸ್ಯೆಗಳು ಮತ್ತು ಈ ಸಮಸ್ಯೆಗಳಿಗೆ ಪರಿಹಾರ ಇವುಗಳತ್ತ ನೋಡುವ ವಿರುದ್ಧ ರೀತಿಯ ಮೇಲೆ ಅದು ಬಹುಮಟ್ಟಿಗೆ ಪ್ರತ್ಯೇಕವಾಗಿ ಆಧಾರ ಪಡೆದಿದೆ: ಇದು ಹೀಗಿದೆ ಎಂದು ಇವರು ಯೋಚಿಸುತ್ತಾರೆ ಇನ್ನಿತರರು ಅದು ಹಾಗಿದೆ ಎಂದು ಯೋಚಿಸುತ್ತಾರೆ. ನಾನು ಬಹಳ ನಿಷ್ಕಪಟರಾದವರನ್ನು ಕುರಿತು ಮಾತನಾಡುತ್ತಿದ್ದೇನೆ, ಬಹಳಷ್ಟು ಗದ್ದಲ ಮಾಡಿ ಬಹಳಷ್ಟು ಪ್ರಭಾವ ಪಡೆಯುವು–ದಕ್ಕಾಗಿ ಹೆಚ್ಚಿನ ಸದ್ದು ಮಾಡುವ, ನಾನು ನಿಖರವಾಗಿ ಹೇಳಿದಂತೆ, ಏನೂ ಇಲ್ಲದಿದ್ದುದರಿಂದ ವಿಷಯಗಳನ್ನು ರಚಿಸುವ ಜನರನ್ನು ಕುರಿತಲ್ಲ. ನಾವು ಪ್ರಶ್ನೆಯ ತಿರುಳಿನತ್ತ ಹೋದರೆ ಅಲ್ಲಿ ಅಷ್ಟೊಂದು ವ್ಯತ್ಯಾಸವಿಲ್ಲ.

ಬಹಳಷ್ಟು ಜನರಿರುತ್ತಾರೆ – ನಾನು ಜನರನ್ನು ಕುರಿತು ಹೇಳುತ್ತಿದ್ದೇನೆ– ವ್ಯಕ್ತಿಗಳನ್ನು ಕುರಿತಲ್ಲ, ಸರಕಾರಗಳನ್ನು ಕುರಿತು ಹೇಳುತ್ತಿದ್ದೇನೆ– ಅವರು ಸಮಾಜವಾದಿ (communist) ಗಳಲ್ಲ ಎಂಬ ನಟನೆ ಮಾಡುತ್ತಾರೆ, ಆದರೆ ಅವರು ಕೈಕೊಳ್ಳುವ ಕ್ರಿಯೆಯ ರೀತಿ ಪರಿಪೂರ್ಣವಾಗಿ ಸಮಾಜವಾದಿಗಳದ್ದಾಗಿರುತ್ತದೆ, ಸಮಾಜವಾದಿಗಳ ರೀತಿಗಿಂತ ಹೆಚ್ಚು ಉಗ್ರವಾಗಿರುತ್ತದೆ.

**CWM, 7/300–01** **– ಶ್ರೀಮಾತೆ**

*

**ಪ್ರಶ್ನೆ :** *ಮಧುರ ಮಾತೆಯವರೆ, ನೀವು ಹೇಳಿದ್ದೀರಿ: "ಅತಿಮಾನಸ ಪೃಥ್ವಿಯ ಮೇಲೆ ಅವರೋಹಣ ಮಾಡಿದೆ" ಎಂದು. ಅದರ ನಿಖರವಾದ ಅರ್ಥ ಏನು? "ವಚನ ನೀಡಿದ್ದ ವಿಷಯಗಳು ನೆರವೇರಿಕೆ ಕಂಡುಕೊಂಡಿವೆ ಎಂದೂ ಹೇಳಿದ್ದೀರಿ. ಈ ವಿಷಯಗಳು ಯಾವವು?*

**ಶ್ರೀಮಾತೆ :** ಅಹಾ, ಅದು ನಿಜವಾಗಿ ಅಜ್ಞಾನ! ಇದನ್ನು ಕುರಿತು ಬಹಳ ಕಾಲದ ಹಿಂದೆ ವಚನ ನೀಡಲಾಗಿತ್ತು, ಇದನ್ನು ಬಹಳ ದೀರ್ಘಕಾಲದ ಹಿಂದೆ ಹೇಳಲಾಗಿತ್ತು– ಕೇವಲ ಇಲ್ಲಿ ಅಲ್ಲ, ಪೃಥ್ವಿ ಪ್ರಾರಂಭವಾದಂದಿನಿಂದ ಹೇಳಲಾಗಿತ್ತು. ಎಲ್ಲ ಬಗೆಯ ಪ್ರವಾದಿಗಳು ಎಲ್ಲ ಬಗೆಯ ಭವಿಷ್ಯವಾಣಿಗಳನ್ನು ನುಡಿದಿದ್ದಾರೆ "ಅಲ್ಲಿ ಹೊಸ ಸ್ವರ್ಗ, ಹೊಸ ಪೃಥ್ವಿ, ಹೊಸ ಕುಲ ಜನ್ಮ ತಾಳುತ್ತವೆ, ಜಗತ್ತು ಪರಿವರ್ತನೆಗೊಳಗಾಗುತ್ತದೆ." ಎಲ್ಲ ಸಂಪ್ರದಾಯಗಳಲ್ಲಿ ಪ್ರವಾದಿಗಳು ಇದನ್ನು ಕುರಿತು ಹೇಳಿದ್ದಾರೆ.

**ಪ್ರಶ್ನೆ :** *"ಅವು ನೆರವೇರಿಕೆ ಕಂಡುಕೊಂಡಿವೆ" ಎಂದು ನೀವು ಹೇಳಿರುವಿರಿ.*

**ಶ್ರೀಮಾತೆ :** ಹೌದು, ಮತ್ತೆ?

**ಪ್ರಶ್ನೆ :** *ಹೊಸ ಕುಲ ಎಲ್ಲಿದೆ?*

**ಶ್ರೀಮಾತೆ :** ಹೊಸ ಕುಲವೆ? ಕೆಲವೊಂದು ಸಾವಿರ ವರ್ಷಗಳ ಕಾಲ ಕಾದುಕೊಂ–ಡಿರಬೇಕು, ಮತ್ತು ನೀವು ಅದನ್ನು ನೋಡುವಿರಿ!

ಮನಸ್ಸು ಪೃಥ್ವಿ ವಾತಾವರಣದಲ್ಲಿ ಪ್ರಕಟವಾದ ಕಾಲ ಹಾಗೂ ಪೃಥ್ವಿಯ ಮೇಲೆ ಮಾನವ ಕಾಣಿಸಿಕೊಂಡ ಕಾಲ ಇವುಗಳ ನಡುವೆ ಲಕ್ಷಾಂತರ ವರ್ಷಗಳು ಕಳೆದುಹೋಗಿವೆ. ಈಗ ಹೊಸಕುಲ ಬರುವ ವಿಷಯ ಶೀಘ್ರಗತಿಯಿಂದ ಸಾಗಿ ಹೋಗುವುದು, ಏಕೆಂದರೆ ಮನುಷ್ಯ ಅದರ ನಿರೀಕ್ಷೆಯಲ್ಲಿದ್ದಾನೆ, ಅವನಿಗೆ ಅದರ ಬಗ್ಗೆ ಅಸ್ಪಷ್ಟ ವಿಚಾರವಿದೆ. ಒಂದರ್ಥದಲ್ಲಿ ಮನುಷ್ಯ ಅತಿಮಾನವನ ಅಗಮನವನ್ನು ನಿರೀಕ್ಷಿಸುತ್ತಿದ್ದಾನೆ, ಅದು ಹಾಗಿರುವಾಗ ಬಾಲವಿಲ್ಲದ ಕಪಿಗಳು ಮನುಷ್ಯ

ಜನ್ಮತಾಳುವುದನ್ನು ನಿರೀಕ್ಷಿಸಿರಲಿಲ್ಲ, ಅದನ್ನು ಕುರಿತು ಎಂದಿಗೂ ಯೋಚಿಸಿ–ರಲಿಲ್ಲ.* – ಅದಕ್ಕಿರುವ ಒಳ್ಳೆಯ ಕಾರಣವೆಂದರೆ ಬಹುಶಃ ಅವು ಬಹಳಷ್ಟು ಯೋಚಿಸಲು ಸಮರ್ಥವಾಗಿಲ್ಲ. ಆದರೆ ಮನುಷ್ಯ ಅದನ್ನು ಕುರಿತು ಯೋಚಿಸಿದ್ದಾನೆ, ಹಾಗಾಗಿ ಅದು ಹೆಚ್ಚು ತೀವ್ರಗತಿಯಿಂದ ಆಗುವುದು. ಆದರೆ ತೀವ್ರಗತಿಯಿಂದ ಎಂದರೆ ಕೆಲವು ಸಾವಿರ ವರ್ಷಗಳು ಬೇಕಾಗಬಹುದು. ಅದನ್ನು ಕುರಿತು ನಾವು ಮತ್ತೆ ಕೆಲವು ಸಾವಿರ ವರ್ಷಗಳು ಕಳೆದ ನಂತರ ಮಾತನಾಡುತ್ತೇವೆ!

(ಮೌನ)

ಆದರೆ ಆಂತರಿಕವಾಗಿ ತಯಾರು ಮಾಡಿಕೊಂಡ ಜನರು, ಉಚ್ಚತರ ಶಕ್ತಿಗಳೊಡನೆ ಸಂಪರ್ಕದಲ್ಲಿದ್ದವರು, ಹೆಚ್ಚು ಕಡಿಮೆ ಅತಿಮಾನಸದೊಂದಿಗೆ ನೇರವಾದ ವೈಯಕ್ತಿಕ ಸಂಪರ್ಕದಲ್ಲಿರುವವರು ಪೃಥ್ವಿಯ ವಾತಾವರಣದಲ್ಲಾದ ಬದಲಾವಣೆಯ ಬಗ್ಗೆ ಭಾವನೆ ತಂದುಕೊಳ್ಳಬಲ್ಲರು.

ಆದರೆ ಅದಕ್ಕೆ . . . ಯೋಗ್ಯರಾದ ಜನರು ಯೋಗ್ಯರಾದವರನ್ನು ಅರ್ಥಮಾಡಿಕೊಳ್ಳಬಲ್ಲರು. ಕೇವಲ ವ್ಯಕ್ತಿಯಲ್ಲಿರುವ ಅತಿಮಾನಸ ಪ್ರಜ್ಞೆ ಅತಿಮನಸ್ಸು ಪೃಥ್ವಿವಾತಾವರಣದಲ್ಲಿ ಕಾರ್ಯಮಾಡುತ್ತಿರುವುದನ್ನು ಗ್ರಹಿಸಬಲ್ಲದು. ಒಂದಿಲ್ಲೊಂದು ಕಾರಣದಿಂದ ಈ ಗ್ರಹಿಕೆಯನ್ನು ಅಭಿವೃದ್ಧಿಪಡಿಸಿಕೊಂಡು ಬಂದವರು ಅದನ್ನು ನೋಡಬಲ್ಲರು. ಆಂತರಿಕ ಸತ್ತೆಯ ಬಗ್ಗೆ ಕಿಂಚಿತ್ತೂ ಅರಿವು ಪಡೆಯದೆ ಇದ್ದವರು– ಸ್ವಲ್ಪ ಆಂತರಿಕವಾಗಿ – ಆತ್ಮ ಹೇಗಿದೆ ಎಂದು ಹೇಳಲು

---

* ಶ್ರೀಮಾತೆಯವರು ಫೆ.29ರ ಅತಿಮಾನಸದ ಪ್ರಕಟಣೆಯನ್ನು ಎರಡು ಸಂದೇಶಗಳಲ್ಲಿ ಘೋಷಿಸಿದ್ದಾರೆ, ಈ ಎರಡು ಸಂದೇಶಗಳು 1956ರ ಬುಲೆಟಿನ್‌ದಲ್ಲಿ ಪ್ರಕಟವಾಗಿವೆ.

"ಪ್ರಭು ನೀನು ಸಂಕಲ್ಪ ಮಾಡಿರುವಿ, ನಾನು ಕಾರ್ಯ ನಿರ್ವಹಿಸುವೆ
ಹೊಸ ಬೆಳಕೊಂದು ಪೃಥ್ವಿಯ ಮೇಲೆ ಹರಿದು ಬಂದಿದೆ
ಹೊಸ ಜಗತ್ತೊಂದು ಜನ್ಮ ತಾಳಿದೆ
ಭರವಸೆ ನೀಡಿದ್ದ ಸಂಗತಿಗಳೆಲ್ಲ ನೆರವೇರಿಕೆ ಕಂಡುಕೊಂಡಿವೆ."

"ಪೃಥ್ವಿಯ ಮೇಲೆ ಅತಿಮಾನಸದ ಪ್ರಕಟನೆ ಇನ್ನು ಮುಂದೆ ಭರವಸೆಯಾಗಿ ಉಳಿದು–ಕೊಂಡಿರುವುದಿಲ್ಲ ಆದರೆ ಜೀವಂತವಿರುವ ವಾಸ್ತವತೆ, ಒಂದು ನೈಜತೆ."

"ಅದು ಇಲ್ಲಿ ಕಾರ್ಯನಿರತವಾಗಿದೆ, ಮತ್ತು ಒಂದು ದಿನ ಬರಲಿದೆ, ಆಗ ಅತ್ಯಂತ ಕುರುಡಾದವನು, ಅತ್ಯಂತ ಅಪ್ರಜ್ಞೆಯಲ್ಲಿರುವವನು ಅದನ್ನು ಗುರುತಿಸುವ ನಿರ್ಬಂಧಕ್ಕೊಳ–ಗಾಗುತ್ತಾನೆ."

ಅಶಕ್ತರಾದವರು ಪೃಥ್ವಿಯ ವಾತಾವರಣದಲ್ಲಾದ ವ್ಯತ್ಯಾಸವನ್ನು ಗುರುತಿಸಲು ತಯಾರಾಗಿರುವುದಿಲ್ಲ. ಅವರಿನ್ನೂ, ಅದಕ್ಕಾಗಿ ದೀರ್ಘ ದಾರಿಯನ್ನು ದಾಟಿ ಹೋಗಬೇಕಾಗಿರುತ್ತದೆ. ಹೆಚ್ಚು ಕಡಿಮೆ ಬಾಹ್ಯ ಸತ್ತೆಯಲ್ಲಿ ಎಂದರೆ ಮಾನಸಿಕ, ಪ್ರಾಣಿಕ ಹಾಗೂ ಭೌತಿಕದಲ್ಲಿ ಪ್ರತ್ಯೇಕವಾಗಿ ಕೇಂದ್ರೀಕೃತವಾಗಿರುವ ಪ್ರಜ್ಞೆಯುಳ್ಳ ಜನರಿಗೆ ವಿಷಯಗಳು ಅಸಂಗತ, ಅನಿರೀಕ್ಷಿತ ತೋರಿಕೆಗಳನ್ನು ಪಡೆಯಬೇಕು. ಆಗ ಅವರು ಅವುಗಳನ್ನು ಪವಾಡಗಳೆಂದು ಕರೆಯುತ್ತಾರೆ.

ಪರಿಸ್ಥಿತಿಗಳನ್ನು ಹಾಗೂ ಗುಣಲಕ್ಷಣಗಳನ್ನು ಬದಲಾಯಿಸುವ ಸತತವಿರುವ ಪವಾಡದ ಮಧ್ಯಸ್ಥಿಕೆಯ ಮೂಲಕ ವಿಸ್ತಾರವಾಗಿ ಪರಿಣಾಮವನ್ನುಂಟು ಮಾಡುವುದನ್ನು ಪವಾಡವೆಂದು ಕರೆಯುವುದಿಲ್ಲ, ಏಕೆಂದರೆ ಕೇವಲ ತೋರಿಕೆಯನ್ನು ನೋಡಲಾಗುತ್ತದೆ ಮತ್ತು ಇದು ಸ್ವಾಭಾವಿಕ ಎಂದು ತೋರಿಬರುತ್ತದೆ. ನಿಜ ಹೇಳುವುದಾದರೆ ಸಂಭವಿಸುವ ಕನಿಷ್ಠಪ್ರಮಾಣದ ವಿಷಯವನ್ನು ಕುರಿತು ನೀವು ಚಿಂತನೆ ಮಾಡಿದಾಗ ಅದು ಪವಾಡ ಸದೃಶ–ವಾದದ್ದೆಂದು ಹೇಳುವ ನಿರ್ಬಂಧಕ್ಕೊಳಗಾಗುತ್ತೀರಿ.

ನೀವು ಅದನ್ನು ಕುರಿತು ಚಿಂತನೆ ಮಾಡುವುದಿಲ್ಲ ಎಂಬ ಸರಳಕಾರಣದಿಂದ ವಿಷಯಗಳನ್ನು ಅವಿದ್ದ ಹಾಗೆ ತೆಗೆದುಕೊಳ್ಳುತ್ತೀರಿ, ಪ್ರಶ್ನಿಸುವುದಿಲ್ಲ; ಹಾಗಿಲ್ಲದಿದ್ದರೆ ಪ್ರತಿಯೊಂದು ದಿನ ನಿಮಗೆ ನೀವೇ: “ನಿಜವಾಗಿ ಇದು ಬಹಳ ಆಶ್ಚರ್ಯಕರ–ವಾದದ್ದು! ಅದು ಹೇಗೆ ಸಂಭವಿಸಿತು!” ಎಂದು ಹೇಳಿಕೊಳ್ಳುವ ಸಾಕಷ್ಟು ಸಂದರ್ಭಗಳಿರುತ್ತವೆ.

ಅದು ವಸ್ತು–ವಿಷಯಗಳನ್ನು ಕೇವಲ ಮೇಲ್ಮೈದೃಷ್ಟಿಯಿಂದ ನೋಡುವುದನ್ನು ರೂಢಿಸಿಕೊಂಡದ್ದಾಗಿರುತ್ತದೆ.

**CWM, 8/126–28** **– ಶ್ರೀಮಾತೆ**

*

**ಜನವರಿ 28, 1964**

[ಕೆಳಗೆ ಕೊಡಲಾದ ಮಾತುಕತೆ ಶ್ರೀಮಾತೆಯವರು ಹಾಗೂ ಬಂಗಾಲಿ

ಅನುಯಾಯಿ (B.) ನಡುವೆ ನಡೆದದ್ದು, ಅದನ್ನು ಧ್ವನಿ ಮುದ್ರಣ ಮಾಡಿಕೊಂ–ಡಿರಲಿಲ್ಲ. ನೆನಪಿನಿಂದ ಇಂಗ್ಲಿಷ್ ಭಾಷೆಯಲ್ಲಿ ಟಿಪ್ಪಣಿ ಮಾಡಿಕೊಂಡದ್ದಾಗಿದೆ].

(B.) *ನಾನು ಕೊಲ್ಕತ್ತಾಕ್ಕೆ ಹೋಗುವವನಿದ್ದೇನೆ. ಸದ್ಯದ ಪರಿಸ್ಥಿತಿ ಕುರಿತು ಅಲ್ಲಿಯ ಜನರು ನನಗೆ ಒಂದು ಪ್ರಶ್ನೆ ಕೇಳುತ್ತಾರೆ – ಜಾತೀಯ ಗಲಭೆಗಳಿವೆ, ಅದಕ್ಕೆ ಪರಿಹಾರ ಏನು?*

**ಶ್ರೀಮಾತೆ :** ಸಹಜವಾಗಿ ಪರಿಹಾರ ಪ್ರಜ್ಞೆಯ ಬದಲಾವಣೆಯಲ್ಲಿದೆ. ಆ ಇತರರು (ಪಾಕಿಸ್ತಾನದಲ್ಲಿ) ಕೆಟ್ಟ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎಂಬುದು ನನಗೆ ತಿಳಿದಿದೆ, ಅವರ ನಡತೆ ಪಶುಗಳದಂತಿದೆ– ಪಶುಗಳು ಕೂಡ ಮಾನವ ಸತ್ತೆಗಳಿಗಿಂತ ಒಳ್ಳೆಯವಾಗಿರುತ್ತವೆ– ಆದರೆ ಇಲ್ಲಿಯ ಜನರೂ ಕೂಡ ಅವರಂತೆ ನಡೆದು–ಕೊಂಡರೆ ಅವರು ಶಕ್ತಿಗಳ ಕೈಗಳಲ್ಲಿ ಆಟವಾಡುವಂತಾಗುತ್ತದೆ, ಆ ಶಕ್ತಿಗಳು ಜನರು ಅನಿಷ್ಟವಾದದ್ದನ್ನು ಕೈಕೊಳ್ಳುವಂತೆ ಮಾಡುತ್ತವೆ ಮತ್ತು ಇಂತಹ ಶಕ್ತಿಗಳ ಹಿಡಿತವನ್ನು ಬಲಪಡಿಸುವಂತಾಗುತ್ತದೆ. ಈ ಬಗೆಯ ಪ್ರತೀಕಾರ ಅದಕ್ಕೆ ಉಪಾಯ ನೀಡುವುದಿಲ್ಲ.

(B.) *ಇಲ್ಲಿಯ ಜನರು ಹತಾಶೆಯ ಭಾವನೆ ತಂದುಕೊಳ್ಳುತ್ತಿದ್ದಾರೆ, ಅವರಿಗೆ ಉಪಾಯ ಕಂಡುಕೊಳ್ಳಲಾಗುತ್ತಿಲ್ಲ. ಯಾವ ಮಾರ್ಗದಲ್ಲಿ ಸಾಗಬೇಕು, ಯಾರತ್ತ ನೋಡಬೇಕು ಎಂಬುದು ಅವರಿಗೆ ತಿಳಿದಿಲ್ಲ, ಅವರು ತಪ್ಪು ನಿರ್ದೇಶನವನ್ನು ಅನುಸರಿಸಿ ತಪ್ಪು ದಾರಿಯಲ್ಲಿ ಸಾಗುತ್ತಿದ್ದಾರೆ. ದೇಶದ ವಿಭಜನೆ ಈ ತೊಂದರೆಗಳ ಹೆಚ್ಚಿನ ಭಾಗಕ್ಕೆ ಜವಾಬ್ದಾರಿಯಾಗಿದೆಯಲ್ಲವೆ?*

**ಶ್ರೀಮಾತೆ :** ಹೌದು ಧರ್ಮದ, ದೇಶದ ಹಾಗೂ ಆಸಕ್ತಿಯ ವಿಭಜನೆ ಇದೆ! ಜನರು ಸಹೋದರರಂತಿರುವ ಭಾವನೆ ತಂದುಕೊಂಡರೆ– ಜಗಳಾಡುವ ಸಹೋದರ–ರಂತಲ್ಲ, ಆದರೆ ತಮ್ಮ ಸಾಮಾನ್ಯ ಮೂಲದ ಬಗ್ಗೆ ಅರಿವುಳ್ಳವರು ಆಗಿರಬೇಕು.

(B.) *ಅಲ್ಲಿಗೆ ಯಾವಾಗ ಬರುವಿರಿ?*

**ಶ್ರೀಮಾತೆ :** ನಾನಲ್ಲಿ ಇಲ್ಲ ಎಂಬ ಭ್ರಮೆಯಡಿಯಲ್ಲಿ ಇರುವುದು ಬೇಡ. ನಾನಲ್ಲಿದ್ದೇನೆ, ಶಕ್ತಿ ಹಾಗೂ ಪ್ರಜ್ಞೆ ಅಲ್ಲಿವೆ. ಆದರೆ ಅಲ್ಲಿ ಗ್ರಹಿಕೆಯಿಲ್ಲ. ಚಾಯಿನಾ

ಜನರು ತೊಂದರೆ ಉಂಟು ಮಾಡಿದಾಗ ನಾನು ಮುಂಚೂಣಿಯಲ್ಲಿ, ಮೂರ್ತರೂಪದಲ್ಲಿ ಆ ಜಾಗಗಳಲ್ಲಿದ್ದೆ. ನನಗೆ ಖೇದವೆನಿಸುವ ಸಂಗತಿ ಎಂದರೆ ಭಾರತೀಯರಿಗಿಂತ ಚೀನೀಯರು ಹೆಚ್ಚಿನ ರೀತಿಯಲ್ಲಿ ಗ್ರಹಿಸಬಲ್ಲವರಾಗಿದ್ದರು ಎಂಬುದು, ಮುನ್ನುಗ್ಗಿ ಬರುವುದಕ್ಕೆ ಅವರ ಮೇಲಿನ ಒತ್ತಡ ಕಡಿಮೆಯಾಯಿತು. ಅದು ಗ್ರಹಿಸಿಕೊಳ್ಳುವಿಕೆ. ಅವರು ಹಿಂದೆಗೆದು ಏಕೆ ಹೋದರು ಎಂಬುದು ಯಾರಿಗೂ ತಿಳಿದಿರಲಿಲ್ಲ. ಭಾರತೀಯರ ವಲಯದಲ್ಲಿ ಕೆಲವರಿಗೆ ಅದರ ಸ್ಪರ್ಶವಾಗಿತ್ತು ಮತ್ತು ಅವರು ನನಗೆ ಭಯಾನಕ ಪರಿಸ್ಥಿತಿಗಳ ಬಗ್ಗೆ ಹೇಳಿದರು.

ಎರಡನೆಯ ಮಹಾಯುದ್ಧದ ನಂತರ ನಾನು ಕಾಳೀದೇವಿಯನ್ನು ಶಾಂತ–ವಾಗಿರಿಸುತ್ತಿದ್ದೇನೆ, ಆದರೆ ಅವಳು ಅವಿಶ್ರಾಂತ (restless) ಳಾಗಿದ್ದಾಳೆ! ಕಾಲಗತಿ–ಗಳು ವಿಷಮವಾಗಿವೆ, ಏನು ಬೇಕಾದರೂ ಸಂಭವಿಸಬಹುದು. ಜನರು ಕೇವಲ ತಮ್ಮ ಅಹಂಮನ್ಯತೆಯನ್ನು ಬಿಟ್ಟುಕೊಡಬಲ್ಲರಾದರೆ!

*(B.) ನಾನು ನಿಮ್ಮತ್ತ ಹೊರಳಿರಿ ಎಂಬ ಸರಳ ಮಾರ್ಗವನ್ನು ಸೂಚಿಸುತ್ತೇನೆ.*

**ಶ್ರೀಮಾತೆ :** ನಿನಗೆ ನಾನು ಹೇಳಿದ್ದನ್ನು ಅವರಿಗೆ ಹೇಳುವ ಕಾಲ ಸನ್ನಿಹಿತವಾಗಿದೆ. ಸಂದರ್ಭ ಒದಗಿದಾಗ ಇದನ್ನು ಕುರಿತು ನೀನು ಮಾತನಾಡಬಹುದು. ನಿನ್ನ ನಂಬಿಕೆಯನ್ನು ಕಾಪಾಡಿಕೊಂಡು ಯೋಧನ ಹಾಗೆ ಹೋಗು.

*

**ಪ್ರಶ್ನೆ :** *"ಇನ್ನೊಂದು ಯುದ್ಧವಾಗುವುದಾದರೆ ಅದು ಭಾರತದ ಮೇಲಾಗುತ್ತದೆ" ಎಂದು ಹೇಳಿದ್ದೀರಿ.*

**ಶ್ರೀಮಾತೆ :** ಹೌದು. ಅದು ಬಹಳ ದೀರ್ಘಕಾಲದ ಹಿಂದೆ ಹೇಳಿದ್ದಾಗಿದೆ.

ಆದರೆ ಪಾಕಿಸ್ತಾನ ಭಾರತದೊಂದಿಗೆ ವಿಭಜನೆ ಮಾಡಿಕೊಂಡ ನಂತರ ಶ್ರೀ ಅರವಿಂದರು ಬಹಳ ಬಲವತ್ತರವಾದ ರೀತಿಯಲ್ಲಿ ಬರೆದರು: ಒಂದಿಲ್ಲೊಂದು ರೀತಿಯಲ್ಲಿ ಈ ವಿಭಜನೆ ಹೊರಟುಹೋಗಬೇಕು. "ಸಾಧನ ಯಾವುದೇ ಆಗಿರಲಿ." ಎಂದು ಅವರು ಹೇಳಿದರು. ಮತ್ತು ಅವರು ನನಗೆ "ಅದನ್ನು ಕೈಕೊಳ್ಳಲು ಅವರಿಗೆ ಸಾಧ್ಯವಾಗದೇ ಹೋದರೆ ಅವರು ಹೋರಾಡುತ್ತ ಉಳಿದು–

ಕೊಳ್ಳುವರು” ಎಂದು ಹೇಳಿದ್ದರು.

**ಸಪ್ಟಂಬರ 16, 1965** **– ಶ್ರೀಮಾತೆ**

*

ರಸಿಯಾ ಮತ್ತು ಅಮೇರಿಕಾ ದೇಶಗಳ ನಡುವೆ ಪುನರ್ಮೈತ್ರಿ (rapprochment) ಕುರಿತು ನಾನು ಹಲವಾರು ವರ್ಷಗಳ ಕಾಲದಿಂದ ಕಾರ್ಯಕೈಕೊಳ್ಳುತ್ತ ಬಂದಿದ್ದೆ. ನಾನು ಯಶಸ್ವಿಯಾದೆ ಎಂದುಕೊಂಡಿದ್ದೆ, ಆ ಸಮಯದಲ್ಲಿ ಕೆನೆಡಿಯನ್ನು ಹತ್ಯೆಮಾಡಲಾಯಿತು ಮತ್ತು ಆ ಕಾಲದಲ್ಲಿ ಕ್ರುಶ್ಚೆವ್ ಅನುಕೂಲ ಮನೋಭಾವ ಹೊಂದಿದ್ದ– ಇಬ್ಬರೂ ಹೋಗಿಬಿಟ್ಟರು, ಒಬ್ಬರು ಹತ್ಯೆಗೀಡಾದರು, ಇನ್ನೊಬ್ಬರನ್ನು ವಜಾಮಾಡಿ ಮನೆಗೆ ಕಳುಹಿಸಲಾಯಿತು.

ಈಗ ನಾವು ನೋಡೋಣ. . . .

ಸೈನ್ಯದ ಕಾರ್ಯಾಚರಣೆ ಹೊರತಾಗಿ ಬೇರೆ ಯಾವ ಪರಿಹಾರ ಕಂಡುಬರುತ್ತಿಲ್ಲ. . . .

ಪಾಕಿಸ್ತಾನ ಮತ್ತೆ ಇಂಡಿಯಾದ ಭಾಗವಾಗುವುದರೊಂದಿಗೆ ಪರಿಹಾರ ದೊರಕಬಹುದು.

ಒತ್ತಾಯಕ್ಕೊಳಗಾಗದೆ ಅವರು ಇತ್ತ ಬರಬಹುದು.

**ಸಪ್ಟಂಬರ 25, 1965**

*

ಆದರೆ ಬಾಹ್ಯ ಪರಿಸ್ಥಿತಿಗಳು ಭಾರತವನ್ನು ಮತ್ತೆ ಏಕವಾಗುವಂತೆ ಒತ್ತಾಯ–ಕ್ಕೊಳಪಡಿಸದಿದ್ದರೆ ಅವುಗಳು ಅಲುಗಾಡುವುದಿಲ್ಲ.

ಆದರೆ ಅದನ್ನು ತಯಾರು ಮಾಡಲಾಗುತ್ತಿದೆ, ಅದು ಒಮ್ಮೆಗೆ ಛಿದ್ರಗೊಂಡು ಹೊರಬರಲಿದೆ.

**ನವ್ಹೆಂಬರ 10, 1965**

ಭಾರತ ಮತ್ತು ಪಾಕಿಸ್ತಾನ ಇವುಗಳ ನಡುವಿನ ಹೋರಾಟವನ್ನು ಸ್ಪಷ್ಟವಾಗಿ (ಅದನ್ನು ಹೇಗೆ ಹೇಳಲಿ, ನನಗೆ ಇಂಗ್ಲಿಷ್ ಭಾಷೆಯಲ್ಲಿ ಬಂದ ಶಬ್ದಗಳಲ್ಲಿ ಹೇಳುತ್ತಿದ್ದೇನೆ) ಪ್ರಾರಂಭಿಸಲಾಯಿತು ಮತ್ತು ಮುಂದುವರಿಸಿಕೊಂಡು ಹೋಗಲಾಯಿತು, ಎಂದರೆ ದೈವೀಸತ್ಯದ ಶಕ್ತಿಗಳ ಪ್ರಚೋದನೆಯಡಿಯಲ್ಲಿ ಚಾಲನೆಗೆ ಒಳಪಡಿಸಲಾಯಿತು, ಆ ಶಕ್ತಿಗಳು ಏಶಿಯಾದ ಭವ್ಯ ರಾಷ್ಟ್ರಗಳ ಮೈತ್ರಿಕೂಟ (Asian Federation) ವನ್ನು ಸೃಷ್ಟಿಸಲು ಬಯಸಿದ್ದವು, ಅವುಗಳ ಸಾಮರ್ಥ್ಯ ಕೆಂಪು ಚೀನಾ ರಾಷ್ಟ್ರಕ್ಕೆ ಹಾಗೂ ಅದರ ಚಲನೆಗೆ ಪ್ರತಿಭಾರ ಹಾಕಬೇಕಾಗಿತ್ತು. ವಾಸ್ತವದಲ್ಲಿ ಆ ಮೈತ್ರಿಕೂಟಕ್ಕೆ ಪಾಕಿಸ್ತಾನ ಮತ್ತು ನೇಪಾಳ, ತಿಬೇಟ, ಬರ್ಮಾ ಹಾಗೂ ದಕ್ಷಿಣದಲ್ಲಿದ್ದ ಸಿಲೋನ್ (ಲಂಕಾ) ಇವೆಲ್ಲವು ಮರಳಿ ಬರಬೇಕಾಗಿತ್ತು. ಅದೊಂದು ಭವ್ಯ ಮೈತ್ರಿಕೂಟ, ಅದರಲ್ಲಿ ಪ್ರತಿಯೊಂದು ದೇಶ ತನ್ನ ಸ್ವಯಮಾಧಿಕಾರದ ಅಭಿವೃದ್ಧಿಯೊಂದಿಗೆ, ಪರಿಪೂರ್ಣವಾಗಿ ಮುಕ್ತವಾ–ಗಿದ್ದುಕೊಂಡಿರುತ್ತದೆ, ಆದರೆ ಶಾಂತಿಗಾಗಿ ಇರುವ ಏಕೈಕ ಅಭೀಪ್ಸೆಯಲ್ಲಿ ಹಾಗೂ ವಿಭಜನೆ ಉಂಟುಮಾಡುವ ಶಕ್ತಿಗಳ ಆಕ್ರಮಣದ ವಿರುದ್ಧ ಹೋರಾಡುವುದರಲ್ಲಿ ಏಕತ್ರಗೊಂಡಿರುತ್ತದೆ. ಅದು ಬಹಳ ಸ್ಪಷ್ಟವಾಗಿತ್ತು, ಅದನ್ನು ಸಂಕಲ್ಪಿಸಲಾಗಿತ್ತು.

**ಸಪ್ಟಂಬರ 21, 1966**

*

ಸರಿ ಪಶ್ಚಿಮ ದೇಶಗಳಲ್ಲಿ ಹೋರಾಡುವುದನ್ನು ನಿಲ್ಲಿಸಿದ್ದಾರೆ. . . . ಅದರರ್ಥ ಅದು ಸಮಸ್ಯೆಯ ಕೊನೆ ಎಂಬ ಅರ್ಥ ನೀಡಲಾಗದು.

ಮತ್ತೆ ಅದು ಈ ಸಮಯಕ್ಕಾಗಿ ಅಲ್ಲ.

ಅದನ್ನು ಆ ರೀತಿ ಮಾಡಲಾಗದು. ಹೇಗೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ಅದನ್ನು ಯುದ್ಧವೊಂದರ ಮೂಲಕ ಮಾಡಲಾಗದು, ಪಾಕಿಸ್ತಾನದ ಭಾಗಗಳು ಪ್ರತ್ಯೇಕತೆಯನ್ನು ಒತ್ತಾಯದಿಂದ ಬೇಡುವವು. ಅಲ್ಲಿ ಐದು ಭಾಗಗಳಿವೆ ಅವು ಪ್ರತ್ಯೇಕಗೊಂಡು ಭಾರತವನ್ನು ಸೇರಿಕೊಳ್ಳುವವು – ಅವು ಒಂದು ಬಗೆಯ ಮೈತ್ರಿಕೂಟವನ್ನು ರೂಪಿಸುವವು. ಅದನ್ನು ಆ ರೀತಿಯಲ್ಲಿ ಕೈಕೊಳ್ಳಲಾಗುವುದು.

ಅದು ತನ್ನ ಅಂತರಂಗದಿಂದ ಛಿದ್ರಗೊಳ್ಳುವುದು, ಹೌದು, ನಾನದನ್ನು ನೋಡುತ್ತಿದ್ದೇನೆ. ಅದು ಸರಿಯಾದದ್ದು. ಅದನ್ನು ಆ ರೀತಿಯಲ್ಲಿ ಕೈಕೊಳ್ಳ–ಲಾಗುವುದು. ನಾನದನ್ನು ನೋಡಿದೆ, ಯಾವ ದಿನದಂದು (ಅದು ಇತ್ತೀಚೆಗೆ) ಎಂಬುದು ನನ್ನ ನೆನಪಿನಲ್ಲಿಲ್ಲ. ಒಮ್ಮಿಂದೊಮ್ಮೆಗೆ ಹಲವಾರು ಗಂಟೆಗಳ ಕಾಲ ದೈವೀ ಸಾಮರ್ಥ್ಯ ಹಾಗೂ ದೈವೀ ದರ್ಶನ ಇವುಗಳ ಸಂಪರ್ಕ ಬಂದಿತು – ಅದು ಮಹಿಮಾನ್ವಿತವಾಗಿತ್ತು, ವಿಷಯಗಳು ಅಸಾಧಾರಣವಾಗಿದ್ದವು. ನಂತರ ಮರುದಿನ ಎಲ್ಲ ಸುದ್ದಿಸಮಾಚಾರ ಬದಲಾಯಿತು. ಅದು ನಿಜವಾಗಿಯೂ ಅಸಾಧಾರಣ–ವಾಗಿತ್ತು. ವಾಸ್ತವದಲ್ಲಿ ಏನು ಸಂಭವಿಸಿತು ಎಂಬುದನ್ನು ನಾನು ನೋಡಲಿಲ್ಲ, ಏಕೆಂದರೆ ಹಲವಾರು ವರ್ಷಗಳಿಗಿಂತ ಮೊದಲು ಅದನ್ನು ನೋಡಲಾಗಿತ್ತು. ಆದರೆ ಅದು ಮಹತ್ವದ ವಿಷಯವಲ್ಲ. ಅದು ಒಳ್ಳೆಯದಾಗಿದೆ.

ಸದ್ಯ ಪರಿಗಣಿಸಬೇಕಾದ ವಿಷಯಗಳಲ್ಲಿ ಅಮೇರಿಕಾ ದೇಶವನ್ನು ಪರಿವರ್ತಿಸುವುದು ಒಂದಾಗಿದೆ; ಆದರೆ ಅದಕ್ಕೆ ಸಮಯ ಬೇಕಾಗುತ್ತದೆ.

ಹಾಗಾಗಿ ಸದ್ಯ ಪರಿಗಣಿಸಬೇಕಾದ ವಿಷಯಗಳಲ್ಲಿ ಇಂಡಿಯಾದ ದೇಶಗಳ ಮೈತ್ರಿಕೂಟ ಒಂದು ವಿಷಯ, ಮತ್ತು ಇನ್ನೊಂದು ಅಮೇರಿಕಾವನ್ನು ಪರಿವರ್ತನೆಗೆ ಒಳಪಡಿಸುವುದಾಗಿದೆ. 'ಮಾನವ ಏಕತೆಯ ಆದರ್ಶ' ಕುರಿತು ಶ್ರೀ ಅರವಿಂದರು ಕಲ್ಪನೆ ಮಾಡಿಕೊಂಡಿದ್ದ ಹಾಗೂ ವಿವರಿಸಿದ್ದ ರೀತಿಯಲ್ಲಿ ಇಂಡಿಯಾದ ದೇಶಗಳ ಮೈತ್ರಿಕೂಟ ಆಗಬೇಕಾಗಿದೆ ಮತ್ತು ಅಮೇರಿಕಾವನ್ನು ಪರಿವರ್ತಿಸುವುದು ಕೂಡ ಅದೇ ವಿಚಾರವನ್ನು ಒಳಗೊಂಡಿದೆ, ಶ್ರೀ ಅರವಿಂದರ ದಿವ್ಯಜ್ಞಾನಕ್ಕನುಸಾರವಾಗಿ ಇದೆ. ಆದರೆ ಅದಕ್ಕೆ ಸಮಯ ಬೇಕಾಗುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ: ಡಿಸೆಂಬರ 18, 1971** **– ಶ್ರೀಮಾತೆ**

*

**(ಕವಿತೆ)**

ಇದು ಮಾನವನ ಪ್ರಗತಿ, ಏಕೆಂದರೆ ಕಬ್ಬಿಣದ ಯುಗ
ಸುವರ್ಣಯುಗವನು ತಯಾರಿಸುತಿಹುದು. ನಾವು ಪಾಪವೆಂದು
ಕರೆಯುವುದು

ಅಂತರಂಗದ ಆಳದಿಂದ ಮಾನವನ ಬಿಟ್ಟುಕೊಡುವಿಕೆಗಳು ಮಾತ್ರ
ಅವನ ಪ್ರಯಾಣದಲಿ ಕಪ್ತಾನ ಅವನಿಗೆ ಮಾರ್ಗದರ್ಶನ ಮಾಡುತಿಹನು.

ಅನಿಷ್ಟವನು ಅವನು ಹೋರಾಟ ಹಾಗೂ ನೋವುಗಳೊಡನೆ ಹಿಂದೆ ಬಿಟ್ಟುಕೊಡುತಿಹನು,
ಕಾರಣ ಅದು ಅಂಟಿಕೊಳ್ಳುವುದು ಸತತ ಹಿಂತಿರುಗಿ ಬರುತಿಹುದು,
ಮತ್ತು ವೇದನೆಯ ಅಗ್ನಿಯಲಿ ಅದು ಭೀಕರವಾಗಿ ಉರಿಯುತಿಹುದು
ಅದು ಹೆಚ್ಚಿನ ಮಾಧುರ್ಯಕ್ಕಾಗಿ ಯೋಗ್ಯತೆಯನು, ಲಾಭಕ್ಕಾಗಿ ಬಲವನು ಗಳಿಸುವುದಕಾಗಿಹುದು.

**CWSA, 2/244** **– ಶ್ರೀ ಅರವಿಂದರು**

*

**ಸಂಪೂರ್ಣಾಹುತಿ – ಛಿನ್ನಮಸ್ತ**

ಯುಗಗಳಾದ್ಯಂತ ಪೃಥ್ವಿಯ ಮೇಲೆ ಹೊಸ ಸೃಷ್ಟಿ ಬಂದಾಗ ಇಲ್ಲವೆ ಪಾರ್ಥಿವ ವಾತಾವರಣದಲ್ಲಿ ಒಂದು ಹೊಸ ಪ್ರಜ್ಞೆಯ ಪ್ರಕಟಣೆಯಾದಾಗ, ಅದು ಬರುವುದಕ್ಕಿಂತ ಮೊದಲು ವಿನಾಶದ ಹಾಗೂ ವಿಭಜನೆಯ ಒಂದು ಹಂತವಿರುತ್ತಿತ್ತು. ಶಿವನ ನೃತ್ಯಕ್ಕೆ ಎರಡು ಮುಖಗಳಿವೆ– ಸೃಷ್ಟಿಸುವ ದಿವ್ಯಾನಂದ ಹಾಗೂ ನಾಶಮಾಡುವುದರಲ್ಲಿರುವ ಸಂತೋಷ.– ಲಾಸ್ಯ ಮತ್ತು ತಾಂಡವ, ಇಲ್ಲಿಯವರೆಗೆ ಅವೆರಡೂ ಅವಶ್ಯವಾಗಿದ್ದವು– ಒಂದಕ್ಕೊಂದು ಪೂರಕವಾಗಿತ್ತು.

ವಿನಾಶದ ಅರ್ಥ ಅನವಶ್ಯಕವಾದ, ಯೋಗ್ಯವಲ್ಲದ, ಹೊಸದಾಗಿ ಬರುವುದೆಲ್ಲವನ್ನು ಒಪ್ಪಿಕೊಳ್ಳಲು ತಿರಸ್ಕರಿಸುವ, ಅದಕ್ಕೆ ಅಡೆತಡೆ ಒಡ್ಡುವ, ಅದನ್ನು ನಿರಾಕರಿಸಲು ಪ್ರಯತ್ನಿಸುವ– ಅನಿವಾರ್ಯವಾಗಿ ಬರಲಿರುವ ಹೊಸದರೊಡನೆ ಅಸಾಮರಸ್ಯದಲ್ಲಿರುವ ಎಲ್ಲವನ್ನೂ ನಾಶಮಾಡುವುದಾಗಿದೆ. ಪಾರ್ಥಿವ ಉತ್ಕ್ರಾಂತಿ ಪ್ರಗತಿಯ ಮುನ್ನಡೆಯಾಗಿರುತ್ತದೆ, ನೀವು ಅದರ ವೇಗದೊಂದಿಗೆ ಹೆಜ್ಜೆ ಇರಿಸಲು ವಿಫಲರಾದರೆ ನೀವು ಮಾರ್ಗ ಬಿಟ್ಟು ಹೊರಗೆ ಹೋಗಬೇಕು, ಅದಕ್ಕೂ ಹೆಚ್ಚಾಗಿ ನಿಮ್ಮನ್ನು ಮಾರ್ಗದಿಂದ ತೆಗೆದು ಹಾಕಲಾಗುವುದು.

ನೀವು ಹೆಚ್ಚು ಹಳೆಯ ಸೃಷ್ಟಿಯಲ್ಲಿದ್ದರೆ ಇಲ್ಲವೆ, ಕನಿಷ್ಟಪಕ್ಷ, ಅದರೊಡನೆ ಪ್ರೇಮದಿಂದಿದ್ದರೆ, ಅದಕ್ಕೆ ಅಂಟಿಕೊಂಡಿದ್ದರೆ, ಅದರ ವಿನಾಶ, ನಿಮಗೆ ನೋವು ತರಿಸುವಂತಹದು, ಭಯವನ್ನುಂಟು ಮಾಡುವಂತಹದು ಹಾಗೂ ಜುಗುಪ್ಸೆ ಹುಟ್ಟಿಸುವಂತಹದು ಆಗಿರುತ್ತದೆ, ಆದರೆ ನೀವು ಹೊಸದಾದುದಕ್ಕಾಗಿ ಅಭೀಪ್ಸೆಪಟ್ಟರೆ, ಭವಿಷ್ಯತ್ತಿನ ಅರುಣೋದಯದಲ್ಲಿ ಭಾಗವಹಿಸಲು ಇಷ್ಟಪಟ್ಟರೆ, ಅದಾಗಲೆ ನೀವು ಅದಕ್ಕೆ ಸೇರಿರುತ್ತೀರಿ, ನಿಮಗೆ ಈ ವಿನಾಶದ ಆವಶ್ಯಕತೆಯ ಬಗ್ಗೆ ಭಾವನೆ ತಂದುಕೊಂಡಿರುತ್ತೀರಿ ಮತ್ತು ಕಾರ್ಯವನ್ನು ಅವಸರಪಡಿಸುವುದಕ್ಕೆ ಅದನ್ನು ಸ್ವಾಗತಿಸುತ್ತೀರಿ ಮತ್ತು ಅದರಲ್ಲಿ ಹರ್ಷ ಕಂಡುಕೊಳ್ಳುತ್ತೀರಿ. ವಿನಾಶದ ಸಂತೋಷದಲ್ಲಿ ಸಂತೋಷಪಡುತ್ತೀರಿ– ಕನಿಷ್ಟಪಕ್ಷ ಶಿವ ಸಂತೋಷಪಡುತ್ತಾನೆ, ದೈವೀ ಶಕ್ತಿಯೂ ಕೂಡ ಸಂತೋಷಪಡುತ್ತಿರುವಂತೆ ಕಂಡು ಬರುತ್ತದೆ.

ಅಂತಹದೇನೋ ಒಂದು, ವಾಸ್ತವದಲ್ಲಿ ಅದೇ ವಿಷಯ ಸಂಭವಿಸುತ್ತಿದೆ: ಮಹಾಕಾಳಿ ತಯಾರಿಯ ತನ್ನ ಕಾರ್ಯವನ್ನು ಪ್ರಾರಂಭಿಸಿದ್ದಾಳೆ, ಅದು ನಿರ್ಮೂಲ ಮಾಡುವುದಾಗಿದೆ– ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿ ಇವರ ಮಾರ್ಗವನ್ನು ಶುಚಿಗೊಳಿಸುವುದಕ್ಕಾಗಿ ವಿನಾಶ ಹಾಗೂ ವಿಭಜನೆಯನ್ನು ಕೈಕೊಳ್ಳಬೇಕಾಗಿದೆ– ಮಹೇಶ್ವರಿಯು ಅನಂತ ಪ್ರೇಮ ಹಾಗೂ ಕರುಣೆಯೊಂದಿಗೆ ಅದಕ್ಕೆ ಅನುಮತಿ ನೀಡುತ್ತಾಳೆ, ಆಧಾರ ಒದಗಿಸುತ್ತಾಳೆ. ದೈವೀಮಾತೆ ಇಷ್ಟೊಂದು ಪ್ರೇಮದಿಂದ ಹಾಗೂ ಕಾಳಜಿಯಿಂದ ನಿರ್ಮಿಸಿದ ಮತ್ತು ಇನ್ನೂ ನಿರ್ಮಾಣ ಮಾಡುತ್ತಿರುವ ಹೊಸ ಜಗತ್ತು ತಯಾರಾಗಿದೆ– ಪ್ರಕಟವಾಗಲು, ಭೌತಿಕ ಕ್ಷೇತ್ರದಲ್ಲಿ ತನ್ನನ್ನು ತೆರೆದು ತೋರಿಸಲು ತಯಾರಾಗಿದೆ, ಪೃಥ್ವಿಯ ಮೇಲೆ ಭೌತಿಕ ರೂಪ ತಾಳಲು ಕಾದುಕೊಂಡಿದೆ, ಆದರೆ ಪೃಥ್ವಿ ಇನ್ನೂ ತಯಾರಾಗಿಲ್ಲ, ಅದಕ್ಕೂ ಹೆಚ್ಚಾಗಿ ಮನುಷ್ಯ ಇನ್ನೂ ತಯಾರಾಗಿಲ್ಲ, ತಯಾರಾಗುವುದನ್ನು ತಿರಸ್ಕರಿಸುತ್ತಿದ್ದಾನೆ. ಅದರ ಹಳೆಯ ಮೃತ ಜಗತ್ತಿಗೆ ಅಂಟಿಕೊಳ್ಳುತ್ತಿದ್ದಾನೆ– ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳು–ತ್ತಿದ್ದಾನೆ, ಮಿಥ್ಯೆ ಮತ್ತು ಕುಟಿಲತೆಗಳ ಈ ಆಟವನ್ನು ಪ್ರೀತಿಸುತ್ತಾನೆ. ಬಹುಶಃ ದೈವೀಸತ್ಯ ಅವನ ಅಹಂಮನ್ಯತೆಯ ಸ್ವಭಾವಕ್ಕೆ ಮಬ್ಬಾದ ಅಂದಚೆಂದ (make up) ಕ್ಕೆ ಅತ್ಯಂತ ಉಜ್ವಲವಾದದ್ದು ಹಾಗೂ ಹೆಚ್ಚಿನ ರೀತಿಯಲ್ಲಿ ಒತ್ತಾಯ ತರುವಂತಹದು ಆಗಿರಬಹುದು– ಹಾಗಾಗಿ ಅವನು ಹೊಸ ಪ್ರಜ್ಞೆಯನ್ನು ಹೊಸ

ನೈಜತೆಯನ್ನು ನಿರಾಕರಿಸುತ್ತಾನೆ, ತನಗೆ ಸಾಧ್ಯವಿದ್ದಷ್ಟು ಅವುಗಳಿಗೆ ಅಡೆತಡೆಯನ್ನುಂಟು ಮಾಡುತ್ತಾನೆ. ದೈವೀಮಾತೆ ತನ್ನ ಅನಂತ ಪ್ರೇಮದಿಂದ ಈ ನಿರಾಕರಣೆಯನ್ನು ತನ್ನ ಮೇಲೆ ತೆಗೆದುಕೊಳ್ಳಲು ಪ್ರಯತ್ನಿಸಿದಳು, ಕೈಗೆತ್ತಿಕೊಳ್ಳಲು ಸಾಧ್ಯವಿದ್ದಷ್ಟು ಅಂಶಗಳಿಗೆ ಮನವರಿಕೆ ಮಾಡಿಕೊಡಲು ಹಾಗೂ ಅವುಗಳನ್ನು ಬದಲಿಸಲು ಪ್ರಯತ್ನ ಮಾಡಿದಳು,– ನಂತರ ಹೆಚ್ಚಿನದೇನನ್ನು ಮಾಡಲು ಸಾಧ್ಯವಾಗದಂತಾದಾಗ ಹಿಂತೆಗೆದುಕೊಂಡಳು, ಅನಿವಾರ್ಯದದ್ದನ್ನು ಕೈಕೊಳ್ಳಲು ತನ್ನ ಉಳಿದ ಅಂಶಗಳನ್ನು ಬಿಟ್ಟುಕೊಟ್ಟಳು.– ಅದು ಹಳೆಯ ಕಟ್ಟುನಿಟ್ಟಿನ ಜಗತ್ತನ್ನು ಮುರಿದು ಹಾಕುವುದಿತ್ತು. ಪೃಥ್ವಿಗೆ ಹಾಗೆಯೇ ಮನುಷ್ಯನಿಗೂ ಕೂಡ ಕೊನೆಗೆ ಬರಬೇಕಾದ ಒಳ್ಳೆಯದಕ್ಕೆ ಅನಿವಾರ್ಯವಾಗಿತ್ತು.

ಕಾರ್ಯಪ್ರಾರಂಭವಾಗಿದೆ – ಅದನ್ನು ಶಿವನ ನೃತ್ಯ, ಇಲ್ಲವೆ ತಾಂಡವ ಎಂದು ಕರೆಯಬಹುದು ಇಲ್ಲವೆ ಭಯಾನಕ ಮಾತೆಯಾದ ಕಾಳಿಯ ನೃತ್ಯ ಎಂದು ಕರೆಯಬಹುದು. ಅದು ಪ್ರಾರಂಭವಾಗಿದೆ ಮತ್ತು ಅದು ತನ್ನ ಮಾರ್ಗದಲ್ಲಿ ಹೆಚ್ಚಿನ ವೇಗದೊಂದಿಗೆ ಮುಂದುವರಿಯುತ್ತಿದೆ. ವಿನಾಶ, ವಿಭಜನೆ, ಕೊಳೆಯುವಿಕೆ – ಹೌದು ಅದು ಮೊದಲ ಪರಿಣಾಮ, ನಾವು ಇಷ್ಟಪಡಲಿ, ಪಡದೇ ಇರಲಿ ಈಗಾಗಲೇ ಅದಕ್ಕೆ ಸಾಕ್ಷಿಯಾಗಿದ್ದೇವೆ, ಹಾಗೂ ಅದರಲ್ಲಿ ಭಾಗವಹಿಸುತ್ತಿದ್ದೇವೆ. ಅದು ಪರಮೋಚ್ಚ ಪ್ರಭುವಿನ ಶಾಸನ – ಅದು ಸಂಭವಿಸಲೇಬೇಕು. ದೈವೀ ಸತ್ಯಕ್ಕೆ ಅಂಟಿಕೊಂಡಿರುವವರು ಉಳಿದುಕೊಳ್ಳುತ್ತಾರೆ. ಮಿಥ್ಯೆಯ ಜೊತೆಗೆ ಸಂಧಾನ ಕೈಕೊಳ್ಳುವವರು ನಾಶವಾಗುತ್ತಾರೆ – ಮನುಷ್ಯ ಪ್ರಜ್ಞಾಪೂರ್ವಕವಾಗಿ ಇಲ್ಲವೆ ಅಪ್ರಜ್ಞೆಯಿಂದ ಆಯ್ಕೆ ಮಾಡಿಕೊಳ್ಳಲೇಬೇಕು, ಬೇರೆ ಮಾರ್ಗವಿಲ್ಲ.

ಅದು ಒಂದು ಅನಿವಾರ್ಯವಾದ ಹಂತ, ನೀವು ದೈವೀ ಸತ್ಯಕ್ಕಾಗಿ ಅಭೀಪ್ಸೆ–ಪಡುವವರಾಗಿದ್ದರೆ ಗೋಳಾಡುವುದಕ್ಕಾಗಲಿ ಇಲ್ಲವೆ ದುಃಖಪಡುವುದಕ್ಕಾಗಲಿ ಅಲ್ಲಿ ಏನೂ ಇರುವುದಿಲ್ಲ.

ಸ್ವಾಭಾವಿಕವಾಗಿ ಮುಂದಿನ ಹಂತ ಭಗ್ನಾವಶೇಷವನ್ನು ಸ್ವಚ್ಛಗೊಳಿಸುವು–ದಾಗಿರುತ್ತದೆ – ಪೂರ್ತಿಯಾಗಿ ಸ್ವಚ್ಛ ಮಾಡುವುದಾಗಿರುತ್ತದೆ – ಸತ್ಯಕ್ಕೆ ವಿರುದ್ಧವಾದದ್ದನ್ನೆಲ್ಲ ನಿರ್ಮೂಲ ಮಾಡುವುದು, ಮೃತವಾದ ಜಗತ್ತಿನ

ಅವಶೇಷವನ್ನು ತೆಗೆದುಹಾಕುವುದು; ಹೊಲಸಾದುದು ಹಾಗೂ ಮಬ್ಬಾದುದನ್ನೆಲ್ಲ ತೆಗೆದು ಹಾಕಿ ಕ್ಷೇತ್ರವನ್ನು ನಿರ್ಮಲಗೊಳಿಸುವುದು ಇದೆಲ್ಲ ಇರುತ್ತದೆ. ಏಕೆಂದರೆ ಆಗ ಮಾತ್ರ ಹೊಸ ನೈಜತೆ ಮುಂದೆ ಬರಲು ಶಕ್ತವಾಗುವುದು. ದೈವೀ ಮಾತೆಯ ಮಣಿಹ ನೆರವೇರಿಕೆ ಕಂಡುಕೊಳ್ಳುವುದು.

ಹೊಸ ಸೃಷ್ಟಿ ಅದಾಗಲೆ ಅಲ್ಲಿದೆ – ತನ್ನನ್ನು ರೂಪಿಸಿಕೊಳ್ಳುತ್ತಿರುತ್ತದೆ – ಆಶ್ರಮದಲ್ಲಿ ಹಾಗೂ ಬಾಹ್ಯದಲ್ಲಿ ಸಂಭವಿಸುವುದೆಲ್ಲ ಹಾಗಾಗುತ್ತಿದೆ, ಅದರಿಂದಾಗಿ ಹೊಸ ಸೃಷ್ಟಿ ಹೆಚ್ಚು ಬೇಗನೆ ಮುಂದೆ ಬರುವಂತಾಗುತ್ತದೆ. ಅವಳು ಬಾಹ್ಯ ಚೌಕಟ್ಟನ್ನು ಮುರಿದು ಹಾಕುತ್ತಿದ್ದಾಳೆ. ಅದರ ಅಂತರಂಗದಲ್ಲಿ ಆ ಹೊಸ ನೈಜತೆಯನ್ನು ಸ್ಥಾಪಿಸಲಾಗಿದೆ ಇಲ್ಲವೆ ಅದನ್ನು ಮೃತವಾದ ತೊಗಟೆ (Shell) ಎಂದು ಕರೆಯಬಹುದು. ಅದನ್ನು ಮುರಿದು ಹಾಕಲಾಗುತ್ತಿದೆ, ಅದರಿಂದಾಗಿ ಹೊಸ ದೈವೀ ನೈಜತೆ ಹೊರಬರುವಂತಾಗುತ್ತದೆ. ಅದು ದೈವೀ ಮಾತೆ ತನ್ನದೇ ದಿವ್ಯಾತ್ಮದೊಡನೆ ಕೈಕೊಂಡ ಕ್ರಿಯೆ. ಅವಳು ತನ್ನ ಛಿನ್ನಮಸ್ತ ರೂಪವನ್ನು ಧಾರಣ ಮಾಡಿದ್ದಾಳೆ. ಅವಳು ವಿನಾಶ ಮಾಡುತ್ತಿರುವ ವಿಷಯಗಳು, ಅವಳವೇ ಆತ್ಮಗಳಾಗಿವೆ, ಅವಳು ತನ್ನದೇ ದೇಹದ ಹಳೆಯ, ಉಪಯೋಗಕ್ಕೆ ಬಾರದ ಅಂಗಗಳನ್ನು ತೊಡೆದು ಹಾಕುತ್ತಿರುವಂತಿದೆ. ನಾವು ಶ್ರೀ ಅರವಿಂದರು ಬರೆದಿದ್ದ ಸಾಲುಗಳನ್ನು ನೆನಪಿಗೆ ತಂದುಕೊಳ್ಳಬಹುದು.

. . . "ಗಳಿಗೆ ಬಹಳಷ್ಟು ಸಲ ಭಯಾನಕವಾಗಿರುತ್ತದೆ, ಅದರಲ್ಲಿ ಒಂದು ಅಗ್ನಿ, ಸುಂಟರಗಾಳಿ, ಚಂಡಮಾರುತ, ದೇವನ ಕ್ರೋಧದ ಮದ್ಯಗಾಣದ ಮೆಟ್ಟುವಿಕೆ ಇವೆಲ್ಲ ಇರುತ್ತವೆ, ಆದರೆ ತನ್ನ ಉದ್ದೇಶದ ಸತ್ಯದ ಮೇಲೆ ನಿಲ್ಲಬಲ್ಲವನು ನಿಲ್ಲಬಲ್ಲವನಾಗಿರುತ್ತಾನೆ; ಅವನು ಪತನಗೊಂಡರೂ ಮತ್ತೆ ಮೇಲಕ್ಕೆದ್ದು ಬರುತ್ತಾನೆ, ಗಾಳಿಯ ರೆಕ್ಕೆಗಳ ಮೇಲೆ ಅವನು ಸಾಗಿ ಹೋಗುತ್ತಿರುವಂತೆ ತೋರಿಬಂದರೂ ಮತ್ತೆ ಮರಳಿ ಬರುತ್ತಾನೆ. ಪ್ರಾಪಂಚಿಕ ಯುಕ್ತವಿವೇಚನೆ ನಿನ್ನ ಕಿವಿಯಲ್ಲಿ ಬಹಳ ಹತ್ತಿರದಿಂದ ಪಿಸುಗುಡುವುದಕ್ಕೆ ಅನುವು ಮಾಡಿಕೊಡುವುದು ಬೇಡ, ಏಕೆಂದರೆ ಅದು ಅನಿರೀಕ್ಷಿತವಾದದ್ದರ ಗಳಿಗೆ."

ದೇವ ಮುಹೂರ್ತ.

**(Collected Works of Nolini Kanta Gupta, Vol. 6, pp.256-258**

*

**(ಕವಿತೆ)**

ದೈತ್ಯ ರೆಕ್ಕೆಗಳೊಡನೆ ಅವನು ಒಳ್ಳೆಯದರತ್ತ ಮೇಲಕ್ಕೇರುತಿಹನು
ಮತ್ತು ಇದೇ ಅವನ ಉಚ್ಚ ಅಶಾಂತಿಗೆ ಕಾರಣವಾಗಿಹುದು
ಕಾರಣ ಅವನು ಅನಂತಗಳಿಂದ ಮರ್ತ್ಯ ವಸ್ತು–ವಿಷಯಗಳೊಂದಿಗೆ
ಅಮರ್ತ್ಯವಾಗಿ ನಿರ್ಮಾಣ ಮಾಡಲು ಬಂದಿಹನು;

ಹೆಚ್ಚುತ್ತ ಹೋಗುತ್ತಿರುವ ಆತ್ಮದೊಂದಿಗೆ ತುಂಬಿಕೊಳ್ಳುವುದಕಾಗಿ ದೇಹ
ಶ್ರಮಿಸುತ್ತಿರುವ ಪೃಥ್ವಿಯ ಮೇಲೆ ಸ್ವರ್ಗದ ಹಕ್ಕನು ಹಿಗ್ಗಿಸುತಿಹುದು
ಹಾಗೂ ಮೃತ್ಯುವಿನಿಂದ ಹೆಚ್ಚು ದೈವಿಕ ಜನ್ಮದತ್ತ ಏರಿ ಹೋಗುತಿಹುದು
ಅಮರ್ತ್ಯ ಸಂಕಲ್ಪದ ಹಿಡಿತಕೊಳಗಾಗಿಹುದು, ಆಧಾರ ಪಡೆದಿಹುದು.

**CWSA, 2/244** **– ಶ್ರೀ ಅರವಿಂದರು**

*


## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ನವೆಂಬರ್ 2016ರ ಗುರುವಾರದಂದು “ಶ್ರೀಮಾತೆಯವರ ಮಹಾಸಮಾಧಿ”ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ರಿಂದ 10.20ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.30 ರಿಂದ 12.00 ಗಂಟೆಯವರೆಗೆ On ‘‘The Symbol Dawn’’ in Sri Aurobindo’s ‘Savitri’ ಎಂಬ ವಿಷಯದ ಬಗ್ಗೆ ಶ್ರೀ ಭಾಸ್ಕರ ರೆಡ್ಡಿ, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 24ನೇ ನವೆಂಬರ್ 2016ರ ಗುರುವಾರದಂದು "ಶ್ರೀ ಅರವಿಂದರ ಸಿದ್ಧಿ"ಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 5.00 ಗಂಟೆಯಿಂದ 6.30ರವರೆಗೆ ಡಾ. ಹರೀಶ್ ಜಿ.ಬಿ. ರವರಿಂದ "Sanatana Dharma in Sri Aurobindo's Vision" ಎಂಬ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.



*When mind is still,*
*then Truth gets her chance to be heard*
*in the purity of the silence.*

- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.